ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ

ಒಂದು ಅಸಾಧಾರಣ ಸಾಹಸಗಾಥೆ

₹ 14

ನವೆಂಬರ್-2014

ಪ್ರವಾಸ 2014/2015

ಹೋಟೆಲ್ ರೂಂ ಹಾಗೂ ನಮ್ಮ ಊಟೋಪಚಾರದೊಂದಿಗೆ

ಕಾಶಿ - ನೇಪಾಳ (ಮುಕ್ತಿನಾಥ್) : 16 ದಿನಗಳು
Apr 2015

ಕಾಶಿ, ಅಯೋಧ್ಯಾ, ಕಠ್ಮಂಡು, ಪೋಖ್ರಾ, ಮುಕ್ತಿನಾಥ್ (Optional), ಮನೋಕಾಮನ, ಘೋರಖ್‌ಪುರ್

ಶಕ್ತಿಪೀಠಗಳು ಮತ್ತು ಸಿಮ್ಲಾ ಮನಾಲಿ ಸ್ಪೆಷಲ್ : 20 ದಿನಗಳು
Mar 2015

ಚಂಡೀಘರ್, ಸಿಮ್ಲಾ, ಕುಫ್ರಿ, ಕುಲು ಮನಾಲಿ, ರೋತಾಂಗ್ ಪಾಸ್ (Optional), ವಶಿಷ್ಠ, ಬೈಜ್‌ನಾಥ್, ಚಾಮುಂಡ, ನೈನಾದೇವಿ, ಖಾಂಗ್ರಾ, ಚಿಂತಪೂರ್ಣಿ, ಜ್ವಾಲಾಮುಖಿ, ಧರ್ಮಶಾಲಾ, ವೈಷ್ಣವೀದೇವಿ, ವಾಘಾ ಬಾರ್ಡರ್ (ಇಂಡೋ-ಪಾಕ್ ಬಾರ್ಡರ್), ಅಮೃತ್‌ಸರ್, ಕುರುಕ್ಷೇತ್ರ, ಶಾಕಂಬರಿ, ಹರಿದ್ವಾರ, ನವದೆಹಲಿ

ಕೋಲ್ಕತ್ತಾ - ಡಾರ್ಜಿಲಿಂಗ್ - ಪೂರಿ : 16 ದಿನಗಳು
Mar 2015

ಡಾರ್ಜಿಲಿಂಗ್, ಗ್ಯಾಂಗ್‌ಟಕ್, ಸಿಲಿಗುರಿ, ಕೋಲ್ಕತ್ತಾ, ಪೂರಿ, ಕೊನಾರ್ಕ್, ಚಿಲ್ಕ ಲೇಕ್, ಭುವನೇಶ್ವರ್

ದ್ವಾರಕ ಮತ್ತು ಅಷ್ಟ ಜ್ಯೋತಿರ್ಲಿಂಗ : 24 ದಿನಗಳು
Nov 17

ಪುಷ್ಕರ, ನಾಥದ್ವಾರ, ಕಾಂಕ್ರೋಲಿ, ಏಕಲಿಂಗ್ಜಿ, ಉದಯಪುರ, ಮೌಂಟ್ ಅಬು, ಮಾತೃಗಯಾ, ಶಿರಡಿ, ದ್ವಾರಕ, ಬೇಟ್‌ದ್ವಾರಕ, ನಾಗೇಶಂ, ಮೂಲ ದ್ವಾರಕ, ಪೋರಬಂದರ್, ವಿರಾವಲ್, ಸೋಮನಾಥ್, ಡಾಕೋರ್, ಅಹಮದಾಬಾದ್, ಉಜ್ಜೈನಿ, ಓಂಕಾರೇಶ್ವರ, ಪರ್ಲಿ, ಔರಂಗಾಬಾದ್, ಘೃಷ್ಣೇಶ್ವರ, ನಾಸಿಕ್, ತ್ರಿಯಂಬಕ್, ಶಿರಡಿ, ಶನಿಸಿಂಗನಾಪುರ, ಭೀಮಾಶಂಕರ್

ದಕ್ಷಿಣ ಭಾರತ : 10 ದಿನಗಳು
Nov 24

ಗುರುವಾಯೂರ್, ಕಾಲಡಿ, ತಿರುವನಂತಪುರ, ಸುಚೀಂದ್ರಂ, ಕೋವಲಂ ಬೀಚ್, ಕನ್ಯಾಕುಮಾರಿ, ರಾಮೇಶ್ವರಂ, ಮಧುರೈ, ತಿರುಚಿ, ಶ್ರೀರಂಗಂ, ತಂಜಾವೂರ್, ಕುಂಭಕೋಣಂ, ಚಿದಂಬರಂ, ತಿರುವಣ್ಣಾಮಲೈ, ನವಗ್ರಹ ದೇವಸ್ಥಾನಗಳು

ಮಿನಿ ಆಂಧ್ರ : 05 ದಿನಗಳು
Dec / Jan 2015

ಮಂತ್ರಾಲಯ, ಶ್ರೀಶೈಲ, ಮಹಾನಂದಿ, ಅಹೋಬಿಲಂ (ನವನರಸಿಂಹ)

ಅಂಡಮಾನ್ ದ್ವೀಪ : 06 ದಿನಗಳು
Jan / Feb 2015

ಕೈಲಾಸ ಪರ್ವತ ಮತ್ತು ಮಾನಸ ಸರೋವರ : 14 ದಿನಗಳು
Avail **Rs. 30,000/-** *subsidy**

May June July 2015

ಶ್ರೀ ಹನ್ಸಾ ಟ್ರಾವೆಲ್ಸ್

SHRI HANSAA TRAVELS

RECOGNISED BY DEPARTMENT OF TOURISM, GOVT. OF KARNATAKA

No. 640, 40th Cross (Near Prabha Eye Clinic), 8th Block, Jayanagar, Bangalore - 560 070.

☎: (080) 26543891 / 26643276 Mobile : (0) 9341415612 / 9341215612

e-mail : hansaatravels@gmail.com web : www.hansaatravels.com

ನವೆಂಬರ್-2014

ಸಂಪುಟ 15 ಸಂಚಿಕೆ 11

ವಿವೇಕಪ್ರಭ

5 ಪ್ರಾರ್ಥನೆ ಮತ್ತು ಸೂಕ್ತಿಪ್ರಭ
7 ಸಂಪಾದಕೀಯ: ಶಾಂತಸಮುದ್ರದ ಅಲೆಗಳ ಮೇಲೆ
10 ರಾಮಕೃಷ್ಣ ವಚನವೇದದಿಂದ: ವೈರಾಗ್ಯ
11 ಸ್ವಾಮಿ ಪ್ರೇಮಾನಂದರು ಸ್ವಾಮಿ ಅಶೋಕಾನಂದ
14 ಸ್ವಾಮಿ ವಿಜ್ಞಾನಾನಂದರ ಉಪದೇಶಗಳು
15 ಸ್ವಾಮಿ ಸುಬೋಧಾನಂದರ ಉಪದೇಶಗಳು
16 ನೆನಪಿನಂಗಳದಲ್ಲಿ ಮೂವರು ಶ್ರೇಷ್ಠ ಸಂನ್ಯಾಸಿಗಳು ಸ್ವಾಮಿ ಶ್ರೀಧರಾನಂದ
17 ಸ್ವಾಮಿ ವಿವೇಕಾನಂದರ ದಿವ್ಯವಾಣಿ
18 ಸ್ವಾಮಿ ಅಖಂಡಾನಂದರ ಸ್ಮೃತಿಸಂಚಯ - ಭಾಗ 2 ಸ್ವಾಮಿ ನಿರಾಮಯಾನಂದ
23 ಭಗವದ್ಗೀತಾ ತತ್ತ್ವಸೌರಭ: ವಿಶ್ವರೂಪದರ್ಶನ ಸ್ವಾಮಿ ನಿತ್ಯಸ್ಥಾನಂದ
26 ಆಧ್ಯಾತ್ಮಿಕ ಸಂಭಾಷಣೆ : ಸ್ವಾಮಿ ಭೂತೇಶಾನಂದಜಿಯವರೊಂದಿಗೆ
28 ಯುವಚೇತನ: ಒಂದು ಅಸಾಧಾರಣ ಸಾಹಸಗಾಥೆ
31 ಇದು ನನ್ನಿಂದಲೇ
33 ಜಪಾನಿನ ಕತೆಗಳು: ಬುಗ್ಗೆಯ ನೀರು
34 ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು ಡಾ. ಕೆ. ಅನಂತರಾಮು
36 ಕವನ: ಅವನ ಪದ ಸೋಂಕಿದರೆ ಶಿವನಾಗನೇ ಜೀವ ! ಸ್ವಾಮಿ ಹರ್ಷಾನಂದ
37 ಪುಸ್ತಕ ಪರಿಚಯ: 'ಅಂತರ್ಮುಖಿ'-ಸ್ವಾಮಿ ಬ್ರಹ್ಮಾನಂದರ ಸ್ಮೃತಿ ಸಂಕಲನ
38 ಚಿತ್ರಕಥೆ: ವಿಶ್ವಾಮಿತ್ರನ ಅನುಕಂಪ
42 ಸುದ್ದಿ ಸಂಚಯ







ವ್ಯವಸ್ಥಾಪಕ ಸಂಪಾದಕರು
ಸ್ವಾಮಿ ಮುಕ್ತಿದಾನಂದ
ಸಂಪಾದಕರು
ಸ್ವಾಮಿ ಜ್ಞಾನಯೋಗಾನಂದ
ನೆರವು:
ಆರ್. ಎಸ್. ಪೂರ್ಣಾನಂದ
ಎನ್. ಎಸ್. ಶಾರದಾಪ್ರಸಾದ್
ಡಾ. ಕೆ. ಎಲ್. ಪ್ರಸನ್ನಾಕ್ಷಿ
ಡಾ. ಎಚ್. ಪಾಂಡುರಂಗ ವಿಠಲ

ಅಕ್ಷರ ಜೋಡಣೆ
ಶ್ರೀರಾಮಕೃಷ್ಣ ಆಶ್ರಮ, ಮೈಸೂರು
ಮುದ್ರಣ
ಮಯೂರ್ ಗ್ರಾಫಿಕ್ಸ್, ಬೆಂಗಳೂರು

E-mail:
vivekaprabha@hotmail.com
kannada.vivekaprabha@gmail.com
Website: vivekaprabha.net
ಫೋನ್ : 9481533505

ಮುಖಪುಟ:
ಎವರೆಸ್ಟ್ ಶಿಖರ,
ನೇಪಾಳ

ಈ ಪತ್ರಿಕೆಯ ಧ್ಯೇಯ

ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.
– ಸ್ವಾಮಿ ವಿವೇಕಾನಂದ

ಚಂದಾ ವಿವರ : ಬಿಡಿ ಪ್ರತಿ: ₹ 14; ವಾರ್ಷಿಕ: ₹ 140; ಮೂರು ವರ್ಷ: ₹ 375; ಆಜೀವ (25 ವರ್ಷ): ₹ 3,000; ಪೋಷಕ ಸಹಾಯಧನ: ₹ 5,000 ಅಥವಾ ಹೆಚ್ಚು. ವಿದೇಶಗಳಿಗೆ: (ಏರ್‌ಮೇಲ್) ವಾರ್ಷಿಕ: $20; ಮೂರು ವರ್ಷ: $60; ಆಜೀವ (25 ವರ್ಷ): $300; ಪೋಷಕ ಸಹಾಯಧನ: $600 ಆಥವಾ ಹೆಚ್ಚು.

ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳಲ್ಲಿನ ಅಭಿಪ್ರಾಯಗಳು ಲೇಖಕರವು. ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಜಾಹೀರಾತುಗಳಲ್ಲಿನ ಮಾಹಿತಿಗಳ ನಿಖರತೆಗೆ ಈ ಪತ್ರಿಕೆ ಜವಾಬ್ದಾರಿಯಲ್ಲ. ಈ ಪತ್ರಿಕೆಯಲ್ಲಿನ ಯಾವ ಭಾಗವನ್ನೂ ಪ್ರಕಾಶಕರ ಲಿಖಿತ ಅನುಮತಿ ಇಲ್ಲದೆ ಬೇರೆಡೆ ಪ್ರಕಟಿಸುವಂತಿಲ್ಲ.

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

Orchid Travel & Tours

Book early Get Discount

98, 1st Floor, D.V.G. Road, Basavanagudi, Bangalore - 560 004.

(All Inclusive of Food, Accomodation, Entry Ticket & Air Ticket)

www.orchidtours.net

ದೀಪಾವಳಿ ಹಬ್ಬದ ಪ್ರಯುಕ್ತ ವಿಶೇಷ ರಿಯಾಯಿತಿ ದರದಲ್ಲಿ ವಿದೇಶಿ ಪ್ರವಾಸ



3 ದಿನಗಳ ಅಹೋಬಿಲಂ ನವನಾರಸಿಂಹ ಪ್ರವಾಸ

ಪ್ರವಾಸ ಸ್ಥಳಗಳು: ಜ್ವಾಲಾನರಸಿಂಹ, ಪಾವನನರಸಿಂಹ, ವರಹಾನರಸಿಂಹ, ಕಾರಂಜಿನರಸಿಂಹ, ಮಾಲೋಲನರಸಿಂಹ, ಯೋಗನರಸಿಂಹ, ಭಾರ್ಗವನರಸಿಂಹ, ಉಗ್ರನರಸಿಂಹ, ಛತ್ರವಟನರಸಿಂಹ ಹಾಗೂ ಕೆಳಗಿನ ಲಕ್ಷ್ಮೀನರಸಿಂಹ

ಹೊರಡುವ ತಿಂಗಳು : ಅಕ್ಟೋಬರ್, ನವೆಂಬರ್, ಡಿಸೆಂಬರ್

ಸಂಪರ್ಕಿಸಿ
9900080792
9900080794
9900080797

7 ದಿನಗಳ ಸಿಂಗಾಪುರ – ಮಲೇಶಿಯ ಪ್ರವಾಸ

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್, ಬರ್ಡ್‌ಪಾರ್ಕ್, ಸಾಂಗ್ ಆಫ್ ಸೀ

ಮಲೇಶಿಯ : ಕೌಲಲೊಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ, ಜಂಟಿಂಗ್ ಹೈಲ್ಯಾಂಡ್, ಜುಹೊರ್‌ಬರ್ ಸಿಟಿ ಟೂರ್

ಹೊರಡುವ ತಿಂಗಳು : ನವಂಬರ್, ಜನವರಿ 2015

ಸಂಪರ್ಕಿಸಿ
9900080796
9900080793
9900080797



15 ದಿನಗಳ ಗ್ರ್ಯಾಂಡ್ ಯುರೋಪ್ ಪ್ರವಾಸ

ಯು.ಕೆ. ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್ ಆಸ್ಟ್ರೀಯಾ, ಲಿಚೆನ್‌ಟೆನ್‌ಸ್ಟೈನ್, ಇಟಲಿ, ವ್ಯಾಟಿಕನ್

ಹೊರಡುವ ತಿಂಗಳು : ಏಪ್ರಿಲ್ 2015

ಸಂಪರ್ಕಿಸಿ
9900080794
9900080796

10 ದಿನಗಳ ಚೈನಾ, ಹಾಂಕಾಂಗ್, ಮಕಾವ್ ಪ್ರವಾಸ

ಆಕ್ರೋಬೆಟಿಕ್ ಶೋ, ಓಸಿಯನ್ ಪಾರ್ಕ್, ಬೀಜಿಂಗ್, ಶಾಂಘೈ ಸಮ್ಮರ್ ಪ್ಯಾಲೇಸ್, ಮ್ಯೂಸಿಯಂ ಮತ್ತು ಇತರೆ

ಹೊರಡುವ ತಿಂಗಳು : ಜನವರಿ, ಫೆಬ್ರುವರಿ 2015

ಸಂಪರ್ಕಿಸಿ
9900080793
9900080792
9900080797

8 ದಿನಗಳ ಕಾಂಬೋಡಿಯಾ – ಥೈಲ್ಯಾಂಡ್ ಪ್ರವಾಸ

ಕಾಂಬೋಡಿಯಾ – ಸಿಯಾಮ್‌ರಿಪ್, ಅಂಕೂರ್‌ವಾಟ್, ಟೋನ್ ಸ್ಯಾಪ್ ಸರೋವರ, ತಾಪ್ರಾಮ್, ಬಯಾನ್, ಬಪೂನ್ ದೇವಾಲಯಗಳು, ಥೈಲ್ಯಾಂಡ್ – ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ ಬ್ಯಾಂಕಾಕ್ ಸಿಟಿ ಟೂರ್, ವಾಕರ್ ಸ್ಟ್ರೀಟ್

ಹೊರಡುವ ತಿಂಗಳು : ನವಂಬರ್, ಜನವರಿ 2015

ಸಂಪರ್ಕಿಸಿ
9900080793
9900080796
9900080799

ಪ್ರವಾಸದ ವಿಶೇಷತೆಗಳು

ಬೆಂಗಳೂರಿನಿಂದ ಹೊರಟು ಬೆಂಗಳೂರು ತಲುಪುವವರೆಗೆ, ಕನ್ನಡ ಮತ್ತು ಇತರೇ ಭಾಷೆ ಮಾತನಾಡಬಲ್ಲ, ಪ್ರವಾಸಿ ಮಾರ್ಗದರ್ಶಕರು ಜೊತೆಯಲ್ಲಿ ಪ್ರಯಾಣಿಸುತ್ತಾರೆ. ವಿದೇಶದಲ್ಲಿ ಭಾರತೀಯ ಊಟೋಪಚಾರ ವ್ಯವಸ್ಥೆ ಇರುತ್ತದೆ.

'ಹರಿಭಕ್ತಿಸಾರ'ದಿಂದ

ಕಮಲಸಂಭವವಿನುತ ವಾಸವ
ನಮಿತ ಮಂಗಳಚರಿತ ದುರಿತ
ಕ್ಷಮಿತ ರಾಘವ ವಿಶ್ವಪೂಜಿತ ವಿಶ್ವ ವಿಶ್ವಮಯ ।
ಅಮಿತವಿಕ್ರಮ ಭೀಮ ಸೀತಾ
ರಮಣ ವಾಸುಕಿಶಯನ ಖಗಪತಿ
ಗಮನ ಕಂಜಜನಯ್ಯ ರಕ್ಷಿಸು ನಮ್ಮನನವರತ ॥

ವೇದಗೋಚರ ವೇಣುನಾದವಿ
ನೋದ ಮಂದರಶೈಲಧರ ಮಧು
ಸೂದನಾಚ್ಯುತ ಕಂಸದಾನವರಿಪು ಮಹಾಮಹಿಮ ।
ಯಾದವೇಂದ್ರ ಯಶೋದೆನಂದನ
ನಾದಬಿಂದುಕಳಾತಿಶಯ ಪ್ರ
ಹ್ಲಾದರಕ್ಷಕ ವರದ ರಕ್ಷಿಸು ನಮ್ಮನನವರತ ॥

ವೇದಶಾಸ್ತ್ರ ಪುರಾಣ ಪುಣ್ಯದ
ಹಾದಿಯನು ನಾನರಿಯೆ ತರ್ಕದ
ವಾದದಲಿ ಗುರುಹಿರಿಯರರಿಯದ ಮೂಢಮತಿಯೆನಗೆ ।
ಆದಿಮೂರುತಿ ನೀನು ನೆರೆ ಕರು
ಣೋದಯನು ಹೃದಯಾಂಗಣದಿ ಜ್ಞಾ
ನೋದಯವನೆನಗಿತ್ತು ರಕ್ಷಿಸು ನಮ್ಮನನವರತ ॥

ಹಸಿವರಿತು ತಾಯ್ ತನ್ನ ಶಿಶುವಿಗೆ
ಒಸೆದು ಮೊಲೆ ಕೊಡುವಂತೆ ನೀ ಪೋ
ಷಿಸದೆ ಬೇರಿನ್ನಾರು ಪೋಷಕರಾಗಿ ಸಲಹುವರು ।
ಬಸಿರೊಳಗೆ ಬ್ರಹ್ಮಾಂಡಕೋಟಿಯ
ಪಸರಿಸಿದ ಪರಮಾತ್ಮ ನೀನೆಂ
ದುಸುರುತಿವೆ ವೇದಗಳು ರಕ್ಷಿಸು ನಮ್ಮನನವರತ ॥

-ಕನಕದಾಸರು

ಸೂಕ್ತಿಪ್ರಭ

ಧ್ಯಾನ ಮತ್ತು ಪ್ರಾರ್ಥನೆಯ ಸಮಯದಲ್ಲಿ ನಾವು ಅರಸುವುದು ಭಗವಂತನನ್ನು ಮಾತ್ರ. ಆದರೆ, ಅವನು ತನ್ನನ್ನು ತಾನಾಗಿಯೇ ಪ್ರಕಟಗೊಳಿಸದಿದ್ದರೆ ನಾವು ಅವನನ್ನು ಕಾಣಲಾರೆವು; ನಾವು ಈಗಾಗಲೇ ಅವನನ್ನು ಕಂಡಿದ್ದರೆ ಮಾತ್ರ ಹಾಗೆ ಅರಸಲು ನಮ್ಮನ್ನು ಪ್ರೇರೇಪಿಸುವನು. ಇದನ್ನು ಅರಿತಾಗಲೇ ನಾವು ಅವನನ್ನು ನಿಜವಾಗಿ ಅರಸುವೆವು.

-ಥಾಮಸ್ ಮೆರ್ಟನ್

ಆತ್ಮಶುದ್ಧಿಯಿಲ್ಲದಿದ್ದರೆ ಜೀವಿಗಳೆಲ್ಲದರಲ್ಲಿಯೂ ಸಮಾನತೆಯನ್ನು ಕಾಣುವುದು ಅಸಾಧ್ಯ. ಆತ್ಮಶುದ್ಧಿಯಿಲ್ಲದೆ ಅಹಿಂಸಾತತ್ತ್ವ ಪರಿಪಾಲನೆ ಮಾಡುವುದು ಬರಿಯ ಕನಸು. ಹೃದಯಶುದ್ಧಿಯಿಲ್ಲದವನು ಎಂದಿಗೂ ದೇವರನ್ನು ಅರಿಯಲಾರನು.

-ಮಹಾತ್ಮಾ ಗಾಂಧಿ

ಎಲ್ಲ ಪ್ರಾಣಿಗಳಿಗೂ ಆತ್ಮಸ್ವರೂಪರಾದ ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಯಾರು ಭೇದವನ್ನು ಎಣಿಸುವುದಿಲ್ಲವೋ ಅವರು ಶಾಂತಿಯನ್ನು ಹೊಂದುತ್ತಾರೆ.

-ಭಾಗವತ

ಮೊದಲು ಅನುಕಂಪವೆಂದರೆ ಏನೆಂದು ಅರಿತಲ್ಲದೆ ಚಿಂತನೆಯ ಅತ್ಯುನ್ನತ ನೆಲೆಗೆ ನಾವು ಏರಲಾರೆವು.

-ಸಾಕ್ರಟೀಸ್

ಪ್ರಪಂಚದಲ್ಲಿರುವ ಎಲ್ಲ ಕತ್ತಲೆಗಳು ಒಂದಾಗಿ ಬಂದರೂ, ಅವು ದೀಪವೊಂದರ ಬೆಳಕನ್ನು ನಾಶಪಡಿಸಲಾರವು.

-ಸಂತ ಫ್ರಾನ್ಸಿಸ್

ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿಯ ಅಳೆದು ತೀರದ ಮುನ್ನ
ಶಿವನ ನೆನೆಯಿರೇ, ಶಿವನ ನೆನೆಯಿರೇ!
ಈ ಜನ್ಮ ಬಳಿಕಿಲ್ಲ!
ಚನ್ನಮಲ್ಲಿಕಾರ್ಜುನದೇವರ ದೇವ,
ಪಂಚಮಹಾಪಾತಕರೆಲ್ಲ ಮುಕ್ತಿವಡೆದರು!

-ಅಕ್ಕಮಹಾದೇವಿ

ಸರ್ವಪ್ರಾಣಿಗಳಿಗೆ ಚಿದ್ರೂಪವು ಸ್ವಾಭಾವಿಕವಾದುದು. ಅದಕ್ಕಿಂತ – ಎಂದರೆ ಚಿದ್ರೂಪಕ್ಕಿಂತ ಅವು ಬೇರೆಯಾಗಿರುವಂತೆ ಕಾಣುವುದು ಅಜ್ಞಾನದಿಂದ.

-ಶಂಕರಾಚಾರ್ಯ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ

ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ ಕಾರ್ಯಾಲಯ, ಯಾದವಗಿರಿ, ಮೈಸೂರು 570 020

ಚಂದಾ ಅರ್ಜಿ

ಮಾನ್ಯರೇ, (ನಿಮಗೆ ಸಂಬಂಧಿಸಿದ್ದನ್ನು ✓ ಮಾಡಿ)

☐ ನನ್ನನ್ನು / ಈ ಕೆಳಕಂಡ ಹೆಸರಿನವರನ್ನು 'ವಿವೇಕಪ್ರಭ' ಪತ್ರಿಕೆಯ ಚಂದಾದಾರರನ್ನಾಗಿ/ ಪೋಷಕರನ್ನಾಗಿ ಮಾಡಬೇಕಾಗಿ ವಿನಂತಿ

☐ ನನ್ನ/ ಕೆಳಕಂಡ ಹೆಸರಿನವರ ಚಂದಾವನ್ನು ನವೀಕರಿಸಬೇಕಾಗಿ ವಿನಂತಿ. ಈಗಿನ ಚಂದಾಸಂಖ್ಯೆ.........................

ನನ್ನ ವಿಳಾಸ

ನನ್ನ ಹೆಸರು..

ವಿಳಾಸ..

....

....ಪಿನ್...........................

ಪತ್ರಿಕೆ ಪಡೆಯುವವರ ವಿಳಾಸ

ಹೆಸರು..

ವಿಳಾಸ..

....

....ಪಿನ್...........................

ಚಂದಾ ವಿವರ: (ನಿಮಗೆ ಸಂಬಂಧಿಸಿದ್ದನ್ನು ✓ ಮಾಡಿ)

1 ವರ್ಷದ ಚಂದಾ	3 ವರ್ಷದ ಚಂದಾ	ಆಜೀವ ಚಂದಾ	ಪೋಷಕರ ಸಹಾಯಧನ
₹ 140	₹ 375	₹ 3000	₹ 5000

ಹಣವನ್ನು ಮನಿ ಆರ್ಡರ್ / ಡ್ರಾಫ್ಟ್ (ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ A/c ಹೆಸರಿನಲ್ಲಿ) ಮೂಲಕ ಕಳುಹಿಸುತ್ತಿದ್ದೇನೆ.

ವಿವರ..

1. ಹೊರ ಊರಿನ ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.
2. ವಿದೇಶಗಳಿಗೆ ಅನ್ವಯವಾಗುವ ಚಂದಾ ವಿವರಗಳಿಗೆ ಹಾಗೂ ಇತರ ವಿವರಗಳಿಗಾಗಿ ನಮಗೆ ಬರೆಯಿರಿ.

ಸಹಿ

ಸಂಪಾದಕೀಯ

ಶಾಂತಸಮುದ್ರದ ಅಲೆಗಳ ಮೇಲೆ

ದಿನಪತ್ರಿಕೆಗಳ ಮೇಲೆ ಕಣ್ಣಾಡಿಸಿದಾಗ ನಾವೇನು ಓದುತ್ತೇವೆ? ಭ್ರಷ್ಟಾಚಾರ, ಲಂಚ, ಕೊಲೆ ಸುಲಿಗೆ, ಅಪಘಾತ, ಅತ್ಯಾಚಾರ ಅನಾಚಾರಗಳು; ಮಾರಕ ಯುದ್ಧದ, ವಿಶ್ವಾಸಘಾತುಕತನದ ಕಥೆಗಳು, ಬೆಡಗಿನ ಜಗತ್ತಿನಲ್ಲಿ ಹತಾಶೆ, ಭ್ರಮನಿರಸನಗಳಿಂದ ಭರವಸೆ ಕಳೆದುಕೊಂಡ ಯುವಕ-ಯುವತಿಯರ ಆತ್ಮಹತ್ಯೆಗಳು. ಅನೇಕ ಬಾರಿ, 'ಒಂದಾದರೂ ನೆಮ್ಮದಿ ನೀಡುವ ಸ್ಫೂರ್ತಿ ತುಂಬುವ, ಆಂತರ್ಯದಲ್ಲಿ ಶಕ್ತಿಸಂಚಾರಮಾಡುವ ವಿಷಯಗಳು ಇಲ್ಲವಲ್ಲ!' ಎಂದು ಗೋಗರೆಯುತ್ತೇವೆ. ಇಲ್ಲಿ ಮೂಡುವ ಪ್ರಶ್ನೆ: ನಮ್ಮ ಸುತ್ತಣ ಜಗತ್ತು ಅಷ್ಟೊಂದು ಕೆಟ್ಟುಹೋಗಿದೆಯೆ? ಭಯ ಹುಟ್ಟಿಸುವ ಸನ್ನಿವೇಶ, ಬೀಭತ್ಸಕರವಾದ ಘಟನೆಗಳು ಸರ್ವೇಸಾಮಾನ್ಯವಾದಾಗ ಸಮಾಜ ಅದಕ್ಕೆ ಬೆರಗಾಗುವುದಿಲ್ಲ, ಬೆಚ್ಚಿಬೀಳುವುದಿಲ್ಲ; ದಾರುಣ ವಾಸ್ತವಕ್ಕೆ ಮುಖ ತಿರುಗಿಸಿ ಓಡಿ ಹೋಗುತ್ತದೆ. ಈ ಎಲ್ಲ ಗಲಿಬಿಲಿಗಳಿಂದ ನಾವು ಸುಂದರವಾದ ಬೆಳಗಿನ ಮನಸ್ಥಿತಿಯನ್ನು ಹಾಳು ಮಾಡಿಕೊಳ್ಳಬೇಕೇ ಅನಿಸುತ್ತದೆ.

ಕೇವಲ ಪತ್ರಿಕೆ, ಟಿ.ವಿ, ರೇಡಿಯೋ ಮೊದಲಾದ ಮಾಧ್ಯಮ ಗಳಿಂದ ಇಂತಹ ಸನ್ನಿವೇಶ ಸೃಷ್ಟಿಯಾಯಿತೆಂದು ಇದರರ್ಥವಲ್ಲ. ಸಮಾಜದ ಆಗುಹೋಗುಗಳು ಸಮೂಹ ಮಾಧ್ಯಮಗಳಲ್ಲಿ ಪ್ರತಿಬಿಂಬಿತವಾಗುತ್ತದೆ ಅಷ್ಟೆ. ಎಲ್ಲ ಗೊಂದಲಗಳ ನಡುವೆ ಅಲ್ಲಲ್ಲಿ ಗೋಚರವಾಗುವ ಕೆಲವಾದರೂ ಅಸಾಧಾರಣ ಸಂಗತಿಗಳು ಒಮ್ಮೊಮ್ಮೆ ಈ ವಾರ್ತಾಮಾಧ್ಯಮಗಳಲ್ಲೇ ಗೋಚರವಾಗುವು ದುಂಟು. ಅವು ಮನಸ್ಸಿಗೆ ಮುದ ನೀಡುತ್ತವೆ, ಸ್ಫೂರ್ತಿ ನೀಡುತ್ತವೆ. ಒಂದು ಕ್ಷಣವಾದರೂ ನಾವು ನಿಟ್ಟುಸಿರು ಬಿಟ್ಟು 'ಆಹ!' ಎಂದು ಉದ್ಗಾರವೆತ್ತಿ ಶಾಂತಿಯ ಅನುಭವ ಮಾಡಿಕೊಳ್ಳುತ್ತೇವೆ.

ನಿಜ, ಜಗತ್ತಿನಲ್ಲಿ ನಾವು ಶಾಂತಿಯನ್ನು ಅರಸಬೇಕು. ಆದರೆ ಎಲ್ಲೆಲ್ಲೂ ಘೋರ ಅಶಾಂತಿ, ಗಲಿಬಿಲಿ, ಕ್ರೌರ್ಯ, ರಕ್ತಪಾತಗಳು ತುಂಬಿ ತುಳುಕಾಡುತ್ತಿದ್ದರೆ ಶಾಂತಿ ಎಲ್ಲಿಂದ ಬರಬೇಕು? ನಮ್ಮ ಜನಜೀವನದಲ್ಲೇ ಅಂತಹ ಒಂದು ಸನ್ನಿವೇಶ ನಿರ್ಮಾಣವಾಗದೆ ಅದರ ಅನುಭವ ಮಾಡಿಕೊಳ್ಳುವುದು ಅಸಂಗತವೆನಿಸೀತು. ಶಾಂತಿ, ನೆಮ್ಮದಿ, ತೃಪ್ತಿ, ಆನಂದ ಇವೆಲ್ಲದರ ಮೂಲ ನಮ್ಮೊಳಗೇ ಇದೆ. ನಮ್ಮೊಳಗಿನಿಂದ ಹೊರಟ ಭಾವನೆಗಳು ಹೊರಜಗತ್ತಿನ ಮೇಲೂ ಪರಿಣಾಮ ಬೀರುವುವು. ಅಂದರೆ ಸಾಮಾಜಿಕ ಶಾಂತಿಯ ಮೂಲವು ವ್ಯಕ್ತಿಯ ಆಂತರ್ಯದಲ್ಲಿದೆ ಎಂದರ್ಥ. ಈ ದೃಷ್ಟಿಯಿಂದ ಶಾಂತ, ಸುಸ್ಥಿರ, ನೆಮ್ಮದಿಯ ಸಮಾಜದ ಪರಿಸರವನ್ನು ನಿರ್ಮಿಸುವುದರಲ್ಲಿ ಒಬ್ಬೊಬ್ಬ ವ್ಯಕ್ತಿಯೂ ಪ್ರಯತ್ನಿಸಬೇಕು; ನಾನು, ನೀನು, ಅವನು – ಎಲ್ಲರೂ ಇದರಲ್ಲಿ ನಮ್ಮ ಪಾತ್ರವೇನೆಂಬುದನ್ನು ಅರಿತುಕೊಳ್ಳಬೇಕು.

ಶಾಂತಿಯ ಹಾರೈಕೆ: ನಮ್ಮ ಸಂಸ್ಕೃತಿಯ ಮೂಲದಲ್ಲಿಯೇ ಶಾಂತಿ ಎನ್ನುವ ಭಾವನೆಗೆ ಅತಿ ಹೆಚ್ಚಿನ ಪ್ರಾಮುಖ್ಯತೆಯಿದೆ. ನಿಜವಾಗಿಯೂ ಅದನ್ನೊಂದು ಭಾವನೆ ಎನ್ನಲಾಗದು. ಅದು ಇರುವಿಕೆಯ ನೈಜಸ್ಥಿತಿ. ಯಾವುದೇ ಭಾವವಿಕಾರಗಳಿಲ್ಲದ, ಏರುಪೇರುಗಳಿಲ್ಲದ, ಗೊಂದಲ ರಹಿತ ಅಸ್ತಿತ್ವ ಕೇವಲ ಶೂನ್ಯವಾದ, ಸಪ್ಪೆಯಾದ ಸ್ಥಿತಿಯಲ್ಲ; ಅದು ಪರಮಶಾಂತಿಯ ಒಂದು ಅದ್ಭುತ ಅವಸ್ಥೆ ಎಂದು ನಮ್ಮ ವೈದಿಕ ಸಾಹಿತ್ಯ ವರ್ಣಿಸುತ್ತದೆ. ಆಧ್ಯಾತ್ಮಿಕ ಅನುಭವಗಳಿಂದ ಇಂಥ ಸ್ಥಿತಿಯನ್ನು ಅರಿತುಕೊಂಡ ಮಹಾತ್ಮರುಗಳು, ಅದೇ ಅತ್ಯುನ್ನತ ಅವಸ್ಥೆ, ನಮ್ಮೆಲ್ಲರ ನಿಜವಾದ ನೆಲೆ ಎನ್ನುತ್ತಾರೆ. ಅಲ್ಲಿ ಎಲ್ಲವೂ ಸಮ ತೋಲನದಲ್ಲಿರುತ್ತದೆ, ಸಮರಸದಿಂದಿರುತ್ತವೆ. ಈ ಸ್ಥಿತಿಯನ್ನು ತಲುಪುವುದಕ್ಕೆ ಆಧ್ಯಾತ್ಮಿಕ ಸಾಧನೆಗಳನ್ನು ಮಾಡುವುದೊಂದೇ ದಾರಿ ಎನ್ನುತ್ತಾರೆ. ಅತ್ಯುನ್ನತ ಆನಂದವು ಆತ್ಮನ ಉನ್ನತ ಅವಸ್ಥೆ ಯಾದರೂ, ಅದರ ಬೆಳಕು ಸಾಮಾನ್ಯ ಜೀವಿಗಳ ಅನುಭವಗಳಲ್ಲೆಲ್ಲ ಪ್ರತಿಬಿಂಬವಾಗಿರುತ್ತದೆ ಎನ್ನುತ್ತದೆ ವೇದಾಂತ. ಅದೇ ರೀತಿ, ಪರಮಶಾಂತಿಯು ಆತ್ಮನ ಅತ್ಯುನ್ನತ ಸ್ಥಿತಿಯಾಗಿದ್ದರೂ, ಆ ಶಾಂತಿಯ ಬೆಳಕು ನಮ್ಮೆಲ್ಲರ ದೈನಂದಿನ ಬದುಕಿನಲ್ಲಿ ಮಿಂಚಿ ಮರೆ ಯಾಗುವುದು. ಈ ಕ್ಷಣಿಕ ಅನುಭವಗಳು ವಿಸ್ತಾರಗೊಂಡಷ್ಟೂ ನಾವು ಆತ್ಮನ ನೈಜ ನೆಲೆಯತ್ತ ಒಂದು ಹೆಜ್ಜೆ ಸಮೀಪವಾಗುತ್ತೇವೆ. ಆದ್ದರಿಂದ ಶಾಂತಿಯ ಭಾವನೆ ಕೂಡ ಆಧ್ಯಾತ್ಮಿಕ ಸಾಧನೆಯ ಒಂದು ಅಂಗವಾಗುತ್ತದೆ. ಈ ಅರ್ಥದಲ್ಲೇ ಇರಬೇಕು, ನಮ್ಮ ಪರಂಪರೆಯುದ್ದಕ್ಕೂ ಶಾಂತಿಯನ್ನು ಕುರಿತ ಹರಕೆ, ಪ್ರಾರ್ಥನೆ,

ಸ್ತುತಿ, ಮಂತ್ರಗಳು ಕಂಡುಬರುತ್ತವೆ; ಅವು ನಿತ್ಯಜೀವನದಲ್ಲಿ ಹಾಸುಹೊಕ್ಕಾಗಿವೆ. ಶಾಂತಿಮಂತ್ರಗಳಿಲ್ಲದ ಆಚರಣೆಯಿಲ್ಲ; ಪೂಜೆ ಪುನಸ್ಕಾರಗಳಿಲ್ಲ, ಯಾವುದೇ ಮಂಗಳಕಾರ್ಯಗಳಿಲ್ಲ. **'ಓಂ ಶಾಂತಿಃ ಶಾಂತಿಃ ಶಾಂತಿಃ'** ಎಂದು ಮೂರು ಬಾರಿ ಹೇಳುವುದರಿಂದಲೇ ಆಧಿಭೌತಿಕ, ಆಧಿದೈವಿಕ ಹಾಗೂ ಆಧ್ಯಾತ್ಮಿಕ ಎಂಬ ಮೂರು ಬಗೆಯ ಅಡಚಣೆಗಳು (ತಾಪತ್ರಯಗಳು) ನಿವಾರಣೆಯಾಗುವುವು ಎಂದು ಶಾಸ್ತ್ರ ಹೇಳುತ್ತದೆ. ಶಾಂತಿಮಂತ್ರಗಳೆಂದು ಕರೆಯಲಾಗುವ ಕೆಲವು ಮಂತ್ರಗಳು ವೈದಿಕ ಸೂಕ್ತಗಳ, ಉಪನಿಷತ್ತುಗಳ ಹಾಗೂ ಇನ್ನಿತರ ಸಂದರ್ಭಗಳ ಆರಂಭ ಹಾಗೂ ಕೊನೆಯಲ್ಲಿ ಹೇಳಲ್ಪಡುತ್ತವೆ. ಇಂತಹ ಹತ್ತಾರು ಶಾಂತಿಮಂತ್ರಗಳಲ್ಲಿ ಅತ್ಯಂತ ವಿಶಾಲವಾದ ಭಾವನೆಗಳಿವೆ. ಕೇವಲ ನನಗೆ, ನನ್ನವರಿಗೆ, ನನ್ನ ಸಮಾಜಕ್ಕೆ ಮಾತ್ರವಲ್ಲ; ಜಗತ್ತಿನ ಎಲ್ಲರಿಗೂ ಒಳಿತಾಗಲಿ ಎಂಬ ಉದಾತ್ತ ಭಾವನೆಯಿದೆ. ಈ ಭಾವನೆ ಮನುಷ್ಯವರ್ಗಕ್ಕಷ್ಟೇ ಅನ್ವಯಿಸುವುದಿಲ್ಲ; ಪ್ರಾಣಿವರ್ಗ-ಸಸ್ಯವರ್ಗಗಳನ್ನು, ಎಷ್ಟೆಷ್ಟು ಲೋಕಗಳಿವೆಯೋ ಅವುಗಳನ್ನೂ ವ್ಯಾಪಿಸುತ್ತದೆ. ಇಂಥ ಮಂತ್ರಗಳ ಉಚ್ಚಾರಣೆಯಿಂದ ನಮ್ಮ ಮನಸ್ಸಿನ ಮಾಲಿನ್ಯ ಕಳೆದು, ನಮ್ಮ ಮನಸ್ಸು, ದೇಹ, ಅಂತಃಕರಣಗಳು ಪವಿತ್ರಗೊಳ್ಳುವುವು; ಅವುಗಳ ಪ್ರಭಾವವನ್ನು ನಾವು ಇತರರ ಮೇಲೂ ಬೀರುವೆವು. ಇದು ಶಾಂತಿಮಂತ್ರಗಳ ಹಿಂದಿನ ಉದ್ದೇಶ. ಕೇವಲ ಯಾಗ, ಯಜ್ಞ, ಹೋಮಾದಿಗಳನ್ನು ಮಾಡುತ್ತಿದ್ದ ವೈದಿಕ ಸಂಸ್ಕೃತಿಯ ಆ ಮಹೋನ್ನತ ಭಾವನೆಗಳು, ಆಚರಣೆಗಳು ಇಂದಿನ ಯಾಂತ್ರಿಕ, ವೈಜ್ಞಾನಿಕ ಯುಗದಲ್ಲಿ ಹೇಗೆ ಪ್ರಾಯೋಗಿಕವಾಗಬಲ್ಲದು? ಎಂಬ ಪ್ರಶ್ನೆ ಇಲ್ಲಿ ಏಳಬಹುದು. ಅದಕ್ಕೆ ಉತ್ತರ – ಹಿಂದೆಂದಿಗಿಂತಲೂ ಇಂಥ ಗೊಂದಲದ ಬದುಕಿನಲ್ಲೇ ಅಂಥ ಭಾವನೆ ಹಾಗೂ ಆಚರಣೆಯ ಅಗತ್ಯ ಅತ್ಯಂತ ಹೆಚ್ಚಿನದಾಗಿದೆ. ಎಲ್ಲ ಅಸ್ತವ್ಯಸ್ತ ವ್ಯವಸ್ಥೆಯ, ಗೊಂದಲದ, ಅಶಾಂತಿಯ ನಡುವೆಯೇ ಶಾಂತಿಯ ಮಹತ್ವ ಅತಿ ಹೆಚ್ಚಿನದಾಗಿ ತೋರುವುದು. ಹೀಗೆ ಅದು ಅನಿವಾರ್ಯವೆನಿಸಿದಾಗಲೆಲ್ಲ ಅದರ ಅನುಷ್ಠಾನ, ಪ್ರಾಯೋಗಿಕತೆ ತಾನಾಗಿಯೇ ಹೊಸ ದಾರಿಗಳನ್ನು ಕಂಡುಕೊಳ್ಳುವವು. ಇಂದು ಬೃಹತ್ ನಗರಗಳಲ್ಲೂ ವೈದಿಕ ಅನುಷ್ಠಾನ, ಆಧ್ಯಾತ್ಮಿಕ ಜಾಗೃತಿ, ಯೋಗಸಾಧನೆಗಳು ಹೆಚ್ಚು ವ್ಯಾಪಕಗೊಳ್ಳುತ್ತಿರುವುದಂತೂ ಸತ್ಯ.

ತಾತ್ತ್ವಿಕ ಹಿನ್ನೆಲೆ : ಮಾನವನ ನಿಜವಾದ ಸ್ವಭಾವ ದಿವ್ಯವಾದದ್ದೆಂದೂ, ಮೂಲತಃ ಎಲ್ಲರ ಒಳಗಿರುವ ಆತ್ಮವು ಭಗವಂತನಿಂದಲೇ ಬಂದಿದೆಯೆಂದೂ ವೇದಾಂತ ಹೇಳುತ್ತದೆ. ಆಧ್ಯಾತ್ಮಿಕ ಸಾಧನೆಗಳ ಮೂಲಕ ಮಾನವನು ತನ್ನ ಮೂಲ ಸ್ವಭಾವವಾದ ಆತ್ಮನನ್ನು ಹೊಂದಬಹುದೆಂದೂ, ಆ ಮೂಲಕ ಸುಖ ದುಃಖ, ಜನನ ಮರಣ, ಒಳಿತು ಕೆಡುಕುಗಳೇ ಮೊದಲಾದ ಈ ಪ್ರಪಂಚದ ದ್ವಂದ್ವಗಳಿಂದ ಬಿಡುಗಡೆ ಹೊಂದಬಹುದೆಂದೂ ಅಲ್ಲಿ ಹೇಳಲಾಗಿದೆ. ಹೀಗೆ ಆತ್ಮಸಾಕ್ಷಾತ್ಕಾರ ಹೊಂದಿದವನಿಗೆ ಮಾತ್ರ ಪರಮಶಾಂತಿ ಲಭಿಸುವುದು, ಇತರರಿಗಲ್ಲ; ಇಂಥ ಪರಿಪೂರ್ಣ ಶಾಂತಿ ಶಾಶ್ವತವಾದುದು ಎಂದು ಉಪನಿಷತ್ತು ಸ್ಪಷ್ಟವಾದ ಮಾತಿನಲ್ಲಿ ಹೇಳುತ್ತದೆ *(ಕಠೋಪನಿಷತ್ತು, ೫.೧೩)*. ಈ ತಾತ್ತ್ವಿಕ ಹಿನ್ನೆಲೆಯಿಂದ ಹೊರಟ ಆಧ್ಯಾತ್ಮಿಕ ಭಾವನೆಗಳು ನಮ್ಮ ದೇಶದ ಎಲ್ಲ ಧಾರ್ಮಿಕ ಪಂಥಗಳನ್ನೂ ಪ್ರಭಾವಿಸಿವೆ. ಭಾರತೀಯ ಸಂಸ್ಕೃತಿಯಲ್ಲಿ ಜೀವನದ ಎಲ್ಲ ಆಯಾಮಗಳಲ್ಲೂ ಧರ್ಮ ಮತ್ತು ಆಧ್ಯಾತ್ಮಿಕತೆ ಹಾಸುಹೊಕ್ಕಾಗಿರುವುದರಿಂದ, ಸಹಜವಾಗಿಯೇ ನಮ್ಮ ಜನರ ಮನೋಧರ್ಮದಲ್ಲಿ ಶಾಂತಿಯ ಬಯಕೆ, ಶಾಂತಿಯ ಹಾರೈಕೆ ಅತ್ಯಂತ ಸಹಜವಾಗಿದೆ. ಸಂಸ್ಕೃತಿಯ ಬೇರನ್ನು ಕಡಿದುಕೊಂಡಿರುವ ಜೀವನಕ್ರಮದಲ್ಲೆಲ್ಲ ಅದಕ್ಕೆ ವಿರುದ್ಧವಾದ ಅರಾಜಕತೆ, ಅಶಾಂತಿ, ಗೊಂದಲಗಳು ಅನಿವಾರ್ಯ. ಧರ್ಮ, ಆಧ್ಯಾತ್ಮಿಕತೆಗಳ ಪ್ರಭಾವ ಭಾರತೀಯನ ಅಂತರಂಗದ ಬದುಕಿನಲ್ಲಿ ಮಾತ್ರವಲ್ಲ, ಬಾಹ್ಯಜೀವನವನ್ನೂ ವ್ಯಾಪಿಸಿರುವುದು ಕಂಡುಬರುತ್ತದೆ. ದೇವಸ್ಥಾನ, ಗುಡಿ, ಆಚರಣೆ, ಜಾತ್ರೆ, ವ್ರತನೇಮಗಳು, ವೈಯಕ್ತಿಕ ಸಾಧನೆ-ಅನುಷ್ಠಾನಗಳು ಇಲ್ಲೆಲ್ಲ ಈ ಬಾಹ್ಯರೂಪದ ಅನುಷ್ಠಾನಗಳು ಗೋಚರವಾಗುತ್ತವೆ. ಬಿಡಿಬಿಡಿಯಾಗಿ ನೋಡುವಾಗ ಇವು ಸಂಸ್ಕೃತಿಯ ಮೂಲಭಾವನೆಯೊಂದಿಗೆ ಸಂಬಂಧಪಡದಂತೆ ಕಂಡರೂ, ಸಮಾಜದ ಪ್ರಜ್ಞಾಪರಿಧಿಯನ್ನು ಒಟ್ಟಾರೆಯಾಗಿ ನೋಡಿದಾಗ, ಅದು ಆಂತರಿಕವಾದ ಬೆಳವಣಿಗೆಯ ವ್ಯಕ್ತರೂಪವಾಗಿ ಕಾಣಿಸುವುದು.

ಆಧ್ಯಾತ್ಮಿಕ ಸಾಧಕನ ಮನಸ್ಥಿತಿ ಹೇಗಿರಬೇಕು ಎಂಬುದನ್ನು ಕುರಿತು ಹೇಳುವಾಗ ಉಪನಿಷತ್ತು, ಗೀತೆಯೇ ಮೊದಲಾದ ಗ್ರಂಥಗಳೂ, ಸಾಕ್ಷಾತ್ಕಾರ ಪಡೆದ ಮಹಾತ್ಮರುಗಳೂ ಒಂದು ಅಂಶವನ್ನು ಹೇಳುತ್ತಾರೆ – ಸಾಧಕನ ಮನಸ್ಸು ಶಾಂತವಾಗಿರಬೇಕು, ಸಮಾಧಾನದಿಂದಿರಬೇಕು, ಅದು ಒಂದು ಸಮತೋಲನದಲ್ಲಿರಬೇಕು ಎಂದು. ಮನಸ್ಸಿನ ಗುಣ ಸಮತೋಲನಕ್ಕೆ ವಿರುದ್ಧವಾದದ್ದು, ಏಕೆಂದರೆ, ಅದು ಇಂದ್ರಿಯಗಳು ಒದಗಿಸುವ ವಿಷಯಗಳತ್ತ ಆಕರ್ಷಿತವಾಗುತ್ತದೆ, ಅವುಗಳ ಸ್ಪರ್ಶಕ್ಕಾಗಿ ಹಾತೊರೆಯುತ್ತದೆ. ಅದಕ್ಕನುಗುಣವಾಗಿ ಕರ್ಮೇಂದ್ರಿಯಗಳು ಪ್ರವೃತ್ತವಾಗುತ್ತವೆ; ಪರಿಣಾಮವಾಗಿ ನಮಗೆ ವಿವಿಧ ಅನುಭವಗಳು ಲಭ್ಯವಾಗುತ್ತವೆ. ಈ ಅನುಭವಗಳು ನಮ್ಮಲ್ಲಿ ಸಂಸ್ಕಾರವೆಂಬ ಬೀಜವನ್ನು ಬಿತ್ತಿ, ಮತ್ತೆ ವಿಷಯಸುಖದ ಬಯಕೆಗಳನ್ನು ಮೊಳೆಸುತ್ತವೆ; ಮತ್ತೆ ಮನಸ್ಸನ್ನು ಕರ್ಮಕ್ಕಾಗಿ ಪ್ರಚೋದಿಸುತ್ತದೆ, ಅದರಿಂದ ಮತ್ತೆ ಅನುಭವಗಳಾಗುತ್ತವೆ. ಹೀಗೆ ಕರ್ಮದ ಬಂಧನ ಸರಪಳಿಯಂತೆ ಮುಂದುವರಿಯುತ್ತದೆ. ಇದರಿಂದ ಮನಸ್ಸು ಪ್ರಪಂಚದ ಏರುಪೇರುಗಳು, ಸುಖದುಃಖಾದಿ ಅನುಭವಗಳಲ್ಲಿ ಮುಳುಗಿ, ತನ್ನ ನೈಜಸ್ವರೂಪವನ್ನು ಮರೆತುಬಿಡುತ್ತದೆ. ತನ್ನ ನೈಜಸ್ವರೂಪವಾದ ಶಾಂತಿ, ಆನಂದ, ಅರಿವು ಮಾಯವಾಗಿ, ಅದರ ಸ್ಥಳದಲ್ಲಿ ಅಶಾಂತಿ, ಗೊಂದಲ, ಏರುಪೇರು, ಕೊನೆಯಿಲ್ಲದ ಬಯಕೆಗಳು ಬಂದು ಸೇರುವವು; ಪರಿಣಾಮವಾಗಿ ದುಃಖ, ಅತೃಪ್ತಿ, ಆಯಾಸ ಹಾಗೂ ಅಸಮಾಧಾನಗಳೇ ಬದುಕಾಗುವುದು. ಏನು ಲಭಿಸಿದರೂ ಸುಖವಿಲ್ಲ, ಏನು ಮಾಡಿದರೂ ನೆಮ್ಮದಿಯಿಲ್ಲ. ಅಲ್ಪಕಾಲದ ತೃಪ್ತಿಗಳೆಲ್ಲ ಸಾಕಾಗುವುದು. ಆದರೆ ಮತ್ತೆ ತನ್ನ ಮೂಲನೆಲೆಗೆ, ತನ್ನ ದೈವೀಸ್ವರೂಪದತ್ತ ಹೊರಳದೆ ಅವನಿಗೆ ಶಾಶ್ವತ ಶಾಂತಿ, ಆನಂದಗಳು ದೊರಕಲಾರವು. ಈ ಅರಿವಿಲ್ಲದೆ ತೊಳಲಾಡುವ ವ್ಯಕ್ತಿ

ಕೊನೆಯಿಲ್ಲದ ದುಃಖಪರಂಪರೆಗೆ ಈಡಾಗುತ್ತಿರುವುದನ್ನು ನಾವು ಎಲ್ಲೆಡೆ ಕಾಣಬಹುದು.

ಪ್ರಾಯೋಗಿಕ ನೆಲೆ: ತತ್ತ್ವ, ಆಧ್ಯಾತ್ಮಿಕ ವಿಚಾರಗಳು ಎಷ್ಟೇ ಉನ್ನತವಾಗಿರಲಿ, ಅವು ನಮ್ಮ ದೈನಂದಿನ ಜೀವನದಲ್ಲಿ ಅನುಷ್ಠಾನಕ್ಕೆ ಬಂದಾಗಲೇ ಅವುಗಳ ಪರಿಣಾಮವನ್ನು ನಾವು ಕಾಣುತ್ತೇವೆ. ಅನುಷ್ಠಾನಕ್ಕೆ, ಅನುಸರಣೆಗೆ ಅಸಾಧ್ಯವಾದ ತತ್ತ್ವಗಳನ್ನು ನಮ್ಮ ಸಂಸ್ಕೃತಿ ತಿರಸ್ಕರಿಸಿಬಿಡುತ್ತದೆ. ಧರ್ಮ, ಅಧ್ಯಾತ್ಮಗಳು ನಿತ್ಯಜೀವನದೊಂದಿಗೆ ಅತ್ಯಂತ ನಿಕಟವಾಗಿ, ಯಾವ ರೀತಿಯಿಂದಲೂ ಬೇರ್ಪಡದಂತೆ ಒಂದಾಗಬಲ್ಲ ವಿಧಾನಗಳು ನಮ್ಮ ಪರಂಪರೆಯಲ್ಲಿವೆ. ಒಬ್ಬೊಬ್ಬ ವ್ಯಕ್ತಿಯ ಮನಸ್ಥಿತಿ, ಸ್ವಭಾವಗಳೂ ಒಂದೊಂದು ಬಗೆ; ವಿಭಿನ್ನ ಅಭಿರುಚಿಗಳಿಂದ ಕೂಡಿರುವ ಮನಸ್ಸುಗಳಿಗೆ ಒಪ್ಪುವಂತಹ, ಅನೇಕ ಬಗೆಯ ಜೀವನಕ್ರಮಗಳೂ ನಮ್ಮಲ್ಲಿ ರೂಪಿತವಾಗಿವೆ. ಇದರಿಂದ ಎಲ್ಲ ಬಗೆಯ ವ್ಯಕ್ತಿತ್ವಗಳೂ ತಮಗೆ ಸೂಕ್ತವಾದ ಧಾರ್ಮಿಕ, ಆಧ್ಯಾತ್ಮಿಕ ಅಡಚಣೆಯನ್ನು ಆಯ್ದುಕೊಳ್ಳುವ ಒಂದು ಅದ್ಭುತ ಅವಕಾಶ ಭಾರತದಲ್ಲಿದೆ. ಸಂಪ್ರದಾಯದ ಕಟ್ಟುಪಾಡುಗಳನ್ನು ಮೀರಿ ನಿಂತು, ನಮ್ಮ ಅಂತರಂಗದ ವಿಕಾಸಕ್ಕಾಗಿ ವಿಶಾಲಭಾವನೆಯಿಂದ ಈ ಬಗೆಯ ಸಾಂಸ್ಕೃತಿಕ ಆಚರಣೆಗಳನ್ನು ನೋಡಬೇಕು; ಅವುಗಳ ಗುಣಧರ್ಮಗಳನ್ನರಿತು ನಮಗೆ ಹೊಂದುವಂತೆ ಅವುಗಳನ್ನು ನಮ್ಮ ಜೀವನಕ್ಕೆ ಅಳವಡಿಸಿಕೊಳ್ಳಬೇಕು.

ಶಾಂತ ಬದುಕನ್ನು ಕಂಡುಕೊಳ್ಳುವುದು ಇಂದಿನ ಅಗತ್ಯ. ಇದಕ್ಕೆ ಕ್ರಮಬದ್ಧವಾದ ತರಬೇತಿ ಕುಟುಂಬದ ಸನ್ನಿವೇಶದಲ್ಲಿ, ಶೈಕ್ಷಣಿಕ ಸನ್ನಿವೇಶದಲ್ಲಿ, ವಿಭಿನ್ನ ಕಾರ್ಯಕ್ಷೇತ್ರಗಳಲ್ಲಿ ಸಾಧ್ಯವಾಗಬೇಕು. ದೇವಾಲಯ, ಹಬ್ಬ, ಉತ್ಸವಗಳೇ ಮೊದಲಾದ ಸಾಮಾಜಿಕ-ಸಾಂಸ್ಕೃತಿಕ ಸಂದರ್ಭಗಳು ಇಂತಹ ತರಬೇತಿಗೆ ತಕ್ಕುದಾದ ಪ್ರೇರಣೆಯನ್ನು, ಹೊಸ ಚೈತನ್ಯವನ್ನು ನೀಡಬಲ್ಲವು.

ದೈನಂದಿನ ಚಟುವಟಿಕೆಗಳಲ್ಲಿ: ಅವಸರದ ಬದುಕಿನಲ್ಲಿ ಎಲ್ಲವೂ ವೇಗವಾಗಿ ನಡೆಯಬೇಕು; ಯಾವುದಕ್ಕೂ ಸಮಯವೇ ಇಲ್ಲ, ನಗರಜೀವನದಲ್ಲಿ ಇದು ಸಹಜ ಎನ್ನುವವರಿದ್ದಾರೆ. ಆದರೆ ಆತುರದ ಜೀವನಕ್ರಮ, ವೇಗದ ಚಟುವಟಿಕೆಗಳು ನಮ್ಮ ಆರೋಗ್ಯ, ಮನಸ್ಥಿತಿ, ನೆಮ್ಮದಿಗಳನ್ನು ಕೆಡಿಸುವಂತಿದ್ದರೆ? ಅದಕ್ಕೆ ಸಮರ್ಪಕವಾದ ಉಪಶಮನ ಅತ್ಯಗತ್ಯ. ‘ಅತ್ಯಂತ ನಿರ್ಜನವೂ ನೀರವವೂ ಆದ ಪ್ರದೇಶದಲ್ಲಿ ಕೂಡ ತೀವ್ರ ಚಟುವಟಿಕೆಯನ್ನು ಯಾವಾತನು ಕಾಣುವನೋ, ಮತ್ತು ತೀವ್ರ ಚಟುವಟಿಕೆಯ ಮಧ್ಯದಲ್ಲಿಯೂ ಅರಣ್ಯದ ನೀರವ ನಿರ್ಜನತೆಗಳ ಅನುಭೂತಿ ಯಾವಾತನಿಗುಂಟಾಗುವುದೋ ಆತನೇ ಆದರ್ಶಪ್ರಾಯನು’ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಭಾಗ ೧, ಪು ೩೬)* ಅಂತರಂಗದಲ್ಲಿ ನಾವು ಶಾಂತವಾಗಿದ್ದರೆ, ಅಂತಹ ಶಾಂತತೆಯನ್ನು ಸದಾ ಕಾಯ್ದುಕೊಂಡಿದ್ದರೆ ಬಾಹ್ಯ ಪರಿಸರ ನಮ್ಮನ್ನು ವಿಚಲಿತಗೊಳಿಸದು. ಇದಕ್ಕೆ ಅಗತ್ಯವಾಗಿ ಬೇಕಾದದ್ದೆಂದರೆ ಸಂದರ್ಭ, ಸನ್ನಿವೇಶಗಳಿಗೆ ತಕ್ಕಂತೆ ನಮ್ಮ ಮನಸ್ಸನ್ನು ಹೊಂದಿಸಿಕೊಳ್ಳಲು ನಮ್ಮನ್ನು ನಾವು ತಯಾರು ಮಾಡಿಕೊಳ್ಳುವುದು. ಇದು ಹೇಗೆ ಸಾಧ್ಯ? ಕೇವಲ ಕೆಲವು ಮಾರ್ಗದರ್ಶಕ ಸೂತ್ರಗಳಿಂದ, ಧ್ಯಾನ ತರಗತಿಗಳಿಂದ ಸಾಧ್ಯವೆ? ನಮ್ಮ ಒಟ್ಟು ಜೀವನಕ್ರಮವೇ ಶಾಂತಿ, ನೆಮ್ಮದಿಗಳನ್ನು ಅರಸುವ ದಿಕ್ಕಿನತ್ತ ಚಲಿಸುವಂತಾದರೆ ಮಾತ್ರ ಇದು ಸಾಧ್ಯ. ನಮ್ಮ ವೃತ್ತಿ, ಚಟುವಟಿಕೆ, ಕುಟುಂಬ – ಎಲ್ಲವನ್ನೂ ಈ ಬಗೆಯ ಹೊಸ ಕ್ರಮದಲ್ಲಿ ಕೊಂಡೊಯ್ಯುವುದು ಸಾಧ್ಯವಿದೆ. ಅವ್ಯಕ್ತವಾಗಿರುವ, ನಮ್ಮ ಅಂತರ್ಯದಲ್ಲಿ ಅಡಗಿರುವ ಶಾಂತತೆ ನಮ್ಮ ಚಟುವಟಿಕೆಗಳಲ್ಲಿ ಪ್ರಕಟಗೊಂಡಾಗ ಅಸಾಧ್ಯವಾದುದನ್ನು ಸಾಧ್ಯವಾಗಿಸಬಹುದು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ‘‘ಮನಸ್ಸು ಶಾಂತವಾಗಿ ಏಕಾಗ್ರವಾದಾಗ ಮಾತ್ರ ಅದರ ಎಲ್ಲಾ ಶಕ್ತಿಯನ್ನೂ ಒಳ್ಳೆಯ ಕಾರ್ಯರೂಪದಲ್ಲಿ ಉಪಯೋಗಿಸಬಹುದು. ಜಗತ್ತಿನಲ್ಲಿ ಜನ್ಮವೆತ್ತಿದ್ದ ಪ್ರಚಂಡ ಕಾರ್ಯೋನ್ಮುಖರಾದ ವ್ಯಕ್ತಿಗಳ ಜೀವನವನ್ನು ಓದಿದರೆ ಅವರು ಅಷ್ಟೇ ಅದ್ಭುತವಾದ ಶಾಂತ ಜೀವಿಗಳೂ ಆಗಿದ್ದರೆಂಬುದನ್ನೂ ನೋಡುತ್ತೇವೆ. ಯಾವ ಮನುಷ್ಯನು ಕೋಪ, ಅಸೂಯೆ ಮತ್ತು ಇನ್ನೂ ಇತರ ಯಾವುದಾದರೂ ಹೀನಗುಣಕ್ಕೆ ಬೀಳುತ್ತಾನೆಯೋ ಅವನು ಕೆಲಸ ಮಾಡಲಾರ. ಯಾರು ಶಾಂತರೋ, ಕ್ಷಮಾಜೀವಿಗಳೋ, ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡುವವರೋ, ಸಮತ್ವಬುದ್ಧಿಯುಳ್ಳವರೋ, ಅವರೇ ಹೆಚ್ಚು ಪಾಲು ಕೆಲಸ ಮಾಡುವವರು.’’ *(ಕೃತಿಶ್ರೇಣಿ, ಸಂ೨, ಪು. ೨೪೧)*

ಶಾಂತಿ, ಸಮಾಧಾನಗಳು ಎಲ್ಲಿಂದಲೋ ಬರುತ್ತವೆ ಎಂದು ಅದಕ್ಕಾಗಿ ಕಾಯುವುದರಲ್ಲಿ ಅರ್ಥವಿಲ್ಲ. ಅವು ನಮ್ಮೊಳಗೇ ಇವೆ; ಅದನ್ನು ನಾವು ಕಂಡುಕೊಳ್ಳಬೇಕು, ಹೊರಹೊಮ್ಮಿಸಬೇಕು ಅಷ್ಟೆ. ಪ್ರಚಂಡ ಅಲೆಗಳಿರುವ ಸಮುದ್ರದಲ್ಲಿ ನಮ್ಮ ಬಾಳನೌಕೆ ಛಿದ್ರವಾಗದಂತೆ, ಶಾಂತಸಮುದ್ರದ ನೀಲಿಯಲ್ಲಿ ಅದು ಸಮತೋಲನದಿಂದ ಸಾಗಲಿ ಎಂದು ಹಾರೈಸೋಣ: **ಓಂ ಶಾಂತಿಃ ಶಾಂತಿಃ ಶಾಂತಿಃ !** *

‘ವಿವೇಕಪ್ರಭ’ ಪತ್ರಿಕೆಯ ಪೋಷಕರು

ಶ್ರೀ ಗುಂಡಪ್ಪ ಹೆಚ್ .ಎಸ್.	ಬೆಂಗಳೂರು	ಶ್ರೀ ವಲ್ಲೀಶ್ ಎ.ಆರ್.	ಬೆಂಗಳೂರು	ಮಿಸ್. ಉಮಾ ಎಸ್.ಎನ್.	ಮೈಸೂರು
ಶ್ರೀ ವಿನಯ್	ಬೆಂಗಳೂರು	ಶ್ರೀ ನರಸಿಂಹಸ್ವಾಮಿ	ಮೈಸೂರು	ಶ್ರೀಮತಿ ಲಕ್ಷ್ಮಿ ಅನಂತ್	ಬೆಂಗಳೂರು
ಡಾ. ರಾವ್ ಜಿ.	ಬೆಂಗಳೂರು	ಶ್ರೀ ರಾಮಾನುಜನ್ ಆರ್.	ಬೆಂಗಳೂರು	ಶ್ರೀಮತಿ ವಿನುತ ಶ್ರೀನಿವಾಸನ್	ಬೆಂಗಳೂರು
ಶ್ರೀ ಅನಂತ್ ಆರ್	ಬೆಂಗಳೂರು	ಮಿಸ್ ನಾಗರತ್ನಮ್ಮ ಬಿ.ಎಸ್.	ಬೆಂಗಳೂರು	ಶ್ರೀ ಬಾಲಕೃಷ್ಣ ಕೆ.	ಮಣಿಪಾಲ

ವೈರಾಗ್ಯ

D ಬ್ರಾಹ್ಮಭಕ್ತ : ವೈರಾಗ್ಯ ಹೇಗೆ ಉಂಟಾಗುತ್ತದೆ? ಎಲ್ಲರಿಗೂ ಅದು ಏಕೆ ಬರುವುದಿಲ್ಲ?

ಶ್ರೀರಾಮಕೃಷ್ಣರು: ಭೋಗತೃಪ್ತಿ ಪೂರ್ಣವಾಗದ ಹೊರತು ವೈರಾಗ್ಯ ಉಂಟಾಗುವುದಿಲ್ಲ. ಮಗುವಿಗೆ ತಿಂಡಿ ಕೊಟ್ಟೋ ಅಥವಾ ಆಟದ ಸಾಮಾನು ಕೊಟ್ಟೋ ಸುಲಭವಾಗಿ ಸಮಾಧಾನಗೊಳಿಸಬಹುದು. ಆದರೆ ಅದು ತಿಂಡಿಯನ್ನು ತಿಂದು ಮುಗಿಸಿದ ನಂತರ ಅಥವಾ ಆಟದ ಸಾಮಾನಿನೊಡನೆ ಆಟವಾಡಿ ಮುಗಿಸಿದ ನಂತರ ಅಳಲಾರಂಭಿಸುತ್ತದೆ, 'ನಾನು ತಾಯಿಯ ಹತ್ತಿರ ಹೋಗಬೇಕು' ಎಂಬುದಾಗಿ. ತಾಯಿಯ ಹತ್ತಿರಕ್ಕೆ ಕರೆದುಕೊಂಡು ಹೋಗಲಿಲ್ಲ ಎಂದರೆ ಕೋಪದಿಂದ ಆಟದ ಸಾಮಾನುಗಳನ್ನು 'ರೊಯ್ಞ್' ಅಂತ ಬಿಸಾಡಿ ತಾರಸ್ವರದಿಂದ ಕಿರಿಚಲಾರಂಭಿಸುತ್ತದೆ.

D ಭಗವಂತ ಐಶ್ವರ್ಯಕ್ಕೆ ವಶನೆ? ಆತ ಭಕ್ತಿಗೆ ವಶನಾಗುತ್ತಾನೆ. ಆತನಿಗೆ ಏನು ಬೇಕಾಗಿದೆ? ನಿವಾಗಿಯೂ ಹಣವಲ್ಲ! ಭಕ್ತರ ಭಾವ, ಪ್ರೇಮ, ಭಕ್ತಿ, ವಿವೇಕ, ವೈರಾಗ್ಯ ಇವೇ ಮೊದಲಾದವು ಬೇಕು.

D ಒಮ್ಮೆ ರಾಮಚಂದ್ರನಿಗೆ ತೀವ್ರವೈರಾಗ್ಯ ಬಂದುಬಿಟ್ಟಿತು. ಅದನ್ನು ನೋಡಿ ದಶರಥ ಬಹಳ ಚಿಂತಿತನಾಗಿ ವಸಿಷ್ಠನನ್ನು ಸಮೀಪಿಸಿ ರಾಮ ಸಂಸಾರವನ್ನು ತ್ಯಾಗಮಾಡದ ಹಾಗೆ ಬುದ್ಧಿವಾದವೀಯಬೇಕೆಂದು ಬೇಡಿಕೊಂಡ. ವಸಿಷ್ಠ ರಾಮನ ಹತ್ತಿರಕ್ಕೆ ಬಂದು ನೋಡುತ್ತಾನೆ, ಆತ ವಿಮನಸ್ಕನಾಗಿ ಕುಳಿತಿದ್ದಾನೆ. ಅಂತರ್ಯದಲ್ಲಿ ತೀವ್ರ ವೈರಾಗ್ಯ ತುಂಬಿ ತುಳುಕಾಡುತ್ತಿದೆ. ವಸಿಷ್ಠ ಆತನಿಗೆ ಹೇಳಿದ: 'ನೀನು ಸಂಸಾರವನ್ನು ಏಕೆ ತ್ಯಾಗ ಮಾಡಬೇಕು? ಸಂಸಾರ ಆತನಿಂದ ಹೊರಗಿದೆಯೇನು? ನನ್ನೊಡನೆ ವಿಚಾರ ಮಾಡಿ ನೋಡು.' ರಾಮನ ಅನುಭವಕ್ಕೆ ಬಂತು, ಈ ಜಗತ್ತು ಪರಬ್ರಹ್ಮನಿಂದಲೇ ಉದ್ಭವವಾಗಿದೆ ಎಂದು. ಅದಕ್ಕಾಗಿ ಆತ ಸುಮ್ಮನೆ ಆಗಿಬಿಟ್ಟ.

D ತೀವ್ರವೈರಾಗ್ಯ ಉಂಟಾದರೆ, ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಬಹುದು. ಯಾರಿಗೆ ವೈರಾಗ್ಯ ಉಂಟಾಗಿದೆಯೊ, ಅವರಿಗೆ ಈ ಸಂಸಾರ ದಾವಾನಲದ ಹಾಗೆ ಕಾಣುತ್ತದೆ. ಹೆಂಡತಿ, ಮಕ್ಕಳು ಅವರ ಕಣ್ಣಿಗೆ ಆಳವಾದ ಬಾವಿಯ ಹಾಗೆ ಕಾಣುತ್ತಾರೆ. ಅಂಥ ವೈರಾಗ್ಯ ನಿಜವಾಗಿ ಉಂಟಾದುದೇ ಆದರೆ, ಮನೆಯನ್ನು ತ್ಯಜಿಸಿ ಹೋಗಲೇಬೇಕಾಗುತ್ತದೆ. ಸಂಸಾರದಲ್ಲಿ ಕೇವಲ ಅನಾಸಕ್ತರಾಗಿ ಇದ್ದುಕೊಂಡಿರುವುದು ಅವರಿಗೆ ತೃಪ್ತಿಯನ್ನು ತರದು.

D ಸಚ್ಚಿದಾನಂದನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳದೆ ಇತ್ತು ಎಂದರೆ, ಜೀವನ ಬರಿದೆ ವ್ಯರ್ಥ. ವಿವೇಕ ವೈರಾಗ್ಯಗಳಂಥ ವಸ್ತು ಇನ್ನು ಬೇರೆ ಯಾವುದೂ ಇಲ್ಲ. ಸಂಸಾರಿಗಳ ಅನುರಾಗ ಬಹಳ ಕ್ಷಣಿಕ – ಕಾದ ಬಾಣಲೆಯ ಮೇಲೆ ಬಿದ್ದ ನೀರಿನ ಹನಿಯ ಹಾಗೆ. ಒಂದು ಹೂವನ್ನು ನೋಡಿ ಬಹುಶಃ ಆತ ಹೇಳಬಹುದು: 'ಆಹ, ಭಗವಂತನ ಸೃಷ್ಟಿ ಎಷ್ಟು ಅದ್ಭುತವಾದದ್ದು!'

D ಸಂಸಾರಿಗಳ ಮನಸ್ಸು ಬಗ್ಗಡದ ನೀರಾಗಿಬಿಟ್ಟಿರುವುದೇನೋ ನಿಜ. ಆದರೆ ಅದಕ್ಕೆ ಶುದ್ಧೀಕರಣ ವಸ್ತು ಹಾಕಿದರೆ ಮತ್ತೆ ಶುದ್ಧ ಆಗಬಹುದು. ವಿವೇಕ ವೈರಾಗ್ಯಗಳೇ ಶುದ್ಧೀಕರಣ ವಸ್ತು.

D ವೈರಾಗ್ಯದಲ್ಲಿ ಎರಡು ವಿಧ – ತೀವ್ರ, ಮಂದ. ಮಂದವೈರಾಗ್ಯ – ಆಗುತ್ತಾ ಇದೆ, ಆಗುತ್ತೆ ಅನ್ನುವ ಹಾಗೆ; ಬಹಳ ನಿಧಾನವಾದ ತಾಳ. ತೀವ್ರ ವೈರಾಗ್ಯ – ಸಾಣೆ ಹಿಡಿಸಿದ ಕತ್ತಿಯ ಅಲಗಿನ ಹಾಗೆ; ಮಾಯಾಪಾಶವನ್ನು 'ಕಚ್, ಕಚ್' ಅಂತ ಕತ್ತರಿಸಿಬಿಡುತ್ತದೆ.

D ಒಬ್ಬನ ಹೆಂಡತಿ ತನ್ನ ಪತಿಗೆ ಹೇಳಿದಳು: 'ನೋಡಿ, ಆ ಮನೆಯವರಿಗೆ ದೊಡ್ಡ ವೈರಾಗ್ಯ ಬಂದುಬಿಟ್ಟಿದೆ – ಆದರೆ ನಿಮ್ಮಲ್ಲಿ ಅಂಥದೇನೂ ಎಳ್ಳಷ್ಟೂ ಕಾಣುತ್ತಿಲ್ಲ. ಅವರಿಗೆ ಹದಿನಾರು ಜನ ಹೆಂಡತಿಯರಿದ್ದಾರೆ. ಒಬ್ಬೊಬ್ಬಳನ್ನಾಗಿ ತ್ಯಾಗ ಮಾಡುತ್ತಿದ್ದಾರೆ.' ಆಗ ಆಕೆಯ ಪತಿ ಸ್ನಾನಕ್ಕೆ ಹೊರಟಿದ್ದ. ಹೆಗಲ ಮೇಲೆ ಚೌಕ ಇತ್ತು. ಹೇಳಿದ: 'ಎಲೇ ಹುಚ್ಚಿ! ಆತನಿಗೆ ತ್ಯಾಗ ಮಾಡಲು ಸಾಧ್ಯವಾಗುವುದಿಲ್ಲ. ತ್ಯಾಗದಲ್ಲಿ ಕಿಂಚಿತ್ ಎಂಬುದುಂಟೆ? ನನ್ನ ಕೈಯಲ್ಲಿ ಸಾಧ್ಯ. ಇಗೋ ನೋಡು! ಹೊರಟೆ ನಾನು.' ಆತ ಮನೆಯ ವ್ಯವಸ್ಥೆಯ ಸಂಬಂಧವಾಗಿ ಸ್ವಲ್ಪವೂ ಯೋಚಿಸದೆ, ಅದೇ ಅವಸ್ಥೆಯಲ್ಲಿ, ಎಂದರೆ ಮೇಲೆ ಚೌಕ ಹಾಕಿಕೊಂಡಿದ್ದ ಹಾಗೇ ಮನೆ ಬಿಟ್ಟು ಹೊರಟೇಹೋದ. ಇದಕ್ಕೆ ತೀವ್ರವೈರಾಗ್ಯ ಅಂತ ಹೆಸರು.

D ಭಗವಂತನ ಸಾಕ್ಷಾತ್ಕಾರವನ್ನು ಅಭಾವಮುಖ ಅಂದರೆ 'ನೇತಿ, ನೇತಿ', ಭಾವಮುಖ ಅಂದರೆ 'ಇತಿ, ಇತಿ' ಈ ಎರಡೂ ಮಾರ್ಗಗಳಿಂದಲೂ ಪಡೆಯಬಹುದು. ಮೊದಲನೆಯದು ವಿವೇಕ ವೈರಾಗ್ಯಗಳಿಂದ ಕೂಡಿದ ಭಾವಸೂಚಕ ಮಾರ್ಗ.

D ಒಬ್ಬ ರೈತ ಬಹಳ ದಿನಗಳಿಂದ ಕೆಲಸ ಮಾಡುತ್ತಿದ್ದಾನೆ. ಆದರೆ ಕೆರೆಯ ನೀರು ಮಾತ್ರ ಇನ್ನೂ ಆತನ ಗದ್ದೆಗೆ ಬಂದಿಲ್ಲ. ಆತನ ಮನಸ್ಸಿನಲ್ಲಿ ಪೌರುಷವಿಲ್ಲ. ಇನ್ನೊಬ್ಬ ಒಂದು ನಾಲ್ಕೈದು ದಿನ ಕೆಲಸ ಮಾಡಿದ ನಂತರ – 'ಇಂದು ಗದ್ದೆಗೆ ನೀರು ತಂದ ಮೇಲೇನೇ ಕೆಲಸ ನಿಲ್ಲಿಸುವುದು' ಎಂದು ಪ್ರತಿಜ್ಞೆ ಮಾಡಿಕೊಳ್ಳುತ್ತಾನೆ. ಸ್ನಾನ, ಊಟ ಇವುಗಳ ಭಾವನೆಯನ್ನೇ ಒಂದು ಮೂಲೆಗೆ ಕಟ್ಟಿಟ್ಟುಬಿಡುತ್ತಾನೆ. ಇಡೀ ದಿನವೆಲ್ಲಾ ಕೆಲಸ ಮಾಡುತ್ತಾನೆ. ಸಾಯಂಕಾಲದ ಹೊತ್ತಿಗೆ ಯಾವಾಗ ನೀರು ಆತನ ಗದ್ದೆಗೆ 'ಕಲ ಕಲ' ಅಂತ ಬರಲಾರಂಭಿಸುತ್ತದೋ ಆಗ ಆತನಿಗೆ ಬಹಳ ಆನಂದವಾಗಿಬಿಡುತ್ತದೆ. ಅನಂತರ ಮನೆಗೆ ಹಿಂದಿರುಗಿ ಹೆಂಡತಿಗೆ ಹೇಳುತ್ತಾನೆ, 'ಕೊಡು ಈಗ ಎಣ್ಣೆಯನ್ನು. ಸ್ನಾನ ಮಾಡುತ್ತೇನೆ.' ಸ್ನಾನ ಮುಗಿಸಿ, ಊಟ ಮಾಡಿ, ನಿಶ್ಚಿಂತನಾಗಿ ನಿದ್ರಿಸಲಾರಂಭಿಸುತ್ತಾನೆ.

'ಶ್ರೀರಾಮಕೃಷ್ಣ ವಚನವೇದ'ದಿಂದ

ಭಾಗ ೧

ಸ್ವಾಮಿ ಪ್ರೇಮಾನಂದರು

ಸ್ವಾಮಿ ಅಶೋಕಾನಂದ

ಅನುವಾದ: ಡಾ. ಇ. ವಸಂತಕುಮಾರ್

ಶ್ರೀರಾಮಕೃಷ್ಣರಿಂದ 'ಈಶ್ವರಕೋಟಿ'ಗಳೆಂದು ಕರೆಯಲ್ಪಟ್ಟ ಅವರ ಕೆಲವೇ ಮಂದಿ ಅಂತರಂಗ ಶಿಷ್ಯರಲ್ಲಿ ಒಬ್ಬರಾಗಿದ್ದರು ಸ್ವಾಮಿ ಪ್ರೇಮಾನಂದರು (೧೮೬೧-೧೯೧೮). ರಾಮಕೃಷ್ಣ ಮಹಾಸಂಘ ಆರಂಭಗೊಂಡ ದಿನಗಳಲ್ಲಿ ಯುವಪೀಳಿಗೆಯ ಸಾಧು, ಬ್ರಹ್ಮಚಾರಿಗಳ ಸ್ಫೂರ್ತಿಯ ಕೇಂದ್ರವಾಗಿದ್ದ ಅವರು, ಬೇಲೂರು ಮಠದ ಮ್ಯಾನೇಜರ್ ಆಗಿ ಅತಿ ಮಹತ್ವದ ಕಾರ್ಯ ನಿರ್ವಹಿಸಿದ್ದರು. ಆಧ್ಯಾತ್ಮಿಕ ವಿಷಯಗಳಲ್ಲಿ ಅವರು ಎಷ್ಟು ಕಟ್ಟುನಿಟ್ಟಾಗಿದ್ದರೋ ಅಷ್ಟೇ ಪ್ರೇಮಮಯರೂ ಆಗಿದ್ದರು. ಅವರೊಂದಿಗೆ ಅತ್ಯಂತ ನಿಕಟ ಸಂಪರ್ಕ ಹೊಂದಿದ್ದು, ಅವರ ಅಸೀಮ ಕೃಪೆಗೆ ಪಾತ್ರರಾಗಿದ್ದ ಸ್ವಾಮಿ ಅಶೋಕಾನಂದರು ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋದ ವೇದಾಂತ ಸೊಸೈಟಿಯ ಮುಖ್ಯಸ್ಥರಾಗಿದ್ದರು. ಪಶ್ಚಿಮದಲ್ಲಿ ಶ್ರೀರಾಮಕೃಷ್ಣ - ವಿವೇಕಾನಂದ ಭಾವಧಾರೆ ಹರಡಲು ಅವರು ವಹಿಸಿದ ಪಾತ್ರ ಪ್ರಮುಖವಾದುದು. ಪ್ರೇಮಾನಂದರನ್ನು ಕುರಿತು ಅವರು ರಚಿಸಿರುವ ಈ ಹೃದಯಂಗಮವಾದ ಸ್ಮೃತಿಚಿತ್ರವನ್ನು ಕನ್ನಡಕ್ಕೆ ಸರಳ, ಸುಂದರವಾಗಿ ತಂದ ಅನುವಾದಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು. ಅವರು ಉತ್ತಮ ಲೇಖಕರೂ ವಾಗ್ಮಿಗಳೂ ಆಗಿದ್ದಾರೆ; ಅವರ ಅನೇಕ ಲೇಖನಗಳು '**ವಿವೇಕಪ್ರಭ**'ದಲ್ಲಿ ಪ್ರಕಟವಾಗಿವೆ.

– ೧ –

ಅವತಾರಪುರುಷರಾದ ಶ್ರೀರಾಮಕೃಷ್ಣರ ಒಂದು ವಿಶೇಷವೆಂದರೆ, ಅವರು ಅದ್ಭುತ ಆಧ್ಯಾತ್ಮಿಕ ವ್ಯಕ್ತಿಗಳನ್ನು ತಮ್ಮೊಡನೆ ಕರೆತಂದರು. ಅನಂತರ ಅವರು ಶ್ರೀರಾಮಕೃಷ್ಣರ ಶಿಷ್ಯರಾದರು. ಅವರಲ್ಲೊಬ್ಬರು ಸ್ವಾಮಿ ಪ್ರೇಮಾನಂದರು. ಅವರನ್ನು ಕಂಡು, ಅವರೊಂದಿಗೆ ಒಂದು ಸಂಬಂಧವನ್ನು ಪಡೆಯುವ ಮಹಾಭಾಗ್ಯ ನನ್ನದಾಗಿತ್ತು. ಅವರ ಬಳಿ ನಾನು ಅನೇಕ ಬಾರಿ ಹೋಗಿದ್ದೆ ಮತ್ತು ಅವರ ಆಶೀರ್ವಾದವನ್ನು ಅನೇಕ ಬಾರಿ ಪಡೆದಿದ್ದೆ. ಅವರು ನನ್ನ ಮೇಲೆ ಅನಂತ ಕೃಪೆ ತೋರಿದರು. ನಾನು ಅವರಿಗೆ ವಿಶೇಷವಾಗಿ ಋಣಿಯಾಗಿರುವೆನೆಂದು ಹೇಳಿದರೆ ತಪ್ಪಾಗಲಾರದು.

ಅವರು ಒಬ್ಬ ಅತ್ಯಂತ ವಿಶೇಷ ವ್ಯಕ್ತಿಯಾಗಿದ್ದರು. ಹೆಸರಿಗೆ ತಕ್ಕಂತೆ ಅವರು ಪ್ರೇಮಸ್ವರೂಪರಾಗಿದ್ದರು. ಅವರಲ್ಲಿ ಆಧ್ಯಾತ್ಮಿಕ ಆನಂದ ಅವ್ಯಾಹತವಾಗಿ ಹರಿಯುತ್ತಿತ್ತು. ಶ್ರೀರಾಮಕೃಷ್ಣರ ಶಿಷ್ಯರಲ್ಲೆಲ್ಲ ಸ್ವಾಭಾವಿಕವಾಗಿ ದಿವ್ಯಪ್ರೇಮ ಮತ್ತು ದಿವ್ಯ ಆನಂದ ಮುಂತಾದ ಆಧ್ಯಾತ್ಮಿಕ ಗುಣಗಳೆಲ್ಲ ವ್ಯಕ್ತವಾಗಿದ್ದವು. ಆದರೆ ಸ್ವಾಮಿ ಪ್ರೇಮಾನಂದರಲ್ಲಿ ದಿವ್ಯಪ್ರೇಮ ವಿಶೇಷವಾಗಿ ವ್ಯಕ್ತವಾಗಿತ್ತು. ಅವರು ಪ್ರೇಮ ಮತ್ತು ಪರಿಶುದ್ಧತೆ ಮೂರ್ತಿವೆತ್ತಂತಿದ್ದರು. ಶ್ರೀರಾಮಕೃಷ್ಣರು ತಮ್ಮ ಬಳಿಗೆ ಬಂದವರಲ್ಲೆಲ್ಲ ಪ್ರೇಮಾನಂದರನ್ನು ಅತ್ಯಂತ ಪರಿಶುದ್ಧಾತ್ಮರು ಎಂದು ಹೇಳುತ್ತಿದ್ದರು.

ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನು ಅನೇಕ ವಿಧಗಳಲ್ಲಿ ವರ್ಗೀಕರಿಸುತ್ತಿದ್ದರು; ಕೆಲವರನ್ನು ಈಶ್ವರಕೋಟಿಗಳೆಂದು ಕರೆಯುತ್ತಿದ್ದರು, ಉಳಿದವರನ್ನು ಜೀವಕೋಟಿಗಳೆಂದು ಕರೆಯುತ್ತಿದ್ದರು. ಜೀವಕೋಟಿಗಳೆಂದರೆ, ಯಾರು ತಮ್ಮ ಮುಕ್ತಿಯನ್ನು ಬಯಸುವರೊ ಅವರು. ಮುಕ್ತಿ ಪಡೆದರೆಂದರೆ ಅವರ ಜೀವನ ಅಲ್ಲಿಗೆ ಕೊನೆಯಾಗುವುದು. ಆದರೆ ಕೆಲವರಿರುವರು. ಅವರು ಮುಕ್ತರಾಗಿದ್ದರೂ, ದೇವರಲ್ಲದೆ ಬೇರೇನೂ ಅವರಿಗೆ ಬೇಕಾಗಿಲ್ಲದಿದ್ದರೂ, ಸದಾ ಭಗವದಾನಂದವನ್ನು ಸವಿಯುತ್ತಿದ್ದರೂ, ಅವರ ಹೃದಯ ಇತರರ ಕಷ್ಟಕ್ಕೆ ಮಿಡಿಯುವುದು, ಇತರರ ಮುಕ್ತಿಗೆ ಅವರು ಶ್ರಮಿಸುವರು. ಅವರೇ ಈಶ್ವರಕೋಟಿಗಳು. ಶ್ರೀರಾಮಕೃಷ್ಣರೆಡೆಗೆ ಬಂದ ಅನೇಕ ಶಿಷ್ಯರಲ್ಲಿ ಆರು ಜನರನ್ನು ಮಾತ್ರ ಈಶ್ವರಕೋಟಿಗಳೆಂದು ಅವರು ಹೇಳುತ್ತಿದ್ದರು. ಅವರೇ ಸ್ವಾಮಿ ವಿವೇಕಾನಂದರು, ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಪ್ರೇಮಾನಂದರು, ಸ್ವಾಮಿ ಯೋಗಾನಂದರು, ಸ್ವಾಮಿ ನಿರಂಜನಾನಂದರು, ಮತ್ತು ಗೃಹಸ್ಥ ಭಕ್ತರಾದ ಪೂರ್ಣಚಂದ್ರಘೋಷ್ ಎಂಬುವರು.

ಸ್ವಾಮಿ ಪ್ರೇಮಾನಂದರು ಅನೇಕ ರೀತಿಯಲ್ಲಿ ಅಸಾಧಾರಣ ವ್ಯಕ್ತಿಯಾಗಿದ್ದರು. ಅವರ ರೂಪವೂ ವಿಶೇಷವಾಗಿತ್ತು. ಅವರು ಬಾಣದಂತೆ ನೇರವಾಗಿದ್ದರು, ಎತ್ತರವಾಗಿ ತೆಳ್ಳಗಿದ್ದರು. ತಲೆಗೂದಲು ಕಡುಗಪ್ಪಾಗಿತ್ತು. ಮೈಬಣ್ಣ ಅಪರಂಜಿಯಂತಿತ್ತು. ಅವರು ಭಾವದಲ್ಲಿ ಲೀನರಾದಾಗ ಅವರ ಮುಖ ಹೊಂಬಣ್ಣಕ್ಕೆ

ತಿರುಗುತ್ತಿತ್ತು. ಅಂತಹ ಸ್ಥಿತಿಯಲ್ಲಿ ಅವರನ್ನು ನಾನು ಅನೇಕ ವೇಳೆ ನೋಡಿದ್ದೇನೆ.

ಸ್ವಾಮಿ ಪ್ರೇಮಾನಂದರ ಪೂರ್ವಾಶ್ರಮದ ಹೆಸರು, ಬಾಬು ರಾಮ ಘೋಷ್. ಅವರು ಹುಟ್ಟಿದುದು ೧೮೬೧ರ ಡಿಸೆಂಬರ್ ೧೦ರಂದು. ಕಲ್ಕತ್ತೆಯಿಂದ ಸುಮಾರು ೩೦ ಮೈಲಿ ದೂರದಲ್ಲಿರುವ ಆಂಟ್‌ಪುರವೆಂಬ, ಗಂಗಾನದಿಗೆ ಸಮೀಪದಲ್ಲಿರುವ ಹಳ್ಳಿಯಲ್ಲಿ ಅವರ ಜನನವಾಯಿತು. ಅವರ ತಂದೆ ಮತ್ತು ತಾಯಿ ಶ್ರೀಮಂತ ಮನೆತನಕ್ಕೆ ಸೇರಿದವರು. ಸ್ವಾಮಿಗಳ ಬಾಲ್ಯಕಾಲದ ವಿವರಗಳು ಅಷ್ಟಾಗಿ ತಿಳಿದಿಲ್ಲ; ಎರಡು ಘಟನೆಗಳು ಪ್ರಚಲಿತವಾಗಿವೆ. ಅವರು ಕೇವಲ ನಾಲ್ಕೈದು ವರ್ಷಗಳ ಬಾಲಕನಾಗಿದ್ದಾಗಲೆ ಯಾರಾದರೂ ಮದುವೆಯ ವಿಷಯವನ್ನು ಪ್ರಸ್ತಾಪಿಸಿದರೆ ಅವರಿಗೆ ಸಹಿಸ ಲಾಗುತ್ತಿರಲಿಲ್ಲ. ''ದಯವಿಟ್ಟು ಅದರ ವಿಷಯ ಮಾತನಾಡ ಬೇಡಿ, ನನ್ನನ್ನು ಮದುವೆಯಾಗುವಂತೆ ಮಾಡಬೇಡಿ! ಹಾಗೆ ಮಾಡಿದರೆ ನಾನು ಸಾಯುವೆ'' ಎಂದು ಅಳುತ್ತಿದ್ದರು. ಮತ್ತೊಂದು ಸಂಗತಿಯೆಂದರೆ, ಅವರು ಎಂಟು ವರ್ಷದವರಾಗಿದ್ದಾಗ, ತಾವು ಗಂಗಾನದಿಯ ದಡದಲ್ಲಿ ಒಂದು ಸುಂದರವಾದ ವನಪ್ರದೇಶದಲ್ಲಿ ಮತ್ತೊಬ್ಬ ಸಂನ್ಯಾಸಿಯೊಂದಿಗೆ ದೇವರ ಧ್ಯಾನ ಮಾಡುತ್ತಿರುವಂತೆ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಿದ್ದರಂತೆ.

ಭಗವದ್ಭಕ್ತಿ ಅವರ ವಂಶದ ಗುಣವೆಂದು ತೋರುವುದು. ಅವರ ತಂದೆ ಮತ್ತು ತಾಯಿಯ ಕಡೆ ಅನೇಕ ಭಕ್ತರು ಇದ್ದರು. ಅಲ್ಲದೆ, ಅವರ ಸಹೋದರಿ ವಿವಾಹವಾಗಿದ್ದುದು ಒಬ್ಬ ದೊಡ್ಡ ಭಗವ ದ್ಭಕ್ತರೊಂದಿಗೆ. ಅವರ ಹೆಸರು ಬಲರಾಮ ಬೋಸ್. ವಾಸ್ತವವಾಗಿ ಇವರೇ ಮುಂದೆ ತನ್ನ ಮನೆಯವರೆಲ್ಲರನ್ನೂ ಮತ್ತು ಸ್ವಾಮಿ ಪ್ರೇಮಾನಂದರ ತಾಯಿಯಾದ ತನ್ನ ಅತ್ತೆಯನ್ನೂ ಶ್ರೀರಾಮಕೃಷ್ಣರ ಬಳಿಗೆ ಕರೆದೊಯ್ದವರು. ಸ್ವಾಮಿ ಪ್ರೇಮಾನಂದರೂ ಕೂಡ ಶ್ರೀರಾಮಕೃಷ್ಣರ ಬಗ್ಗೆ ಇವರಿಂದಲೇ ಕೇಳಿರಬೇಕು. ಆದರೂ ಅವರು ಶ್ರೀರಾಮಕೃಷ್ಣರನ್ನು ಮೊದಲು ನೋಡಲು ಹೋದುದು ಸ್ವಾಮಿ ಬ್ರಹ್ಮಾನಂದರೊಡನೆ. ಆಗ ಬ್ರಹ್ಮಾನಂದರನ್ನು 'ರಾಖಾಲ್' ಎಂದು ಕರೆಯುತ್ತಿದ್ದರು. ಇಬ್ಬರು ಯುವಕರೂ ಒಂದೇ ಪ್ರೌಢಶಾಲೆಯಲ್ಲಿ ಓದುತ್ತಿದ್ದು, ಅನ್ಯೋನ್ಯ ಸ್ನೇಹಿತರಾಗಿದ್ದರು. ರಾಖಾಲ ಆಗಾಗ ಶ್ರೀರಾಮಕೃಷ್ಣರನ್ನು ನೋಡಲು ದಕ್ಷಿಣೇಶ್ವರಕ್ಕೆ ಹೋಗುತ್ತಿದ್ದುದು ಬಾಬುರಾಮನಿಗೆ ಗೊತ್ತಿತ್ತು. ಒಂದು ದಿನ ತನ್ನನ್ನೂ ಕರೆದುಕೊಂಡು ಹೋಗುವಂತೆ ಅವನು ರಾಖಾಲನಿಗೆ ಹೇಳಿದನು. ಅವರಿಬ್ಬರೂ ಒಂದು ಶನಿವಾರ ಮಧ್ಯಾಹ್ನ ಗಂಗಾನದಿಯ ದಡದಲ್ಲಿ ಭೇಟಿ ಯಾದರು. ಅವರಿಬ್ಬರಿಗೂ ಪರಿಚಯವಿದ್ದ ರಾಮದಯಾಲ ಎಂಬ ಶ್ರೀರಾಮಕೃಷ್ಣರ ಭಕ್ತನ ಜೊತೆ ದೋಣಿಯಲ್ಲಿ ದಕ್ಷಿಣೇಶ್ವರಕ್ಕೆ ಹೋದರು. ಆಗ ೧೮೮೨ರ ಶರತ್ಕಾಲ. ಅವರು ದಕ್ಷಿಣೇಶ್ವರವನ್ನು ಸೇರುವ ಹೊತ್ತಿಗೆ ಕತ್ತಲಾಗಿತ್ತು; ಶ್ರೀರಾಮಕೃಷ್ಣರ ಕೋಣೆಗೆ ಹೋದಾಗ ಅವರು ಅಲ್ಲಿರಲಿಲ್ಲ. ಆದರೆ ರಾಖಾಲನಿಗೆ ಗೊತ್ತಿತ್ತು, ಅವರನ್ನು ಎಲ್ಲಿ ಹುಡುಕಬೇಕೆಂಬುದು. ಅವನು ಕಾಳೀಮಂದಿರಕ್ಕೆ ಹೋಗಿ ಸ್ವಲ್ಪ ಹೊತ್ತಿನಲ್ಲಿ ಶ್ರೀರಾಮಕೃಷ್ಣರೊಡನೆ ಹಿಂತಿರುಗಿದನು. ಅವನು ಶ್ರೀರಾಮಕೃಷ್ಣರ ತೋಳನ್ನು ಹಿಡಿದುಕೊಂಡು, ''ಇಲ್ಲಿ ಮೆಟ್ಟಿಲಿದೆ, ಇಲ್ಲಿ ಇಳಿಯಬೇಕು, ಇಲ್ಲಿ ಹತ್ತಬೇಕು'' ಎಂದು ಹೇಳುತ್ತ ಅವರ ಕೋಣೆಗೆ ಕರೆತಂದನು.

ಶ್ರೀರಾಮಕೃಷ್ಣರು ಒಂದು ಮಂಚದಮೇಲೆ ಕುಳಿತುಕೊಂಡರು. ಭಗವದ್ಭಾವದಲ್ಲಿ ಮತ್ತರಾಗಿದ್ದ ಅವರು ಈಗ ಪ್ರಕೃತಿಸ್ಥರಾದರು. ಅವರು ಬಾಬುರಾಮನೊಂದಿಗೆ ಮಾತನಾಡಿ ಅವನನ್ನು ಅತ್ಯಂತ ಆದರದಿಂದ ಸ್ವಾಗತಿಸಿದರು. ಅವರ ಕೋಣೆಯಲ್ಲಿ ಒಂದು ದೀಪ ಮಂದವಾಗಿ ಉರಿಯುತ್ತಿತ್ತು. ದೀಪದ ಹತ್ತಿರ, ''ಬಾ, ನಿನ್ನನ್ನು ನೋಡಬೇಕು'' ಎಂದು ಬಾಬುರಾಮನಿಗೆ ಹೇಳಿ, ಅವನ ಕೈಗಳು, ಕಾಲು, ಮುಖ ಎಲ್ಲವನ್ನೂ ಕೂಲಂಕಷವಾಗಿ ಪರೀಕ್ಷಿಸಿ ತೃಪ್ತಿ ವ್ಯಕ್ತ ಪಡಿಸಿದರು. ಅವನ ಕೈಗಳನ್ನು ತಮ್ಮ ಕೈಗಳಿಂದ ತೂಗಿ ನೋಡಿ ಸಂತೋಷದಿಂದ, ''ಬಹಳ ಒಳ್ಳೆಯದು, ಬಹಳ ಒಳ್ಳೆಯದು'' ಎಂದು ಹೇಳಿದರು.

ಬಾಬುರಾಮ ಅಲ್ಲಿ ಕಳೆದ ರಾತ್ರಿ ವಿಚಿತ್ರವಾಗಿತ್ತು. ಶ್ರೀರಾಮ ಕೃಷ್ಣರು ಬಾಬುರಾಮನಿಗೆ ತಮ್ಮ ಕೊಠಡಿಯಲ್ಲೆ, ರಾಖಾಲನೊಂದಿಗೆ ಮಲಗಲು ಹೇಳಿದರು. ಆದರೆ ಬಾಬುರಾಮ ಹೊರಗಡೆ ಮಲಗು ವುದಾಗಿ ಹೇಳಿದನು. ತನ್ನ ಜತೆ ಬಂದಿದ್ದ ಸ್ನೇಹಿತನೊಂದಿಗೆ ವರಾಂಡದಲ್ಲಿ ಮಲಗಿದನು. ನಿದ್ರೆ ಹತ್ತುವಷ್ಟರಲ್ಲಿ ಶ್ರೀರಾಮಕೃಷ್ಣರು ಹೊರಗೆ ಬಂದು ವಯಸ್ಸಾಗಿದ್ದವನೊಂದಿಗೆ ಮಾತನಾಡಲು ಪ್ರಾರಂ ಭಿಸಿದರು. ''ರಾಮದಯಾಲ, ನಿದ್ರಿಸುತ್ತಿರುವೆಯಾ?'' ಎಂದು ಕೇಳಿದರು. ಸಹಜವಾಗಿ ಇಬ್ಬರೂ ಎದ್ದುಕುಳಿತು, ''ಇಲ್ಲ ಸ್ವಾಮಿ, ಇಲ್ಲ'' ಎಂದರು. ''ನೋಡು, ನರೇನ್ ಬಹಳ ದಿನಗಳಿಂದ ಇಲ್ಲಿಗೆ ಬಂದಿಲ್ಲ, ಅವನಿಗೆ ಹೇಳುವೆಯಾ? ಅವನನ್ನು ಕಾಣದೆ ನನ್ನ ಹೃದಯ ಹಿಂಡಿದಂತಾಗುತ್ತಿದೆ'' ಎಂದು ಹೇಳುತ್ತ ತಮ್ಮ ಕೈಯ ಲ್ಲಿದ್ದ ಚೌಕವನ್ನು ತಿರುಚಿ ತೋರಿಸಿ, ''ಹೀಗೆ ನನ್ನ ಹೃದಯ ಹಿಂಡು ತ್ತಿದೆ. ನೀನು ಅವನಿಗೆ ಹೇಳು. ಅವನು ಬಾರದಿದ್ದರೆ ನನಗೆ ಎಷ್ಟು ಹಿಂಸೆಯಾಗುತ್ತದೆ ಎನ್ನುವುದು ಅವನಿಗೆ ಅರ್ಥವಾಗುವುದಿಲ್ಲ. ದಯವಿಟ್ಟು ಅವನಿಗೆ ಹೇಳುವೆಯಾ?'' ಎಂದರು. ''ಆಗಲಿ, ಸ್ವಾಮಿ, ನಾನು ನಾಳೆ ಬೆಳಗ್ಗೆ ಕಲ್ಕತ್ತೆಗೆ ಹಿಂತಿರುಗಿದ ಕೂಡಲೆ ಅವನಿಗೆ ತಿಳಿಸುತ್ತೇನೆ'' ಎಂದು ರಾಮದಯಾಲ ಹೇಳಿದ ನಂತರ ಶ್ರೀರಾಮಕೃಷ್ಣರು ತಮ್ಮ ಕೊಠಡಿಗೆ ಹಿಂತಿರುಗಿದರು. ಆದರೆ ಸ್ವಲ್ಪ ಹೊತ್ತಿನಲ್ಲೆ ಅವರು ಮತ್ತೆ ಬಂದರು, ನರೇಂದ್ರನಿಗೆ ಹೇಳುವಂತೆ ರಾಮದಯಾಲನಿಗೆ ಮತ್ತೊಮ್ಮೆ ಹೇಳಿದರು. ರಾತ್ರಿಯೆಲ್ಲ ಅವರು ಹೀಗೆ ಬಂದುಹೋಗುತ್ತಿದ್ದರು. ಮತ್ತೆ ಮತ್ತೆ ರಾಮದಯಾಲನನ್ನು ಎಬ್ಬಿಸಿ, ''ಮಲಗಿರುವೆಯಾ? ನೀನು ಹೋಗಿ ನರೇಂದ್ರನಿಗೆ ಹೇಳಬೇಕು. ನಾನು ಹೇಗೆ ಕಷ್ಟಪಡುತ್ತಿರುವೆ? ಮರೆಯಬೇಡ. ಅವನಿಗೆ ಹೇಳುವೆಯಾ? ಅವನಿಗೆ ವಿವರಿಸುವೆಯಾ?'' ಎಂದು ರಾತ್ರಿಯೆಲ್ಲ ಹೇಳುತ್ತಿದ್ದರು. ಸಹಜವಾಗಿ ಬಾಬುರಾಮನಿಗೆ ನಿದ್ರಿಸ ಲಾಗಲಿಲ್ಲ. ಅವನು ಈ ನಾಟಕ ನಡೆಯುವುದನ್ನು ನೋಡು ತ್ತಿದ್ದನು. ಶ್ರೀರಾಮಕೃಷ್ಣರು ಇಷ್ಟೊಂದು ಹಂಬಲಿಸುತ್ತಿರುವ ಮತ್ತು ಅವರಿಗೆ ಇಷ್ಟೊಂದು ಕಷ್ಟ ಕೊಡುತ್ತಿರುವ ನರೇಂದ್ರನೆಂಬ ಈ

ಯುವಕ ಎಂತಹ ವ್ಯಕ್ತಿಯಾಗಿರಬಹುದು ಎಂದು ಬಾಬುರಾಮನು ಯೋಚಿಸಿದನು.

ಬೆಳಗ್ಗೆ ಶ್ರೀರಾಮಕೃಷ್ಣರು ಎಂದಿನಂತೆ ಇದ್ದುದನ್ನು ಬಾಬುರಾಮ ನೋಡಿದನು. ರಾತ್ರಿಯೆಲ್ಲ ಇದ್ದ ಕಳವಳ ಈಗ ಕಾಣುತ್ತಿರಲಿಲ್ಲ, ಶಾಂತರಾಗಿದ್ದರು. ಬಾಬುರಾಮನನ್ನು ಶ್ರೀರಾಮಕೃಷ್ಣರು ಪಂಚವಟಿಗೆ ಹೋಗುವಂತೆ ಹೇಳಿದರು. ಅಲ್ಲಿಗೆ ಹೋದಾಗ, ಅದು ತನ್ನ ಬಾಲ್ಯಕಾಲದ ಕಲ್ಪನೆಯ ಗಂಗಾತೀರದ ಸುಂದರ ಉದ್ಯಾನವನದಂತೆಯೇ ಇದ್ದುದನ್ನು ನೋಡಿ ಆಶ್ಚರ್ಯಚಕಿತನಾದನು. ಬೆಳಗ್ಗೆ ಕಲ್ಕತ್ತೆಗೆ ಹಿಂತಿರುಗುವಾಗ ಶ್ರೀರಾಮಕೃಷ್ಣರು, ''ಮತ್ತೊಮ್ಮೆ ಬಾ'' ಎಂದು ಹೇಳಿದರು. ಮುಂದೆ ತಮ್ಮ ಶಿಷ್ಯರಾಗುವವರ ಮೇಲೆ ಶ್ರೀರಾಮಕೃಷ್ಣರು ಪ್ರಯೋಗಿಸುತ್ತಿದ್ದ ಪ್ರೇಮಾಸ್ತ್ರ ಇದಾಗಿತ್ತು.

ಕೇವಲ ಮೂರು ದಿನಗಳ ನಂತರ, ದಕ್ಷಿಣೇಶ್ವರಕ್ಕೆ ಬರುವಂತೆ ಶ್ರೀರಾಮಕೃಷ್ಣರು ಬಾಬುರಾಮನಿಗೆ ಹೇಳಿಕಳುಹಿಸಿದರು. ಮಾರನೇ ದಿನ ಬೆಳಗ್ಗೆ ಬಾಬುರಾಮ ದಕ್ಷಿಣೇಶ್ವರಕ್ಕೆ ಬಂದಾಗ, ಅವನಿಗೆ ಪಂಚವಟಿಗೆ ಹೋಗುವಂತೆ ಹೇಳಿದರು. ಅಲ್ಲಿ ಅವನ ಮಿತ್ರನಾದ ರಾಖಾಲ ಮತ್ತು ಪ್ರಸಿದ್ಧನಾಗಿದ್ದ ನರೇಂದ್ರ ಇದ್ದರು. ಬಾಬುರಾಮ ನರೇಂದ್ರನನ್ನು ನೋಡಿದ. ಶ್ರೀರಾಮಕೃಷ್ಣರು ತೋರುತ್ತಿದ್ದ ಅಪಾರ ಪ್ರೀತಿಗೆ ಅವನು ನಿಜವಾಗಿಯೂ ಪಾತ್ರನೆನ್ನಿಸಿತು. ಆ ಕ್ಷಣವೇ ಬಾಬುರಾಮನ ಮನಸ್ಸು ನರೇಂದ್ರನತ್ತ ಆಕರ್ಷಿತವಾಯಿತು. ಬಾಬುರಾಮನ ಶಿಷ್ಯಜೀವನ ಹೀಗೆ ಪ್ರಾರಂಭವಾಯಿತು. ಅನಂತರ ಅವನು ದಕ್ಷಿಣೇಶ್ವರಕ್ಕೆ ಆಗಾಗ್ಗೆ ಹೋಗಲಾರಂಭಿಸಿದನು. ಆಗ ಅವನ ವಯಸ್ಸು ೨೦ ವರ್ಷ. ಅವನು ಇನ್ನೂ ಹೈಸ್ಕೂಲಿನಲ್ಲಿ ಓದುತ್ತಿದ್ದ. ವ್ಯಾಸಂಗದ ಮೇಲೆ ಅವನಿಗೆ ಆಸಕ್ತಿ ಇರಲಿಲ್ಲವೆಂದು ಕಾಣುವುದು. ಶ್ರೀರಾಮಕೃಷ್ಣರನ್ನು ಭೇಟಿ ಮಾಡಿದ ಬಳಿಕ ಈ ಅನಾಸಕ್ತಿ ಇನ್ನೂ ಹೆಚ್ಚಾಯಿತು. ಅವನು ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಲ್ಲ. ಅದಕ್ಕೆ ಶ್ರೀರಾಮಕೃಷ್ಣರು ಏನು ಹೇಳುವರೋ ಎಂದು ಭಯಪಟ್ಟಿದ್ದ. ಆದರೆ ಅವರು ಹಾಸ್ಯವಾಗಿ, ''ಒಳ್ಳೆಯದು, ನೀನು ಪಾಸಾಗುವುದರಲ್ಲಿ ಫೇಲಾದೆ, ನೀನೀಗ ಎಲ್ಲ ಪಾಸುಗಳಿಂದ ಮುಕ್ತನಾದೆ'' ಎಂದು ಹೇಳಿದರು. (ಬಂಗಾಳಿಯಲ್ಲಿ, ಪಾಸ್ ಎಂದರೆ ಬಂಧನ ಎಂದು ಅರ್ಥ.) ಸ್ವಲ್ಪ ಕಾಲದ ನಂತರ, ಆಗಲೇ ಶ್ರೀರಾಮಕೃಷ್ಣರ ಭಕ್ತೆಯಾಗಿದ್ದ ಬಾಬುರಾಮನ ತಾಯಿ ದಕ್ಷಿಣೇಶ್ವರಕ್ಕೆ ಬಂದಳು. ಅವಳಿಗೆ ಶ್ರೀರಾಮಕೃಷ್ಣರು, ''ನನಗೆ ಏನೋ ಒಂದು ವಸ್ತು ಬೇಕಾಗಿದೆ. ಅದನ್ನು ನೀನು ಕೊಡುವೆಯಾ?'' ಎಂದು ಕೇಳಿದರು. ಅದಕ್ಕೆ ಆಕೆ, ''ಅದೇನೇ ಆದರೂ ಕೊಡುವೆ'' ಎಂದು ಹೇಳಿದಳು. ಶ್ರೀರಾಮಕೃಷ್ಣರು: ''ನಿನ್ನ ಮಗನನ್ನು ಕೊಡುವೆಯಾ? ಶುದ್ಧ ಮನಸ್ಸಿನ ಹುಡುಗನೊಬ್ಬ ಇಲ್ಲಿ ಇರಬೇಕೆಂದು ನನ್ನ ಇಚ್ಛೆ.'' ಅದಕ್ಕೆ ಉತ್ತರವಾಗಿ ಆಕೆ, ''ನೀವು ಅವನನ್ನು ಒಪ್ಪಿಕೊಳ್ಳುವುದು ಮತ್ತು ಅವನು ನಿಮ್ಮೊಡನೆ ವಾಸಿಸುವುದು ನನ್ನ ಮಹಾಭಾಗ್ಯ. ಆದರೆ, ನಾನು ಎರಡನ್ನು ಕೇಳಿಕೊಳ್ಳುತ್ತೇನೆ: ಒಂದು, ದೇವರಲ್ಲಿ ನನಗೆ ಭಕ್ತಿ ಎಂದೂ ಕುಂದದಿರಲಿ; ಮತ್ತೊಂದು, ನನ್ನ ಯಾವ ಮಕ್ಕಳೂ ನನಗಿಂತ ಮುಂಚೆ ಸಾಯದಿರಲಿ'' ಎಂದಳು. ಶ್ರೀರಾಮಕೃಷ್ಣರು ಅವಳ ಆ ಎರಡು ವರಗಳನ್ನೂ ಕರುಣಿಸಿದರು.

ಅಲ್ಲಿಂದಾಚೆಗೆ ಬಾಬುರಾಮನು ಆಗಾಗ್ಗೆ ಬಂದು ಶ್ರೀರಾಮಕೃಷ್ಣರೊಡನೆ ಇರುತ್ತ ಅವರನ್ನು ನೋಡಿಕೊಳ್ಳುತ್ತಿದ್ದನು. ಶ್ರೀರಾಮಕೃಷ್ಣರು ಆಗಾಗ್ಗೆ ಸಮಾಧಿಸ್ಥಿತಿಗೆ ಹೋಗುತ್ತಿದ್ದರು. ಆ ಸಮಯದಲ್ಲಿ ಅವರು ನಿಂತಿದ್ದರೆ, ಬೀಳುವ ಸಂಭವವಿತ್ತು. ಅಂತಹ ಸ್ಥಿತಿಯಲ್ಲಿ ಅವರನ್ನು ಸಾಮಾನ್ಯರು ಮುಟ್ಟಿದರೆ ಅವರಿಗೆ ಬಹಳ ನೋವಾಗುತ್ತಿತ್ತು. ಆದ್ದರಿಂದ ಪರಿಶುದ್ಧಾತ್ಮರಾದವರು ಅವರೊಡನೆ ಸದಾ ಇರಬೇಕಾಗುತ್ತಿತ್ತು. ಬಾಬುರಾಮ ಅವರೊಡನೆ ಇದ್ದುದರಿಂದ ಅವರಿಗೆ ಅನುಕೂಲವಾಯಿತು. ಶ್ರೀರಾಮಕೃಷ್ಣರು ಅವನನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಕೆಲವು ವೇಳೆ ಅವನು ಕಲ್ಕತ್ತೆಗೋ ಅವನ ಹಳ್ಳಿಗೋ ಹೋಗಬೇಕಾಗಿ ಬಂದರೆ ಅವರು ಅಳುತ್ತಿದ್ದರು. ಅವನು ಕಲ್ಕತ್ತೆಯಲ್ಲಿದ್ದರೆ, ತಾವೇ ಅಲ್ಲಿಗೆ ಹೋಗಿ ಸಿಹಿತಿಂಡಿಯನ್ನು ತಮ್ಮ ಕೈಯಿಂದ ತಿನ್ನಿಸುತ್ತಿದ್ದರು. ಕೆಲವೊಮ್ಮೆ ತಮಗೆ ಗಾಳಿ ಹಾಕುತ್ತಿದ್ದಾಗ ಯುವ ಶಿಷ್ಯನಿಗೆ ನಿದ್ರೆ ಬಂದುಬಿಟ್ಟರೆ, ಅವನಿಗೆ ದಿಂಬನ್ನು ಹೊಂದಿಸಿ, ತಾವು ಪಕ್ಕದಲ್ಲಿ ಕುಳಿತು ಅವನಿಗೆ ಸಮಾಧಾನ ಮಾಡಿ ಮಲಗಿಸುತ್ತಿದ್ದರು. ಭಗವದ್ಭಾವದಲ್ಲಿ ತಲ್ಲೀನರಾದವರು ಒಂದು ಸಣ್ಣ ಕೆಲಸವನ್ನು ಮಾಡಿದರೂ ಅದು ಅದ್ಭುತವೆನಿಸುವುದು. ಅದರ ಮೂಲಕ ನಮಗೆ ಭಗವಂತನ ಪ್ರೇಮದ ಅರಿವಾಗುವುದು. ಅಂತಹ ಪ್ರೀತಿಯನ್ನು ನಾನು ಶ್ರೀರಾಮಕೃಷ್ಣರ ಅನೇಕ ಪ್ರಮುಖ ಶಿಷ್ಯರಿಂದ ಅನುಭವಿಸಿರುವೆನು.

ಮುಂದೆ ಸ್ವಾಮಿ ಪ್ರೇಮಾನಂದರು ಹೇಳುತ್ತಿದ್ದರು: ''ಶ್ರೀರಾಮಕೃಷ್ಣರು ಸುಮ್ಮನೆ ನಮ್ಮ ಹೃದಯವನ್ನು ಗೆದ್ದುಬಿಡುತ್ತಿದ್ದರು! ಅವರು ವಿನೋದಪ್ರಿಯರು. ಅವರೊಂದಿಗೆ ಇರುವುದಕ್ಕೆ ಆನಂದವಾಗುತ್ತಿತ್ತು, ಸದಾ ಅವರೊಂದಿಗೆ ಇರಬೇಕೆನಿಸುತ್ತಿತ್ತು. ಅವರು ನಮ್ಮ ಮೇಲೆ ಹರಿಸುತ್ತಿದ್ದ ಪ್ರೇಮಕ್ಕೆ ಹೋಲಿಸಿದರೆ, ತಂದೆತಾಯಿಗಳ ಪ್ರೇಮ ಅದರ ಹತ್ತಿರಕ್ಕೂ ಬರಲಾಗುತ್ತಿರಲಿಲ್ಲ. ಸಣ್ಣ ವಯಸ್ಸಿನ ಹುಡುಗರಾಗಿದ್ದ ಆ ಕಾಲದಲ್ಲಿ ನಾವು ನಿಜವಾಗಿಯೂ ಭಗವಂತನಿಗೆ ಹುಚ್ಚರಾಗಿ ಹೋಗಿದ್ದೆವೆಂದು ಭಾವಿಸಿದಿರಾ? ಅಂಥದ್ದೇನೂ ಇಲ್ಲ. ನಾವು ಶ್ರೀರಾಮಕೃಷ್ಣರ ಪ್ರೀತಿ ವಿಶ್ವಾಸಗಳಲ್ಲಿ ಮುಳುಗಿಹೋಗಿದ್ದೆವು.''

ಶ್ರೀರಾಮಕೃಷ್ಣರಿಗೆ ಸ್ವಾಮಿ ಪ್ರೇಮಾನಂದರ ಬಗ್ಗೆ ಅನೇಕ ದರ್ಶನಗಳಾಗಿದ್ದುವು. ಅವರು ಭಗವಂತನ ಆನಂದದ ಅಂಶವೆಂದು ಹೇಳುತ್ತಿದ್ದರು. ''ಬಾಬುರಾಮನನ್ನು, ಕತ್ತಿನಲ್ಲಿ ಹಾರವನ್ನು ಧರಿಸಿ, ಇಬ್ಬರು ಸಖಿಯರು ಪಕ್ಕದಲ್ಲಿ ನಿಂತಿರುವ ದೇವತೆಯಂತೆ ಕಂಡೆ'' ಎಂದು ಒಮ್ಮೆ ಶ್ರೀರಾಮಕೃಷ್ಣರು ಹೇಳಿದರು. ಆ ದೇವತೆ, ಶ್ರೀಕೃಷ್ಣನ ಪ್ರಿಯೆಯಾದ ರಾಧೆ. ತಾತ್ತ್ವಿಕವಾಗಿ ಹೇಳುವುದಾದರೆ ರಾಧೆ, ಬ್ರಹ್ಮನ ಲೀಲೆಯ ಒಂದು ಭಾಗ. ಹೇಗೆ ಬ್ರಹ್ಮ ಸತ್ ಚಿತ್ ಆನಂದನೊ, ಹಾಗೆಯೇ ಅವನ ಲೀಲೆಯಲ್ಲಿಯೂ ಈ ಮೂರು ಅಂಶಗಳು ಇವೆ. ಬ್ರಹ್ಮನ ಆನಂದ ಅಥವಾ ಪ್ರೇಮದ ಅಂಶವೇ ರಾಧೆ – ಭಗವಂತನ ಪ್ರೇಮಶಕ್ತಿ. ('ರಾಧೆ ಪ್ರೇಮಸಾಗರದ ಮೇಲಣ ನೊರೆ' ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಗಮನಿಸಿ, ಬ್ರಹ್ಮನೆಂಬ ಸಾಗರ ಸಣ್ಣ ಆಕಾರವನ್ನು ಪಡೆದಿದೆ.)

(ಮುಂದುವರಿಯುವುದು) *

ಸ್ವಾಮಿ ವಿಜ್ಞಾನಾನಂದರ ಉಪದೇಶಗಳು

ಶ್ರೀರಾಮಕೃಷ್ಣ ಪರಮಹಂಸರ ಅಂತರಂಗ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ವಿಜ್ಞಾನಾನಂದರ (೧೮೬೮ -೧೯೩೮) ಜಯಂತಿಯನ್ನು ನವೆಂಬರ್ ೫ ರಂದು ರಾಮಕೃಷ್ಣ ಮಿಷನ್ನಿನ ಶಾಖಾಕೇಂದ್ರಗಳಲ್ಲೆಲ್ಲ ಅವರ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅವರ ಉಪದೇಶಗಳನ್ನು ಸಂಗ್ರಹಿಸಿ ನೀಡುತ್ತಿದ್ದೇವೆ.

P ಇಡೀ ಪ್ರಪಂಚಕ್ಕೇ ನೀನು ಒಳಿತನ್ನು ಬಯಸಬೇಕು. ಎಲ್ಲರ ಒಳಿತಿಗಾಗಿ ಇರುವ ಸ್ತೋತ್ರಗಳು ನಿನ್ನ ದೈನಂದಿನ ಪ್ರಾರ್ಥನೆಯಲ್ಲಿರಲಿ. ಎಲ್ಲರಿಗೂ ಭಗವತ್ಕೃಪೆ ಲಭಿಸಲಿ. ಇಡೀ ವಿಶ್ವ ಒಳಿತಿನಿಂದ ತುಂಬಿಹೋಗಲಿ. ಈ ಶ್ರೇಷ್ಠ ಭಾವನೆ ನಿನ್ನಲ್ಲಿ ಎಂದೆಂದಿಗೂ ಜೀವಂತವಾಗಿರಲಿ.

P ನೀನು ಏನನ್ನು ಆಲೋಚಿಸುತ್ತೀಯೋ, ಅದನ್ನೇ ಮಾಡುತ್ತೀಯೆ. ಪ್ರೀತಿಯ ಆಲೋಚನೆಗಳು ನಿನ್ನ ಆತ್ಮವನ್ನು ವಿಶಾಲಗೊಳಿಸುವುದು. ಅದೇ ರೀತಿ ಕೋಪ, ಅಸೂಯೆಗಳು ನಿನ್ನ ಆತ್ಮವನ್ನು ಸಂಕುಚಿತಗೊಳಿಸುವುದು.

P ಮನಸ್ಸು ಪರಿಶುದ್ಧವಾಗದೆ ನೀನು ಭಗವಂತನನ್ನು ಅರಿಯಲಾರೆ, ಅವನನ್ನು ಸಾಕ್ಷಾತ್ಕರಿಸಿಕೊಳ್ಳಲಾರೆ. ನೀನು ಜಾಗರೂಕನಾಗಿರಬೇಕು. ದುಷ್ಟ ಭಾವನೆಗಳು ಮನಸ್ಸಿಗೆ ಬಂದಾಗಲೆಲ್ಲ ಅವು ದೇಹದ ರಕ್ತವನ್ನೆಲ್ಲ ಕಲುಷಿತಗೊಳಿಸುವವು.

P ಕೆಟ್ಟ ಭಾವನೆಗಳು ಮನಸ್ಸಿನಲ್ಲಿ ಏಳಲು ಅವಕಾಶ ಕೊಡಬೇಡ. ಅವುಗಳು ಬಂದಾಗ ಠಾಕೂರರ (ಭಗವಂತನ) ನಾಮವನ್ನು ಅತ್ಯಂತ ವ್ಯಾಕುಲತೆಯಿಂದ ಉಚ್ಚರಿಸುತ್ತ ಹೋಗು. ಆಗ ಆ ಭಾವನೆಗಳು ದೂರವಾಗುವವು.

P ಮನಸ್ಸನ್ನು ದೇವರಲ್ಲಿ ಇಡುವುದೇ ಮಾನವನು ಮಾಡಬೇಕಾದ ಆದ್ಯಕರ್ತವ್ಯ. ನಮ್ಮ ಪ್ರತಿಯೊಂದು ಉಸಿರಿನೊಂದಿಗೆ ಅವನ ಚಿಂತನೆ ಹರಿಯಬೇಕು.

P ಮನಸ್ಸು ಬಹಳ ಬೇಗ ಮರುಳಾಗುವುದು, ಮೋಹದಿಂದ ಬಂಧಿತವಾಗುವುದು. ಅದಕ್ಕೆ ಬಹಳ ದೊಡ್ಡ ಆಘಾತ ಉಂಟಾಗದೆ ಅದು ನಿಜವಾಗಿ ಭಗವಂತನ ಕಡೆಗೆ ತಿರುಗದು. ಭಾರೀ ಪೆಟ್ಟು ಬಿದ್ದಾಗ ಅದು ಭಗವಂತನತ್ತ ತಾನಾಗಿ ತಿರುಗುವುದು.

P ಮನಸ್ಸು ಉನ್ನತವಾದ ನಿಯಮಗಳಿಗೆ ಅನುಗಣವಾಗಿ ಕಂಪಿಸತೊಡಗಿದಾಗ ನಿನ್ನ ಇಷ್ಟದೇವತೆಯ, ಇತರ ದೇವದೇವತೆಗಳ ದರ್ಶನ ಸಕಲ ವೈಭವಗಳಿಂದ ಕೂಡಿ ನಿನ್ನ ಭ್ರೂಮಧ್ಯೆ ನಿನಗಾಗುವುದು.

P ದೇವರು ಒಳಗೂ ಇದ್ದಾನೆ, ಹೊರಗೂ ಇದ್ದಾನೆ. ಅವನು ನಿನ್ನ ಒಳಗೂ ಇದ್ದಾನೆಂದು ತಿಳಿದಾಗ ನಿನ್ನ ಕಾಮನೆಗಳು ನಿಯಂತ್ರಣಕ್ಕೆ ಬರುವವು. ದೇವರ ಸಾಕ್ಷಾತ್ಕಾರವಾದಾಗ ನಮ್ಮ ಕಾಮನೆಗಳು ಸಂಪೂರ್ಣ ನಿಗ್ರಹಿಸಲ್ಪಡುವವು. ಯಾವಾಗಲೂ ಭಗವಂತನ ನಾಮವನ್ನು ಜಪಿಸು. ಸಹೋದರ, ನಿನಗೆ ಎಷ್ಟು ಸಾಧ್ಯವೋ ಅಷ್ಟು ಬಾರಿ ಜಪಿಸು. ನಿನಗೆ ಯಾವ ಭಯವೂ ಬೇಕಿಲ್ಲ.

P ನಿನಗೆ ಅಗತ್ಯವಾಗಿ ಬೇಕಾಗಿರುವುದು ದೃಢವಾದ ವಿಶ್ವಾಸ, ಭರವಸೆ ಮತ್ತು ಸಹನೆ. ಇವುಗಳ ಆಧಾರದಿಂದ ನೀನು ಕ್ರಮೇಣ ಗುರಿ ತಲುಪುವೆ. ಶ್ರದ್ಧೆಯನ್ನು ಬಲವಾಗಿ ಆಧರಿಸಿ ಹಿಡಿದುಕೋ; ಅದನ್ನೆಂದಿಗೂ ಕಳೆದುಕೊಳ್ಳಬೇಡ. ಯಾವುದೋ ಒಂದು ಬಗೆಯ ನಂಬಿಕೆಯನ್ನು ಅವಲಂಬಿಸದ ಒಬ್ಬ ವ್ಯಕ್ತಿಯನ್ನೂ ನೀನು ಈ ಪ್ರಪಂಚದಲ್ಲಿ ಕಾಣಲಾರೆ. ನಂಬಿಕೆಯಿಲ್ಲದೆ ಒಂದು ಬಾರಿ ಉಸಿರನ್ನೂ ನೀನು ತೆಗೆದುಕೊಳ್ಳಲಾರೆ.

P ಪಾವಿತ್ರ್ಯ, ಸತ್ಯಸಂಧತೆ, ಪ್ರಾಮಾಣಿಕತೆ ಇವು ನಿನ್ನ ಜೀವನದ ಅಡಿಪಾಯವಾಗಿರಲಿ. ಅದರೊಂದಿಗೆ ಶ್ರದ್ಧೆ ಇರಬೇಕು. ಇವುಗಳಿದ್ದರೆ ಯಾವ ಸನ್ನಿವೇಶವೇ ಬಂದೊದಗಲಿ, ಜೀವನದಲ್ಲಿ ಒಂದು ನೆಮ್ಮದಿಯಿರುತ್ತದೆ. ಎಲ್ಲ ಸನ್ನಿವೇಶದಲ್ಲೂ ನೆಮ್ಮದಿಯಿಂದ ಇರುವುದು ಧಾರ್ಮಿಕ ಜೀವನದ ಒಂದು ಲಕ್ಷಣ.

P ಆಸೆಯೇ ಎಲ್ಲ ಕೆಡುಕಿನ ಮೂಲ. ಪ್ರಾಪಂಚಿಕ ಆಸೆಗಳಿರುವವರೆಗೂ ನಿನಗೆ ನೆಮ್ಮದಿ ಉಂಟಾಗದು. ಆಸೆಗಳು ಇಲ್ಲವಾದಾಗಲೇ ನೀನು ಮುಕ್ತ.

P ತ್ಯಾಗವಿಲ್ಲದೆ ಧಾರ್ಮಿಕ ಜಗತ್ತಿನಲ್ಲಿ ಏನನ್ನೂ ಗಳಿಸಲಾರೆ. ನೀನು ಎಲ್ಲವನ್ನೂ ತ್ಯಜಿಸಲು ಯತ್ನಿಸಬೇಕು.

P ಪವಿತ್ರಾತ್ಮರಿಗೆ ಭಗವಂತ ತಾನಾಗಿಯೇ ಕಾಣಿಸಿಕೊಳ್ಳುವನು.

P ನಿನ್ನ ಒಳಗೇ ಗುರು ನೆಲೆಸಿದ್ದಾನೆ. ಅವನನ್ನು ಬೇರೆಲ್ಲೂ ಹುಡುಕಬೇಕಾಗಿಲ್ಲ.

(ಸಂಗ್ರಹ - 'Swami Vijnanananda : His Life and Sayings' ಗ್ರಂಥದಿಂದ)

*

ಸ್ವಾಮಿ ಸುಬೋಧಾನಂದರ ಉಪದೇಶಗಳು

ಶ್ರೀರಾಮಕೃಷ್ಣ ಪರಮಹಂಸರ ಅಂತರಂಗ ಶಿಷ್ಯರಲ್ಲಿ ಅತ್ಯಂತ ಕಿರಿಯರಾದ ಸ್ವಾಮಿ ಸುಬೋಧಾನಂದರು (೧೮೬೮-೧೯೩೨) ಉಳಿದ ಸಹೋದರ ಸಂನ್ಯಾಸಿಗಳಿಂದ 'ಖೋಕಾ' (ಅಂದರೆ ಮಗು ಎಂದರ್ಥ) ಎಂದು ಪ್ರೀತಿಯಿಂದ ಕರೆಯಲ್ಪಡುತ್ತಿದ್ದರು. ಅವರ ಜಯಂತಿಯನ್ನು ನವೆಂಬರ್ 4 ರಂದು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅವರ ಉಪದೇಶಗಳನ್ನು ಸಂಗ್ರಹಿಸಿ ನೀಡುತ್ತಿದ್ದೇವೆ.

P ಸಂನ್ಯಾಸವೆಂದರೆ ಸ್ವಾರ್ಥದ ಎಲ್ಲ ಉದ್ದೇಶಗಳನ್ನೂ, ಆಸೆಗಳನ್ನೂ ತ್ಯಾಗಮಾಡುವುದು. ಸಂನ್ಯಾಸವೆಂದರೇನೆಂದು ಹೇಳುವುದಕ್ಕೆ ಮುಂಚೆ ಬ್ರಹ್ಮಚರ್ಯದ ಬಗ್ಗೆ ಹೇಳಬೇಕು; ಬ್ರಹ್ಮಚರ್ಯ ಸಿದ್ಧಿಸದೆ ಸಂನ್ಯಾಸವಾಗಲಿ ತ್ಯಾಗವಾಗಲಿ ಸಾಧ್ಯವಿಲ್ಲ. ಬ್ರಹ್ಮಚರ್ಯ ಪಾಲನೆಗೆ ನಮ್ಮ ಆಹಾರ, ಅಭ್ಯಾಸಗಳು ಹಾಗೂ ಯೋಚನೆಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಿಕೊಳ್ಳಬೇಕಾಗುತ್ತದೆ.

P ಸಂನ್ಯಾಸಾಶ್ರಮದಲ್ಲಿ ಇರುವವರಿಗೆ ಶಾಸ್ತ್ರಗಳು ವಿಧಿಸುವ ನಿಯಮಗಳ ಪೈಕಿ ಲೈಂಗಿಕತೆಯ ನಿಯಂತ್ರಣಕ್ಕೆ ತುಂಬ ಪ್ರಾಮುಖ್ಯತೆ ಕೊಡಲಾಗಿದೆ. ಈ ಪಾಶವೀಯ ಭಾವವನ್ನು ನೇರವಾಗಿ ಅಥವಾ ಸುತ್ತಿ ಬಳಸಿ ಎಚ್ಚರಗೊಳಿಸುವ ಯಾವುದನ್ನೂ ಬ್ರಹ್ಮಚಾರಿಯು ಮಾಡಬಾರದು, ಗ್ರಹಿಸಬಾರದು. ಹೀಗೆ ಮನಸ್ಸನ್ನು ತನ್ನ ಸಂಪೂರ್ಣ ನಿಯಂತ್ರಣಕ್ಕೆ ತಂದುಕೊಳ್ಳಬೇಕು.

P ಯಾರು ತಾನು ಇಂದ್ರಿಯ-ಮನಸ್ಸುಗಳ ಸೇವಕನಾಗದೆ, ಅವುಗಳನ್ನೇ ತನ್ನ ಸೇವಕರನ್ನಾಗಿಸಿಕೊಳ್ಳುವನೋ ಅವನೇ ನಿಜವಾದ ಬ್ರಹ್ಮಚಾರಿ. ಲೋಕದ ಎಲ್ಲ ಧರ್ಮಗಳೂ ಈ ಬ್ರಹ್ಮಚರ್ಯ ಹಾಗೂ ಸಂನ್ಯಾಸವನ್ನು ಬೋಧಿಸುತ್ತವೆ; ಇವುಗಳ ಧ್ಯೇಯ ಒಂದೇ- ಮನಸ್ಸನ್ನು ಇಂದ್ರಿಯವಿಚಾರಗಳಿಂದ ಮೇಲೆತ್ತಿ ಭಗವಂತನೆಡೆಗೆ ಹರಿಯಬಿಡುವುದು. ಮನಸ್ಸು ಭಗವಂತನಲ್ಲಿ ನೆಲೆಗೊಂಡಿತೆಂದರೆ ದಿವ್ಯಾನಂದವನ್ನು ಅನುಭವಿಸತೊಡಗುವುದು.

P ದಾರವನ್ನು ಸೂಜಿಯ ಮೂಲಕ ಪೋಣಿಸಬೇಕಾದರೆ, ಅದರ ತುದಿಯ ಎಳೆಗಳೆಲ್ಲವನ್ನೂ ಚೂಪಾಗಿ ಒಂದುಗೂಡಿಸಿರಬೇಕು; ಹಾಗಿದ್ದರೆ ಮಾತ್ರವೇ ಅದು ಸೂಜಿಯ ಕಣ್ಣಿನೊಳಗೆ ಹೋಗುವುದು. ಇಲ್ಲವಾದರೆ, ಎಳೆಗಳು ವಿಭಿನ್ನ ದಿಕ್ಕಿಗೆ ಚಾಚಿಕೊಂಡಿದ್ದರೆ, ದಾರವನ್ನು ಸೂಜಿಯ ಮೂಲಕ ಪೋಣಿಸಲು ಸಾಧ್ಯವಾಗುವುದಿಲ್ಲ; ಅಂತೆಯೇ ನಮ್ಮ ಮನಸ್ಸನ್ನು ಭಗವಂತನೆಡೆಗೆ ಕೊಂಡೊಯ್ಯಬೇಕೆಂದಿದ್ದರೆ, ನಾವು ಅದನ್ನು ಬಾಹ್ಯವಸ್ತುಗಳಿಂದ ಹಿಂದಿರುಗಿಸಿಕೊಂಡು ಒಂದೇ ಬಿಂದುವಿನ ಮೇಲೆ ಏಕಾಗ್ರಗೊಳಿಸಬೇಕು ಎಂದು ನನ್ನ ಗುರುಗಳು ಹೇಳುತ್ತಿದ್ದರು.

P ಮಳೆಯ ನೀರು ಎತ್ತರದ ಪ್ರದೇಶಗಳಲ್ಲಿ ನಿಲ್ಲಲಾರದೆ ಹೇಗೆ ಕೆಳಗಿಳಿದು ಬರುತ್ತದೆಯೋ, ಹಾಗೆಯೇ ಪೊಳ್ಳುತನ ತುಂಬಿಕೊಂಡಿರುವವರಲ್ಲಿ ನಂಬಿಕೆ ನಿಲ್ಲುವುದಿಲ್ಲ ; ಅದು ಯಾವಾಗಲೂ ವಿನೀತರ, ದೀನರ ಹೃದಯಗಳನ್ನೇ ಅರಸುತ್ತಿರುತ್ತದೆ ಎಂದು ನನ್ನ ಗುರುಗಳು ಹೇಳುತ್ತಿದ್ದರು.

P ಎಲ್ಲಿಯವರೆಗೆ ವ್ಯಕ್ತಿಗಳ, ಮತಪಂಥಗಳ ನಡುವೆ ಜಗಳವಿರುತ್ತದೆಯೋ, ಅಲ್ಲಿಯವರೆಗೆ ಅವರು ಅತ್ಯುನ್ನತ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವಷ್ಟು ಮೇಲೇರಲಾರರು. ಸತ್ಯವು ಪ್ರಕಾಶಿಸಿದಾಗ ಅದು ಅಜ್ಞಾನದ ಕತ್ತಲೆಯನ್ನು ತೊಡೆದುಹಾಕುತ್ತದೆ. ಅದರೊಂದಿಗೆ ಈ ಭೂಮಿಯನ್ನು ಕಗ್ಗೊಲೆಗಳಿಂದ ರಕ್ತಸಿಕ್ತಗೊಳಿಸುವ ಸಂಕುಚಿತತೆ, ಮತಾಂಧತೆಗಳೂ ನಾಶವಾಗುತ್ತವೆ.

P ಅಜ್ಞಾನದ ತಿಮಿರದಲ್ಲಿರುವ ಜನರು ಮಾತ್ರ 'ನನ್ನ ದೇವರೊಬ್ಬನೇ ನಿಜವಾದ ದೇವರು, ನಿನ್ನ ದೇವರು ಸುಳ್ಳು' ಎಂದು ಹೇಳುತ್ತಾರೆ. ದೇವರನ್ನು ಸಾಕ್ಷಾತ್ಕರಿಸಿಕೊಂಡಿರುವವನು ಜಗಳವಾಡಲಾರ. ಆದರೆ ದೇವರಿಂದ ದೂರವಾಗಿರುವವನು ಜಗಳಕ್ಕೆ ಆಸ್ಪದ ಕೊಡುತ್ತಾನೆ; ಅದಕ್ಕೆ ಅನೇಕ ಸಂದರ್ಭಗಳು ಇರುತ್ತವೆ. ಆದರೆ ಸಾರ್ವತ್ರಿಕ ಸಾಮರಸ್ಯ ಇರುವುದು ನಮ್ಮ ಒಳಗೂ ಹೊರಗೂ ಇರುವ ಭಗವಂತನಲ್ಲಿ; ಭಗವತ್ಸಾಕ್ಷಾತ್ಕಾರವಾದ ನಂತರ ಎಲ್ಲ ರೀತಿಯ ಅಭಿಪ್ರಾಯ ಭೇದಗಳೂ ಕೊನೆಗೊಳ್ಳುತ್ತವೆ.

P ಯಾರಿಂದಲಾದರೂ ಒಳ್ಳೆಯ ವಿಷಯಗಳನ್ನು ಕೇಳಿ ತಿಳಿದುಕೊಳ್ಳಬಹುದು. ಅಮೂಲ್ಯ ರತ್ನವನ್ನು ಕೆಸರಿನಿಂದಲೂ ಸಂಗ್ರಹಿಸಬಹುದು. ಅಂತೆಯೇ ದೇವರಿಗೆ ಸಂಬಂಧಪಟ್ಟ ವಿಷಯವನ್ನು ಎಂಥವನಿಂದಲೂ ಕೇಳಿ ತಿಳಿಯಬಹುದು.

(ಸಂಗ್ರಹ : ದೇವರೊಡನೆ ಬಾಳಿದವರು ಭಾಗ ೧ ಮತ್ತು 'What the Disciples Said About it' ಗ್ರಂಥಗಳಿಂದ)

*

ನೆನಪಿನಂಗಳದಲ್ಲಿ
ಮೂವರು ಶ್ರೇಷ್ಠ ಸಂನ್ಯಾಸಿಗಳು

ಸ್ವಾಮಿ ಶ್ರೀಧರಾನಂದ
ಅನು: ಸ್ವಾಮಿ ಜ್ಞಾನಯೋಗಾನಂದ

ಭಾಗ-3

ಸ್ವಾಮಿ ಜಗದಾನಂದರು ಸ್ಥಿತಪ್ರಜ್ಞರೂ ಬ್ರಹ್ಮಜ್ಞಾನಿಗಳೂ ಆದ ಮಹಾಪುರುಷರಾಗಿದ್ದರು. ಅವರು ಶ್ರೀಮಾತೆಯವರ ಬಳಿಗೆ ಹೋಗಿದ್ದಾಗ ಶ್ರೀಮಾತೆ ಅವರನ್ನು ನೋಡಿ, 'ಓ ಅವನು ಋಷಿಯಾಗಿದ್ದ; ಶ್ರೀರಾಮಕೃಷ್ಣರ ಸೇವೆ ಮಾಡುವುದಕ್ಕಾಗಿ ಈಗ ಮತ್ತೆ ಋಷಿಯಾಗಿ ಬಂದಿದ್ದಾನೆ' ಎಂದಿದ್ದರು. ಸ್ವಾಮಿ ಜಗದಾನಂದಜಿಯವರನ್ನು ಕುರಿತು ಶ್ರೀಮಾತೆಯವರ ಅಭಿಪ್ರಾಯ ಹೀಗಿತ್ತು. ಸ್ವಾಮಿ ವಿರಜಾನಂದಜಿ ಯವರ ದೇಹತ್ಯಾಗವಾದ ನಂತರ, ನಮ್ಮಲ್ಲಿ ಕೆಲವರನ್ನು ಬೇಲೂರು ಮಠದಿಂದ ಜಗದಾನಂದಜಿಯವರ ಬಳಿಗೆ ಉಪನಿಷತ್ತುಗಳನ್ನು ಕಲಿಯಲು ಕಳುಹಿಸಿಕೊಟ್ಟಿದ್ದರು. ಆಗ ಜಗದಾನಂದಜಿಯವರು ಆಲ್ಮೋರಾದಲ್ಲಿದ್ದರು. ಶಾಸ್ತ್ರ ಓದುತ್ತ, ನಾವು ಅವರ ಮುಂದೆ ಪ್ರಶ್ನೆಯ ನಂತರ ಪ್ರಶ್ನೆ ಕೇಳಿ ಅವರನ್ನು ಬೇಸ್ತುಬೀಳಿಸುತ್ತಿದ್ದೆವು. ಆಶ್ಚರ್ಯದ ಸಂಗತಿಯೆಂದರೆ, ನಮ್ಮ ಪ್ರಶ್ನೆ ತಾತ್ತ್ವಿಕವಾಗಿದ್ದರೆ, ಅಥವಾ ಪ್ರಶ್ನೆಯಲ್ಲಿ ಯಾವುದಾದರೂ ತತ್ತ್ವಜಿಜ್ಞಾಸೆ ಇದ್ದರೆ ಅವರು ಎಂದಿಗೂ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿರಲಿಲ್ಲ. ಆದರೆ ಎಲ್ಲಾದರೂ ಪ್ರದರ್ಶನಕ್ಕಾಗಿ, ಅಥವಾ ಪ್ರಶ್ನೆ ಕೇಳುವುದಕ್ಕಾಗಿಯೇ ಪ್ರಶ್ನೆ ಕೇಳಿದರೆ ಅವರು ಹೇಳುತ್ತಿದ್ದರು: ''ನೋಡು, ಅತಿಯಾಗಿ ಪ್ರಶ್ನಿಸಬೇಡ. ತತ್ತ್ವದಲ್ಲಿ ಮನಸ್ಸನ್ನಿಟ್ಟು ಪ್ರಶ್ನೆ ಕೇಳು. ಯಾವ ತತ್ತ್ವವನ್ನು ತಿಳಿಯಬೇಕೆಂದಿದ್ದೀಯೋ ಅದರ ಬಗ್ಗೆ ಮಾತ್ರ ಪ್ರಶ್ನೆ ಕೇಳು.'' ಆಗ ನಾವು ಬೃಹದಾರಣ್ಯಕೋಪನಿಷತ್ತಿನಲ್ಲಿ ಬರುವ 'ಅಹಂ ಬ್ರಹ್ಮಾಸ್ಮಿ' ಎಂಬ ವಿಚಾರವನ್ನು ಕುರಿತು ಓದುತ್ತಿದ್ದೆವು. ಓದುತ್ತಿದ್ದಂತೆ ಬಿರುಸಿನ ವಾದವಿವಾದ ನಡೆಯುತ್ತಿತ್ತು. ಸ್ವಾಮಿ ಅಪರ್ಣಾನಂದರು (ಸತ್ಯ ಮಹಾರಾಜ್) ಆಗ ಆಲ್ಮೋರಾ ಆಶ್ರಮದ ಅಧ್ಯಕ್ಷರಾಗಿದ್ದರು. ಎಲ್ಲವನ್ನೂ ಕೇಳಿಸಿಕೊಂಡ ಅವರು ನಮ್ಮನ್ನು ಚೆನ್ನಾಗಿ ಬೈದು, ''ನೀವೆಲ್ಲಾ ಏನು ಮಾಡುತ್ತಿದ್ದೀರೋ!'' ಎನ್ನುತ್ತಿದ್ದರು. ಆದರೆ ಜಗದಾನಂದಜಿ ಮಹಾರಾಜ್, ''ನೀವು ಸತ್ಯನ (ಸತ್ಯ ಮಹಾರಾಜರ) ಮಾತಿಗೆ ಗಮನ ಕೊಡಬೇಡಿ'' ಎನ್ನುತ್ತಿದ್ದರು. ಇರಲಿ, ಒಂದು ದಿನ ಒಬ್ಬ ಹೇಳಿದ, ''ಮಹಾರಾಜ್, ಇದು ಏನೆಂದು ಅರ್ಥವಾಗಲಿಲ್ಲ.'' ಅದಕ್ಕೆ ಅವರು ತುಸು ನಿಧಾನವಾಗಿ ಹೇಳಿದರು: ''ಮೊದಲು ನಮ್ಮನ್ನು ನಾವು ತಯಾರು ಮಾಡಿಕೊಳ್ಳಬೇಕು, ಹೀಗೆ ಅದರ ಅನುಭವವಾಗುವುದು. ನನಗೆ ಅದು ಲಭಿಸಿದೆ, ಆದ್ದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ಮಾತಿನಲ್ಲಿ ನಿಮಗೆ ನಂಬಿಕೆಯಿದ್ದರೆ ಆಗ ನಿಮಗೂ ಒಳ್ಳೆಯದಾಗುವುದು; ನಿಮಗೆ ನಂಬಿಕೆಯುಂಟಾಗದಿದ್ದರೆ, ನಾನು ಬೇರೇನೂ ಮಾಡಲಾರೆ.''



ಸ್ವಾಮಿ ಜಗದಾನಂದರು

ಮಹಾರಾಜರು ಸಾಯಂಕಾಲದ ಹೊತ್ತು ನಮ್ಮನ್ನೆಲ್ಲ ಕರೆದುಕೊಂಡು ಗುಂಪಾಗಿ ತಿರುಗಾಡಲು ಹೋಗುತ್ತಿದ್ದರು. ಅವರಿಗೆ ರಕ್ತದೊತ್ತಡ (High Blood Pressure) ತುಂಬಾ ಇತ್ತು. ಆಗ ಅವರಿಗೆ ೭೦ ಕ್ಕೂ ಹೆಚ್ಚಿನ ವಯಸ್ಸು. ಬೆಟ್ಟದಲ್ಲಿ ಏರಿಳಿಯುತ್ತ ನಡೆಯುತ್ತಿದ್ದುದರಿಂದ ಅವರಿಗೆ ಹಲವು ಬಾರಿ ಶ್ವಾಸ ನಿಂತುಬಿಡುತ್ತಿತ್ತು. ಒಂದು ದಿನ ಅವರಿಗೆ ಅತಿಯಾಗಿ ಶ್ವಾಸ ಕಟ್ಟಿತು. ನಮಗೆಲ್ಲ ಬಹಳ ಗಲಿಬಿಲಿಯುಂಟಾಯಿತು. ರಸ್ತೆಯ ನಡುವೆ ನಾವೆಲ್ಲ ಅವರ ಸುತ್ತ ಮುತ್ತಿಕೊಂಡು ನಿಂತಿದ್ದೆವು. ಸ್ವಾಮಿ ಆತ್ಮಸ್ಥಾನಂದಜಿ ನಮ್ಮ ನಾಯಕರಾಗಿದ್ದರು. ಅವರು ಮಹಾರಾಜರಿಗೆ, ''ಮಹಾರಾಜ್, ನಿಮ್ಮ ಶರೀರಕ್ಕೆ ಇಂಥ ಅವಸ್ಥೆ ಉಂಟಾದದ್ದು ನೋಡಿ ನಮಗೆಲ್ಲ ಬಹಳ ಚಿಂತೆಯಾಗುತ್ತಿದೆ'' ಎಂದರು.

ಅವರ ಕಡೆ ದಿಟ್ಟಿಸಿ ಮಹಾರಾಜ್ ಹೇಳಿದರು, ''ನೋಡು ಮಗೂ, ನೀವೆಲ್ಲ ನಿಮ್ಮ ವಿಚಾರವಾಗಿ ಚಿಂತಿಸಿ. ನನಗೇನೂ ಚಿಂತೆಯಿಲ್ಲ, ನನಗೆ ಗೊತ್ತು, ಈ ಶರೀರದ ಮೂಲಕ ಏನೇನು ಮಾಡಬೇಕಾಗಿತ್ತೋ ಅದನ್ನೆಲ್ಲ ಮಾಡಿದ್ದಾಗಿದೆ. ಈಗ ಈ ಶರೀರ ಮರದ ಕೆಳಗೆ ಬಿದ್ದುಬಿಡಲಿ, ನರ್ಮದೆಯಲ್ಲಿ ಬೀಳಲಿ, ದೇವತೆಯ ಬಾಗಿಲ ಬಳಿ ಬೀಳಲಿ – ಯಾವುದೂ ಬರುವುದಿಲ್ಲ, ಹೋಗುವುದಿಲ್ಲ.'' ಇದು ಅವರ ಅನುಭವದ ಗಟ್ಟಿತನ. ಇಂಥ ಮಾತುಗಳನ್ನು ಅನೇಕರು ಹೇಳಬಲ್ಲರು. ಆದರೆ ಎಷ್ಟು ಜನ ಅನುಭವ ಮಾಡಿಕೊಳ್ಳಬಲ್ಲರು? ನಮ್ಮ ಗುಂಪಿನಲ್ಲಿ ೧೦–೧೧ ಮಂದಿ ಇದ್ದೆವು. ನಾವೆಲ್ಲ ಮಾತುಬಾರದೆ ನಿಂತುಬಿಟ್ಟಿದ್ದೆವು. ತುಸು ಸಾವರಿಸಿಕೊಂಡು ನಾವು, ''ಮಹಾರಾಜ್, ನಾವು ತುಸು ನಡೆದಾಡುತ್ತೇವೆ'' ಎಂದೆವು. ಅವರು ಕೈಯಲ್ಲಿದ್ದ ಕೋಲನ್ನು ತಿರುಗಿಸುತ್ತ, ಆಗಾಗ ನೆಲಕ್ಕೆ ಟಕ್ ಟಕ್ ಎಂದು ಸದ್ದು ಬರುವಂತೆ ಕುಟ್ಟುತ್ತಾ ಹೇಳಿದರು, ''ನನಗೇನೂ ಚಿಂತೆಯಿಲ್ಲ. ಈ ದೇಹ ಮರದಡಿಯಲ್ಲಿ ಬೀಳಲಿ, ನರ್ಮದಾ ನದಿಯಲ್ಲಿ ಬೀಳಲಿ, ದೇವತೆಯ ಬಾಗಿಲ ಬಳಿ ಬೀಳಲಿ, ಯಾವುದೂ ಬರುವುದಿಲ್ಲ, ಹೋಗುವುದಿಲ್ಲ.''

ಸ್ವಾಮಿ ಮಾಧವಾನಂದರು ಸ್ವಾಮಿ ವಿವೇಕಾನಂದರ ಕರ್ಮಯೋಗವನ್ನು ಅವಲಂಬಿಸಿ ಅತ್ಯುನ್ನತ ಅವಸ್ಥೆಯನ್ನು ತಲುಪಿದ್ದರು; ಸ್ವಾಮಿ ಶಾಂತಾನಂದಜಿ ಭಕ್ತಿಭಾವದ ಶಿರೋಮಣಿಯಾಗಿದ್ದರು. ಸ್ವಾಮಿ ಜಗದಾನಂದಜಿ ಜ್ಞಾನಮಾರ್ಗದ ಸಿದ್ಧಿಗೆ ದೃಷ್ಟಾಂತವಾಗಿ ನಿಲ್ಲುತ್ತಾರೆ. *(ಸಮಾಪ್ತಿ)* *

ಸ್ವಾಮಿ ವಿವೇಕಾನಂದರ ದಿವ್ಯವಾಣಿ

◆ ಮನುಷ್ಯನ ಶೀಲವನ್ನು ನೀವು ನಿಜವಾಗಿಯೂ ಪರೀಕ್ಷೆ ಮಾಡಲು ಬಯಸಿದರೆ, ಆತನು ಮಾಡುವ ದೊಡ್ಡ ಕಾರ್ಯಗಳಿಗೆ ಗಮನ ಕೊಡಬೇಡಿ. ಒಬ್ಬ ಹೆಡ್ಡನು ಕೂಡ ಎಂದಾದರೂ ಒಂದು ಸಮಯದಲ್ಲಿ ಶೂರನಾಗಬಹುದು. ಮನುಷ್ಯನು ಮಾಡುವ ಸಣ್ಣ ಕಾರ್ಯಗಳನ್ನು ನೋಡಿರಿ.

◆ ನಮ್ಮ ಪ್ರಥಮ ಕರ್ತವ್ಯ ಆತ್ಮನಿಂದೆಯ ತ್ಯಾಗ. ಏಕೆಂದರೆ ನಮ್ಮ ಏಳಿಗೆಗೆ ಮೊದಲು ಬೇಕಾದುದು ಆತ್ಮವಿಶ್ವಾಸ. ತರುವಾಯ ಈಶ್ವರನಲ್ಲಿ ವಿಶ್ವಾಸ. ಆತ್ಮಶ್ರದ್ಧಾವಿಹೀನನಿಗೆ ಈಶ್ವರಶ್ರದ್ಧೆ ಎಂದಿಗೂ ಸಾಧ್ಯವಾಗದು.

◆ ನೀನು ಸ್ವಾಮಿಯಂತೆ ಕರ್ಮಮಾಡು, ಗುಲಾಮನಂತೆ ಮಾಡಬೇಡ. ಅನವರತವೂ ಕಾರ್ಯಮಾಡು, ಆದರೆ ಜೀತಗಾರನಂತೆ ದುಡಿಯದಿರು. ಸ್ವಾತಂತ್ರ್ಯಭಾವನೆಯಿಂದ ಕೆಲಸ ಮಾಡಿ, ಪ್ರೇಮಭಾವನೆಯಿಂದ ಕೆಲಸ ಮಾಡಿ. ಸ್ವಾರ್ಥಕಾರ್ಯವೆಲ್ಲವೂ ಗುಲಾಮನ ಕಾರ್ಯ.

◆ ಗುಲಾಮರಂತೆ ಕರ್ಮಮಾಡುವುದರ ಫಲ, ಸ್ವಾರ್ಥ ಮತ್ತು ವಿಷಯಾಸಕ್ತಿಯಾದರೆ, ನಿಃಸ್ವಾರ್ಥರಾಗಿ ನಿಮ್ಮ ಮನಸ್ಸಿಗೆ ನೀವೆ ಒಡೆಯರಂತೆ ಕಾರ್ಯಮಾಡುವುದರ ಫಲ ಅನಾಸಕ್ತಿಯ ಆನಂದಪ್ರಾಪ್ತಿ.

◆ ನೀವು ಸಮರ್ಪಕವಾಗಿ ಕೆಲಸ ಮಾಡಲು ಶಕ್ತರಾಗುವುದು ಯಾವಾಗ ಎಂದರೆ, ನೀವು ಸ್ವಮತಭ್ರಾಂತಿಯನ್ನು ಬಿಟ್ಟಾಗ ಮಾತ್ರ. ಸತ್ಕಾರ್ಯವನ್ನು ಮಾಡಿ ಅದರಿಂದ ತಾನು ಒಳ್ಳೆಯದನ್ನು ಪಡೆಯುವವನು ಯಾರೆಂದರೆ ಸಮಬುದ್ಧಿಯುಳ್ಳವನು. ಶಾಂತನು, ವಿವೇಕಿಯು, ಗಾಬರಿಪಡದವನು, ಅಧಿಕವಾದ ಸಹಾನುಭೂತಿ ಪ್ರೇಮಗಳುಳ್ಳವನು. ಸ್ವಮತಭ್ರಾಂತನು ಮರುಳನು, ಸಹಾನುಭೂತಿಯಿಲ್ಲದವನು. ಆತನೆಂದಿಗೂ ಪ್ರಪಂಚವನ್ನು ನೆಟ್ಟಗೆ ಮಾಡಲಾರ.

◆ ಪ್ರತಿಯೊಂದು ಕರ್ತವ್ಯವೂ ಪವಿತ್ರ. ಕರ್ತವ್ಯಪರಾಯಣತೆಯೇ ಶ್ರೇಷ್ಠ ಭಗವದುಪಾಸನೆ. ಬದ್ಧಜೀವಿಗಳನ್ನು, ಅಜ್ಞಾನದಲ್ಲಿ ನರಳುತ್ತಿರುವವರನ್ನು ಉದ್ಧರಿಸಲೆತ್ನಿಸುವುದು ಒಂದು ಮಹದುಪಕಾರವೇ ಸರಿ.

◆ ಒಂದು ಇರುವೆ ಕೂಡ ನಿಮ್ಮ ಸಹಾಯವಿಲ್ಲದಿದ್ದರೆ ಸಾಯುವುದು ಎಂದು ಭಾವಿಸುವಿರೇನು? ಇದೊಂದು ಭಯಂಕರ ಈಶ್ವರನಿಂದೆ. ಪ್ರಪಂಚಕ್ಕೆ ನೀವು ಬೇಕಾಗಿಯೇ ಇಲ್ಲ. ಪ್ರಪಂಚ ತನ್ನ ಪಾಡಿಗೆ ತಾನು ನಡೆಯುತ್ತಿರುವುದು. ನೀವು ಸಿಂಧುವಿನಲ್ಲಿರುವ ಬಿಂದುವಿನಂತೆ. ಅವನ ಆಣತಿಯಿಲ್ಲದೆ ಒಂದು ಎಲೆಯೂ ಕದಲಲಾರದು. ಅವನಿಗೆ ಸೇವೆ ಮಾಡುವ ಒಂದು ಅವಕಾಶ ದೊರಕಿದುದರಿಂದ ಧನ್ಯರು ನಾವು. ಸಹಾಯ ಎಂಬ ಪದವನ್ನು ನಿಮ್ಮ ಮನಸ್ಸಿನಿಂದ ನಿರ್ಮೂಲ ಮಾಡಿ.

◆ ನೀವು ಸಹಾಯ ಮಾಡಲಾರಿರಿ. ಇದು ಈಶ್ವರನಿಂದೆ. ನೀವು ಅವನ ಇಚ್ಛೆಯಂತೆ ಇಲ್ಲಿರುವಿರಿ. ನೀವು ಅವನಿಗೆ ಸಹಾಯ ಮಾಡುವೆ ಎಂದು ಭಾವಿಸಿರುವಿರೇನು? ನೀವು ಪೂಜಿಸಬಲ್ಲಿರಿ.

◆ ನೀವು ನಾಯಿಗೊಂದು ತುತ್ತು ಅನ್ನವನ್ನು ಕೊಟ್ಟರೆ ನೀವು ನಾಯಿಯನ್ನು ದೇವರೆಂದು ಪೂಜಿಸುವಿರಿ ಎಂದೇ ಅರ್ಥ. ದೇವರು ಆ ನಾಯಿಯಲ್ಲಿರುವನು, ಅವನೇ ಅದಾಗಿರುವನು, ಅವನೇ ಸರ್ವಸ್ವವಾಗಿದ್ದಾನೆ, ಅವನೇ ಎಲ್ಲದರಲ್ಲಿಯೂ ಇರುವನು. ಅವನನ್ನು ಪೂಜಿಸುವುದಕ್ಕೆ ನಮಗೊಂದು ಅವಕಾಶ ದೊರಕಿದೆ. ಪ್ರಪಂಚದ ಎದುರಿಗೆ ಇಂತಹ ಗೌರವಭಾವದಿಂದ ನಿಲ್ಲಿ. ಆಗ ಮಾತ್ರ ಪೂರ್ಣ ಅನಾಸಕ್ತಿ ಬರುವುದು. ಇದು ನಿಮ್ಮ ಕರ್ತವ್ಯವಾಗಬೇಕು. ಕೆಲಸ ಮಾಡುವುದಕ್ಕೆ ಇದೇ ಸರಿಯಾದ ಮನೋಭಾವ. ಕರ್ಮಯೋಗ ಸಾರುವ ರಹಸ್ಯವೇ ಇದು. *

ಸ್ವಾಮಿ ಅಖಂಡಾನಂದರ ಸ್ಮೃತಿಸಂಚಯ

ಬಂಗಾಳಿ ಮೂಲ: **ಸ್ವಾಮಿ ನಿರಾಮಯಾನಂದ** ಕನ್ನಡಕ್ಕೆ: **ಕುಮಾರಿ ಪಿ.ಉಷಾ**

ಭಾಗ-೨



ಮೇ ೧೮, ೧೯೩೫, ಬುದ್ಧಪೂರ್ಣಿಮೆ : ಸಂಜೆ ೭ರ ಹೊತ್ತಿಗೆ ರೈಲಿನಲ್ಲಿ ಪ್ರಯಾಣ ಮಾಡಿ ಬಂದ ಒಬ್ಬರು ಸಾಧುಗಳೊಡನೆ ಭಕ್ತನು ಮಹಾತೀರ್ಥ ಸಾರಗಾಛಿಗೆ ಬಂದಿದ್ದಾನೆ. ನಾಳೆ ವಾರ್ಷಿಕ ಮಹೋತ್ಸವ. ನೆರೆದಿದ್ದ ಭಕ್ತರು ಕೇಳುತ್ತಿದ್ದಾರೆ, ''ಬಾಬಾ ಹೇಗಿದ್ದೀರಿ?'' ಹಾಲ್‌ನಲ್ಲಿ ಕುಳಿತಿರುವ ಬಾಬಾ, ''ಬಹಳ ಆನಂದದಿಂದಿದ್ದೇನೆ. ಇಲ್ಲಿಂದ ಮೇಲಿನದು ಬಹಳ ಚೆನ್ನಾಗಿದೆ. ತೊಂದರೆಯೆಲ್ಲಾ ಕೆಳಗೆ ಮಾತ್ರ. ಯಾರಾದರೂ ಕತ್ತರಿಸಿ ತೆಗೆದು ಹಾಕಿದ್ದರೆ ಚೆನ್ನಾಗಿರುತ್ತಿತ್ತು. ಹ್ಹಾ ಹ್ಹಾ! ವೃದ್ಧ ಶಿಶು ತಾನು ಮಾಡಿದ ತಮಾಷೆಗೆ ತಾನೇ ಸಂತೋಷಪಡುತ್ತಿದೆ.'' ಭಕ್ತರು ಅಂದುಕೊಂಡರು, ಅಖಂಡಾನಂದ ಎಂಬ ಹೆಸರು ಸಾರ್ಥಕವಾಯಿತು ಎಂದು.

ಒಬ್ಬ ಯುವಕ ಭಕ್ತನು ಕಲ್ಕತ್ತೆಯಿಂದ ಬಂದಿದ್ದಾನೆ. ಅವನು ತನ್ನ ಮನಸ್ಸಿನ ಸ್ಥಿತಿಯನ್ನು ಪತ್ರದ ಮೂಲಕ ಬಾಬಾಗೆ ತಿಳಿಸಿದ್ದನೆಂದು ತೋರುತ್ತದೆ. ಅವನು ಪ್ರಣಾಮ ಮಾಡಿ ಏಳುತ್ತಲೇ ಬಾಬಾ ಹೇಳಿದರು, ''ನಾನೇನು ಮಾಡಲಿ? ಕೊಡಬೇಕಾದ್ದನ್ನು ಒಮ್ಮೆಲೆ ಕೊಟ್ಟುಬಿಟ್ಟಿದ್ದೇನೆ. ಇನ್ನು ಮುಂದಿನದು ನಿನ್ನ ಕೆಲಸ. ಶಾಂತಿ ಸಿಗುತ್ತಿಲ್ಲ. ಅಶಾಂತಿ, ಸಂಸಾರ ಹಿಡಿಸುತ್ತಿಲ್ಲ ಎನ್ನುತ್ತೀಯೆ. ಸಂಸಾರದಲ್ಲಿರಲು ಯಾರು ತಾನೆ ಹೇಳಿದರು? ಕಾಡು, ಅರಣ್ಯಗಳಿವೆ, ಇಷ್ಟೊಂದು ಆಶ್ರಮಗಳಿವೆ – ಅಲ್ಲಿಗೆ ಹೋಗಬಹುದಲ್ಲ? ಸಾಧುಸಂಗ ಬೇಕು, ಕೆಲಸವಿರಬೇಕು. ಆಗಲೇ ಶಾಂತಿ ದೊರೆಯುವುದು. ಮನಸಾರೆ ಕೆಲಸಮಾಡು. ನಾಳೆ ದೇವರ ಉತ್ಸವ – ಕೆಲಸಮಾಡು ನೋಡೋಣ. ಸಾಕೆನಿಸುವಷ್ಟು ಕೆಲಸ ಮಾಡಬೇಕು. ಬಳಲಿ ಬೆಂಡಾಗುವಷ್ಟು ಕೆಲಸ ಮಾಡು. ಆಗ ನಿನಗೆ ಶಾಂತಿ, ಆನಂದ ಸಿಗುವುದಿಲ್ಲವೋ ನೋಡುತ್ತೇನೆ. ಇಂದಿನಿಂದಲೇ ಕಾರ್ಯದಲ್ಲಿ ತೊಡಗು – ಏನು ಕೆಲಸ ಮಾಡಬೇಕೆಂದು ನೋಡಿ, ಕೇಳಿ ತಿಳಿದುಕೋ.''

ಮಾರನೇ ದಿನದ ಮಧ್ಯಾಹ್ನ ಮಹೋತ್ಸವದ ಅಂಗವಾಗಿ ಒಂದು ಸಭೆಯನ್ನೇರ್ಪಡಿಸಲಾಗಿದೆ. ಅಲ್ಲಿ ಮಾಡುವ ಭಾಷಣವನ್ನು ಬಾಬಾ ಬರೆಸುತ್ತಿದ್ದಾರೆ. ಸಂಜೆ 'ವಿನೋದ ಕುಟೀರ'ದ ಜಗುಲಿಯ ಕ್ಯಾಂಪ್‌ಕಾಟ್‌ನಲ್ಲಿ ಮಲಗಿ ಬಾಬಾ ಅದನ್ನು ಹೇಳುತ್ತಿದ್ದಾರೆ, ಸಾಧುಗಳೊಬ್ಬರು ಬರೆದುಕೊಳ್ಳುತ್ತಿದ್ದಾರೆ. ಕೆಲವು ಕ್ಷಣಗಳ ನಂತರ ಬಾಬಾ ಎದ್ದು ಕುಳಿತು ಹತ್ತಿರವೇ ಕುಳಿತಿದ್ದ ಭಕ್ತರನ್ನುದ್ದೇಶಿಸಿ ಹೇಳತೊಡಗಿದರು: ''ಠಾಕೂರರ (ಶ್ರೀರಾಮಕೃಷ್ಣರ) ಆದೇಶದಂತೆ ಇಲ್ಲಿಗೆ ಬಂದೆ. ಅದು ೧೮೯೭ರ ಬರಗಾಲ. ಕಲ್ಕತ್ತೆಯಿಂದ ಚಂದನನಗರಕ್ಕೆ ಬಂದೆ. ಅಲ್ಲಿಂದ ನವದ್ವೀಪಕ್ಕೆ ಹೋಗುವ ಇಚ್ಛೆಯಾಯಿತು. ನಂತರ ಗಂಗಾತೀರದಲ್ಲೇ ನಡೆದು ಹೋಗುವ ಇಚ್ಛೆ – ಹೀಗೆ ಬೇಲ್‌ಡಾಂಗಾಕ್ಕೆ ಬಂದಾಗ, ಗಂಗಾತೀರದಲ್ಲಿ ಮುಸಲ್ಮಾನ ಹುಡುಗಿಯೊಬ್ಬಳು ಅಳುತ್ತಿರುವುದನ್ನು ಕಂಡೆ. ಅವಳಲ್ಲಿದ್ದ ಮಡಕೆ ಒಡೆದು ಹೋಗಿತ್ತು. ನನ್ನ ಬಳಿ ಸ್ವಲ್ಪವೇ ಹಣವಿತ್ತು; ಅದರಿಂದಲೇ ಒಂದು ಮಡಕೆಯನ್ನೂ ಸ್ವಲ್ಪ ಅವಲಕ್ಕಿಯನ್ನೂ ಕೊಂಡುಕೊಂಡು ಕೊಟ್ಟೆ. ತಕ್ಷಣವೇ ೧೦–೧೨ ಮಂದಿ ಕ್ಷಾಮಪೀಡಿತ ಜನರು ನನ್ನನ್ನು ಮುತ್ತಿಕೊಂಡು ''ಬಾಬಾ, ತಿನ್ನಲು ಏನಾದರೂ ಕೊಡು'' ಎಂದು ಕೇಳಿದರು. ಅಂದಿನಿಂದ ನಾನು 'ಬಾಬಾ' ಆದೆ. ಉಳಿದಿದ್ದ ಅಲ್ಪ ಹಣದಲ್ಲಿ ಅವರಿಗೆ ಅವಲಕ್ಕಿಯನ್ನು ಕೊಡಿಸಿ ಅಲ್ಲಿಂದ ಮುಂದೆ ಸಾಗಿದೆ. ಸಾಯಂಕಾಲ 'ಭಾವತಾ' ಸ್ಟೇಶನ್ನಿನ ಹತ್ತಿರವೇ ರಾತ್ರಿಯನ್ನು ಕಳೆದೆ. ಬೆಳಿಗ್ಗೆ ಉತ್ತರದಿಕ್ಕಿನಲ್ಲಿ ಹೋಗುವ ಆಸೆಯಾಯಿತು. ಆದರೆ ಮಹುಲಾದಲ್ಲಿ ಅನ್ನಪೂರ್ಣೆಯ ಪೂಜೆಗೆ ಆಮಂತ್ರಣವಿತ್ತು. ಆಮೇಲೆ ಶ್ರೀರಾಮಕೃಷ್ಣರ ಇಚ್ಛೆಯಂತೆ ಅವರ ಕೆಲಸ, ಇಲ್ಲಿಯೇ ನಿಂತುಬಿಟ್ಟೆ.

''ಕ್ಷಾಮಪೀಡಿತ ಪ್ರದೇಶದಲ್ಲಿ ತಾಯಿ ಅನ್ನಪೂರ್ಣೆಯೇ ದೇವತೆ. ಆದ್ದರಿಂದ ಅವರಿಗೆ ಹೊಟ್ಟೆತುಂಬ ಉಣಿಸುವ, ದೇವ ಸ್ಥಾನವನ್ನು ಕಟ್ಟಿಸುವ ಕೆಲಸ ನನಗೆ ಇಷ್ಟವಿರಲಿಲ್ಲ. ಕೊನೆಗೂ

ಆತನ ಇಚ್ಛೆಯಂತೆಯೇ ನಡೆಯಿತು. ಠಾಕೂರರ ಜನ್ಮತಿಥಿಯ ಪೂಜೆಯಂದು ದೇವಸ್ಥಾನದ ಪ್ರತಿಷ್ಠಾಪನೆ ನಡೆಯಿತು. ಠಾಕೂರರು ಬಂದು ನೆಲೆಸಿದರು. ಆದ್ದರಿಂದ ಈ ದಿನ 'ದೀಯತಾಂ, ಭುಜ್ಯತಾಂ' (ದಾನ ಮಾಡು, ಊಟ ಹಾಕು). ಹಸಿದ ಹೊಟ್ಟೆಗೆ ಧರ್ಮ ಹಿಡಿಸದು. ಕ್ಷಾಮಪೀಡಿತ ಪ್ರದೇಶದಲ್ಲಿ ನಿಜವಾದ ಧರ್ಮವೆಂದರೆ ಊಟ, ವಸ್ತ್ರಗಳ ವ್ಯವಸ್ಥೆ, ನಂತರ ಓದು ಬರಹವನ್ನು ಕಲಿಸುವುದು, ರೋಗಿಗಳ ಸೇವೆಯನ್ನು ಮಾಡುವುದು. ಆದ್ದರಿಂದ ಈ ಜನರಿಗೆ ಕೃಷಿಯ ಕೆಲವು ಆಧುನಿಕ ನಿಯಮಗಳನ್ನೂ, ಆರೋಗ್ಯ ಕಾಪಾಡಿಕೊಳ್ಳುವ ಒಂದೆರಡು ವಿಧಾನಗಳನ್ನೂ ಕಲಿಸುತ್ತೇವೆ.''

ದಿನಾಂಕ ೧೯ರಂದು ಬೆಳಗ್ಗೆ : ಬಾಬಾ ಹೇಳಿದರು: '' 'ಗುರುವಾಕ್ಯ ವೇದಾಂತ ವಾಕ್ಯ' ಎಂದು ಎಲ್ಲರೂ ಬಾಯಲ್ಲಿ ಹೇಳುತ್ತಾರೆ. ಹೇಳಿದ್ದನ್ನು ಯಾರೂ ಕೇಳುವುದಿಲ್ಲ, ಒಂದು ಮಾತನ್ನೂ ಉಳಿಸಿಕೊಳ್ಳುವುದಿಲ್ಲ. ಠಾಕೂರರು ನಮಗೆ ಹೆಚ್ಚಾಗಿ ಏನನ್ನೂ ಹೇಳಿ ಹೋಗಿಲ್ಲ; ಒಂದೆರಡು ವಿಷಯಗಳಷ್ಟೆ : ಮೊದಲನೆಯದಾಗಿ, 'ಗಲ್ಲಕ್ಕೆ ಕೈಕೊಟ್ಟು ಯೋಚಿಸಬೇಡ' ಮತ್ತು ಎರಡನೆಯದಾಗಿ, 'ನಿಂತು ನೀರು ಕುಡಿಯಬೇಡ.' ನಾನು ಎರಡನ್ನೂ ಅಕ್ಷರಶಃ ಪಾಲಿಸಲು ಪ್ರಯತ್ನಿಸಿದ್ದೇನೆ. ಆದರೆ ಈಗಿನ ಹುಡುಗರೊ! ಏನು ಹೇಳುತ್ತೇವೋ ಅದಕ್ಕೆ ವಿರುದ್ಧವಾದುದನ್ನೇ ಮಾಡುತ್ತಾರೆ. ಆದ್ದರಿಂದಲೇ ಅವರಿಗೆ ನಾನೇನೂ ಹೇಳುವುದಿಲ್ಲ. ನಾವು ನಮ್ಮ ಸರದಿಯನ್ನು ಮುಗಿಸಿ ಹೊರಟುಹೋಗುತ್ತೇವೆ. ನಾನೆಂದೂ ಗಲ್ಲಕ್ಕೆ ಕೈಕೊಟ್ಟು ಚಿಂತಿಸಿಲ್ಲ. ಚಿಂತೆಯೇಕೆ? **ಆತನ** ಪ್ರೀತಿ, **ಆತನ** ಆಶ್ರಯ ಸಿಕ್ಕಿದೆ. ಆನಂದದಿಂದ ತುಂಬಿಕೊಂಡಿದ್ದೇನೆ.

ಆ ಯುವಕ ಭಕ್ತ ಕಾಣಿಸಿಕೊಂಡಾಗ ಹೇಳಿದರು, ''ಕೆಲಸ ಮಾಡು, ಕೆಲಸ ಮಾಡು. ಸುಮ್ಮನೆ ಕುಳಿತಿರುವುದನ್ನು ನಾನು ನೋಡಲಾರೆ. ಏನಾದರೊಂದು ಕೆಲಸ ಮಾಡು. ತರಕಾರಿಯನ್ನಾದರೂ ಹೆಚ್ಚಬಹುದು, ಅದಾಗದಿದ್ದರೆ ಪೊರಕೆ ತೆಗೆದುಕೊಂಡು ಕಸವನ್ನಾದರೂ ಗುಡಿಸಬಹುದು. ಎಲ್ಲೆಲ್ಲಿ ಧೂಳು ಇದೆಯೆಂದು ನೋಡು, ಆಶ್ರಮವನ್ನು ಸ್ವಚ್ಛಗೊಳಿಸು.''

ಮೇ ೨೧: ಬೀಳ್ಕೊಡುವಾಗ ಕೆಲವರು ಬಾಬಾಗೆ ಹೇಳಿದರು, ''ನೀವು ಇಲ್ಲದಿದ್ದರೆ ಆಗುವುದಿಲ್ಲ, ಬೇಲೂರು ಮಠಕ್ಕೆ ಬನ್ನಿ.'' ಅದಕ್ಕೆ ಬಾಬಾ, ''ಅಯ್ಯೋ! ನನ್ನನ್ನೇನು ಕೊಲ್ಲಬೇಕೆಂದಿದ್ದೀರಾ? ಇಲ್ಲಿ ಈಗ ಠಾಕೂರರಿಗಾಗಿ ಹನ್ನೆರಡು ತಿಂಗಳೂ ಹೂದೋಟವನ್ನು ನೋಡಿಕೊಳ್ಳಬೇಕು, ಹಣ್ಣಿನ ತೋಟವನ್ನು ಮಾಡಬೇಕು. ಇಲ್ಲಿ ಎಷ್ಟೊಂದು ಕೆಲಸವಿದೆ! ನೀವೇ ಎಲ್ಲರೂ ಇಲ್ಲಿಗೆ ಬನ್ನಿ, ಇಲ್ಲೇ ಇರಿ'' ಎನ್ನುತ್ತ ಹುಡುಗನಂತೆ ನಗತೊಡಗಿದರು. ರೈಲಿಗೆ ಸಮಯವಾಯಿತೆಂದು ಎಲ್ಲರೂ ಒಬ್ಬೊಬ್ಬರಾಗಿ ಪ್ರಣಾಮ ಮಾಡಿ ಬೀಳ್ಕೊಂಡರು.

ಅಕ್ಟೋಬರ್ ೧೧: ಕೋಜಾಗರೀ ಹುಣ್ಣಿಮೆಯ ಬೆಳಗಿನ ಜಾವ, ಸುಮಾರು ೪.೩೦ರ ಹೊತ್ತಿಗೆ ಎಂದಿನಂತೆ ಹಣ್ಣು, ಸಿಹಿತಿಂಡಿಗಳನ್ನು ತೆಗೆದುಕೊಂಡು ಬಾಬಾಗೆ 'ವಿಜಯ ಪ್ರಣಾಮ' ಮಾಡಲು ಭಕ್ತನು ಬಂದನು. *(ವಿಜಯದಶಮಿಯಂದು ವಿಶೇಷ ನಮಸ್ಕಾರ ಸಲ್ಲಿಸುವುದನ್ನು ಬಂಗಾಳದಲ್ಲಿ 'ವಿಜಯ ಪ್ರಣಾಮ' ಎನ್ನುತ್ತಾರೆ.)*

ಬೆಳಗಿನ ಜಾವದ ಚಂದ್ರನ ಬೆಳಕಿನಲ್ಲಿ ಆಶ್ರಮವು ಅದೆಂಥ ಅಪೂರ್ವ ಶಾಂತ ಸೌಂದರ್ಯಗಳಿಂದ ತುಂಬಿತ್ತೋ ವರ್ಣಿಸಲಾಗದು. ಮುಖ್ಯರಸ್ತೆಯ ಮೂಲಕ ಬಂದು ಡಿಸ್ಪೆನ್ಸರಿಯ ಕಡೆಯಿಂದ ಆಶ್ರಮಕ್ಕೆ ಕಾಲಿಟ್ಟ ಭಕ್ತನು ಆ ನಿರ್ಜನ ನೀರವತೆಯನ್ನು ಸ್ವಲ್ಪ ಹೊತ್ತು ಆಸ್ವಾದಿಸಿದನು. ಇನ್ನೂ ಯಾರೂ ಎಚ್ಚೆತ್ತಿಲ್ಲ; ನೀಲಗಿರಿ ಮರಗಳು ಕಾವಲುಗಾರರಂತೆ ನಿಂತಿವೆ, ಅವುಗಳು ಹೊರಸೂಸುವ ತೀಕ್ಷ್ಣವಾದ ಸುಗಂಧವು ಬೀಸುತ್ತಿದ್ದ ತಂಗಾಳಿಗೆ ಜೀವವಿತ್ತಂತಿದೆ.

ಸ್ವಲ್ಪ ಹೊತ್ತಿನಲ್ಲೇ ವಿನೋದ ಕುಟೀರದಲ್ಲಿ 'ಖಟ್' ಎಂದು ಸದ್ದಾಯಿತು. ಬಾಬಾ ಎದ್ದಿದ್ದಾರೆ. ಮುಖ, ಕೈಕಾಲುಗಳನ್ನು ತೊಳೆದು ಬರುತ್ತಲೇ, ನಸುಗತ್ತಲೆಯ ಬ್ರಾಹ್ಮೀಮುಹೂರ್ತದಲ್ಲಿ ಭಕ್ತನು ಬಾಬಾಗೆ ಪ್ರಣಾಮ ಮಾಡಿದನು. ಬಾಬಾ ಕನವರಿಸುತ್ತ ಕೇಳಿದರು, ''ನನಗಾಗಿ ಏನೇನು ತಂದಿದ್ದೇಯಾ? ಅದನ್ನು ಇಲ್ಲಿ ಕೊಡು, ಈ ಕೊಠಡಿಯಲ್ಲಿಡು. ಮತ್ತು ಠಾಕೂರರಿಗಾಗಿ ತಂದಿರುವುದನೆಲ್ಲಾ ಠಾಕೂರರ ಭಂಡಾರಕ್ಕೆ ತೆಗೆದುಕೊಂಡು ಹೋಗು.''

ಬೆಳಗ್ಗೆ ಹಾಲ್‌ನಲ್ಲಿ ಒಂದು ಕುರ್ಚಿಯ ಮೇಲೆ ಬಾಬಾ ಕುಳಿತಿದ್ದಾರೆ. ಅವರಲ್ಲಿ ಜಪದ ಭಾವ ತುಂಬಿಕೊಂಡಿದೆ, ಆದರೆ ದೇಹದಲ್ಲಿ ಅನಾರೋಗ್ಯ. ಭಕ್ತ ಕುರ್ಚಿಯ ಬಳಿ ಸುಮ್ಮನೆ ಕುಳಿತಿದ್ದಾನೆ. ಬಾಬಾ ಕೈಮುಗಿದು ಶುದ್ಧ ಸಂಸ್ಕೃತ ಉಚ್ಚಾರಣೆಯಲ್ಲಿ ಕ್ರಮಬದ್ಧವಾಗಿ ದೇವೀಸೂಕ್ತವನ್ನು ಪಠಿಸುತ್ತಿದ್ದಾರೆ:

ಓಂ ಅಹಂ ರುದ್ರೇಭಿರ್ವಸುಭಿಶ್ಚರಾಮ್ಯಹಮಾದಿತ್ಯೈರುತ ವಿಶ್ವದೇವೈಃ।
.. ಪರೋ ದಿವಾ ಪರಏನಾ ಪೃಥಿವ್ಯೈ ತಾವತೀ ಮಹಿನಾ ಸಂಬಭೂವ ॥

ಸಂಜೆಯ ವೇಳೆ ಬಾಬಾ ಹೇಳುತ್ತಿದ್ದಾರೆ:

ನಾಯಮಾತ್ಮಾ ಬಲಹೀನೇನ ಲಭ್ಯಃ
ನ ಮೇಧಯಾ ನ ಬಹುನಾ ಶ್ರುತೇನ ।
.. ನ ಪ್ರವಚನೇನ ನ ಚೇಜ್ಯಯಾ
ಯಮೇವೈಷ ವೃಣುತೇ ತೇನ ಲಭ್ಯಃ ॥

'ನಾಯಮಾತ್ಮಾ ಬಲಹೀನೇನ ಲಭ್ಯಃ – ತಿಳಿಯಿತೆ? ಮೊದಲು ಶರೀರವನ್ನು ಶಕ್ತಿಯುತವಾಗಿ ಮಾಡಿಕೊಳ್ಳಬೇಕು. Healthy strong body (ಆರೋಗ್ಯಕರ, ಸದೃಢ ದೇಹ) ಇದ್ದರೆ ಮಾತ್ರ (ಆರೋಗ್ಯಪೂರ್ಣವಾದ ವಿಚಾರಗಳು) ಬರುತ್ತವೆ. ಅದು ಇಲ್ಲದಿದ್ದರೆ ಮನಸ್ಸಿಗೆ ಬೇಡದ ಯೋಚನೆಗಳು ಬರುವುವು. ಹಾಲು, ಖೋವಾ, ಮೀನು, ಮಾಂಸ, ಮೊಸರು – ಎಲ್ಲವನ್ನೂ ಸೇವಿಸಬೇಕು ಅನ್ನಿಸುತ್ತದೆ. Fruits are good in morn (ಬೆಳಗ್ಗೆ ಹಣ್ಣುಗಳನ್ನು ತಿಂದರೆ ಬಹಳ ಒಳ್ಳೆಯದು). ಮುಸಂಬಿ ತಿನ್ನಬೇಕು. ಲಿವರ್ ಚೆನ್ನಾಗಿರುತ್ತದೆ. ಇದು ನೀನು ಮಾಡಿಕೊಳ್ಳಬೇಕಾದ ಆಹಾರ ವ್ಯವಸ್ಥೆ.

ಠಾಕೂರರು ಸಮಷ್ಟಿರೂಪದಲ್ಲಿ 'ಠಾಕೂರ್' – ವ್ಯಷ್ಟಿರೂಪದಲ್ಲಿ ಇಲ್ಲಿ ಅನ್ನಪೂರ್ಣೆ. 'ವಿಜಯಾ ಪತ್ರ'ಗಳನ್ನು *(ವಿಜಯದಶಮಿಯಂದು ಸ್ನೇಹಿತರಿಗೆ, ಬಂಧುಗಳಿಗೆ ಬರೆಯುವ ಶುಭಹಾರೈಕೆಯ ಪತ್ರಕ್ಕೆ ಬಂಗಾಳದಲ್ಲಿ ಹೀಗೆನ್ನುತ್ತಾರೆ.)* ಬರೆಯುತ್ತಿದ್ದಾರೆ.

ಬಾಬಾ ಹೇಳಿದರು, “ 'ವಿಜಯಾ ಪತ್ರ'ಗಳನ್ನೋದಿ ಏನೇನು ಬರೆಯಬೇಕೋ ಅದನ್ನು ನೀನೇ ಬರೆ. ಇಂಗ್ಲಿಷಿನಲ್ಲಿ ಬರೆದಿರುವವರಿಗೆ ಇಂಗ್ಲಿಷ್‌ನಲ್ಲೇ ಉತ್ತರಿಸು. ಭಯಪಡಬೇಡ. ಪತ್ರದ ಭಾವವನ್ನರಿತು ನೀನು ಹೇಗೆ ಬರೆಯುತ್ತೀಯೆಂದು ನಾನು ನೋಡಬೇಕು. ನಿನಗೆ full freedom (ಪೂರ್ಣ ಸ್ವಾತಂತ್ರ್ಯ) ಕೊಡುತ್ತಿದ್ದೇನೆ. ತಪ್ಪೇ ಆಗಲಿ, ಉಲ್ಟಾವೇ ಆಗಲಿ – ನೀನು ಬರೆ, ನಾನು ನೋಡುತ್ತೇನೆ.”

.. ಯಾರದೋ ನಡವಳಿಕೆಯಿಂದ ದುಃಖಿತರಾಗಿ ಕಟುವಾಗಿಯೇ ನುಡಿದರು, “ಎಲ್ಲರೂ ಸ್ವಾರ್ಥಿಗಳು. ಅವರ ಕೆಲಸವಾದರೆಸರಿ. ನನ್ನ ಕಷ್ಟವನ್ನು ಯಾರೂ ಅರ್ಥಮಾಡಿಕೊಳ್ಳುವುದಿಲ್ಲ.”

ಸಂಜೆ ಚಿಕ್ಕ ಹುಡುಗರಿಂದ ಬಾಬಾ 'Son of King' ಹಾಗೂ 'ಕಾರಕೊರಮ್ ಪರ್ವತ'ದ ಕತೆಗಳನ್ನು ಕೇಳಿ ಬಹಳ ಸಂತೋಷಗೊಂಡಿದ್ದಾರೆ. “ಭಾರೀ ಆನಂದವಾಯಿತು. ಮತ್ತೆ ಕೇಳುತ್ತೇನೆ. ಅದೇ ಕಾರಕೊರಮ್ ದಾಟಿ Central Asia (ಮಧ್ಯ ಏಷ್ಯಾ)ಗೆ ಹೋಗಿಬಿಡುತ್ತೇನೆಂದು ನಿಶ್ಚಯಿಸಿದ್ದೆ” ಎಂದರು.

“.. .. ಮುಂದಿನ ಸಲ ಬಂದಾಗ ಬಹಳ ದಿನಗಳ ಟಿಕೆಟ್ ಮಾಡಿಕೊಂಡು ಬನ್ನಿ. ಆರು ದಿನಗಳ ರಿಟರ್ನ್ ಟಿಕೆಟ್ ಒಂದಿದೆ. ನನ್ನ ಕೆಲಸ ಮುಗಿಸದಿದ್ದರೆ ಹೋಗಲು ಬಿಡುವುದಿಲ್ಲ.” ಐದು ಗಂಟೆಯ ರೈಲಿಗೆ ಹೊರಡುವ ಭಕ್ತರೆಂದರು, “ಇನ್ನು ಸಮಯವಿಲ್ಲ. ನಾಲ್ಕುಗಂಟೆಯಾಗಿ ಹೋಗಿದೆ.” ಬಾಬಾ, “ಬಹಳ ಸಮಯವಿದೆ. ಎಲ್ಲರೂ ನನ್ನ ಹತ್ತಿರ ಕುಳಿತುಕೊಳ್ಳಿ” ಎನ್ನುತ್ತಾ ತಾವು ಪತ್ರ ಬರೆಯಲು ಕುಳಿತರು. ಭಕ್ತರು ಚಡಪಡಿಸುತ್ತಿದ್ದಾರೆ, ಬಾಬಾ ನಗುತ್ತಿದ್ದಾರೆ. ಕೊನೆಗೆಂದರು, “ಹೋಗಲೇಬೇಕೆಂದಿದ್ದೀರಿ, ಎಲ್ಲರೂ ಪ್ರಣಾಮ ಮಾಡಿ. ಮತ್ತೆ ಬೇಗನೆ ಬನ್ನಿ.”

ಜನವರಿ ೧೫, ೧೯೩೬: ಸ್ವಾಮೀಜಿಯ ಜಯಂತಿ ಪೂಜೆ. ಮುಂಜಾನೆ ಚಳಿಯಲ್ಲಿ ನಡುಗುತ್ತ ಭಕ್ತನು ತನ್ನ ಪ್ರೀತಿಯ ಸಾರಗಾಛಿ ಆಶ್ರಮಕ್ಕೆ ಬಂದು ತಲುಪಿದನು.

ಈ ಸಲವೂ ಕಳೆದ ಬಾರಿಯಂತೆ ಬೆಳಗಿನ ಮಬ್ಬುಗತ್ತಲಲ್ಲಿ ಬಾಬಾರ ದರ್ಶನವಾಯಿತು. ಈ ಬಾರಿಯೂ ಮೊದಲ ಪ್ರಶ್ನೆ ಅದೇ: “ನನಗೋಸ್ಕರ ಏನೇನು ತಂದಿರುವೆ? ಅದನ್ನು ನನಗೆ ಕೊಡು. ಠಾಕೂರರಿಗೆ ಏನೇನು ತಂದಿರುವೆ? ಅದನ್ನು ಆ ಕೊಠಡಿಗೆ ತೆಗೆದುಕೊಂಡು ಹೋಗು.”

ಬೆಳಗ್ಗೆ ಅವರ ಬಳಿ ಕುಳಿತುಕೊಳ್ಳುತ್ತಲೇ ಅವರು ಹೇಳಿದರು: “ಈಗ ಇಲ್ಲಿ ಕುಳಿತುಕೊಳ್ಳುವುದಲ್ಲ. ಹೋಗು, ದೇವರಮನೆಯಲ್ಲಿ ಕೆಲಸ ಮಾಡು, ಹೋಗು. ಹಣ್ಣುಗಳನ್ನು ಹೆಚ್ಚಲು ಬರುತ್ತದೆ ತಾನೇ?”

ಮಧ್ಯಾಹ್ನ ಉತ್ಸವ ಇತ್ಯಾದಿ ನಡೆದವು. ಸಂಜೆ ಪೂರ್ವ ಬಂಗಾಳದಿಂದ ಬಂದ ದೀಕ್ಷಾರ್ಥಿಯೊಬ್ಬನು ಕೇಳುತ್ತಿದ್ದಾನೆ: “ನಿಮಗೆ ಠಾಕೂರರ ನೆನಪು ಬಹಳವಾಗಿ ಆಗುತ್ತದೆಯೆ?” ಬಾಬಾ ಉತ್ತರಿಸಿದರು, “ಆಗುತ್ತದೆ ಎಂದರೇನು? ಚೆನ್ನಾಗಿಯೇ ಆಗುತ್ತದೆ. ಅವರ ನೆನಪಲ್ಲದೆ ಇನ್ನು ಯಾರ ನೆನಪಾಗಬೇಕು?”

ದೀಕ್ಷಾರ್ಥಿ: 'ಕಥಾಮೃತ' (ಶ್ರೀರಾಮಕೃಷ್ಣ ವಚನವೇದ)ದಲ್ಲಿ ನಿಮ್ಮ ವಿಷಯವೇ ಇಲ್ಲ. ಒಂದೆರಡು ಕಡೆ ಬರೀ ಹೆಸರಿದೆ ಅಷ್ಟೆ.

ಬಾಬಾ: ಎಂದರೆ, ನಾನವರ ಬಳಿ ಹೋಗಲಿಲ್ಲ!

ಸರಳನಾದ ದೀಕ್ಷಾರ್ಥಿಯು ಸುಮ್ಮನಾದನು.

ಬಾಬಾ: ನಿಜ ಸಂಗತಿಯೇನು ಗೊತ್ತೆ? ಮಾಸ್ಟರ್ ಮಹಾಶಯರು ರಜಾದಿನಗಳಂದು ಹೋಗುತ್ತಿದ್ದರು. ಆ ದಿನ ಗೃಹಸ್ಥ ಭಕ್ತರು ಬಹಳ ಮಂದಿ ಸೇರುತ್ತಿದ್ದರು. ಹಾಗೂ ನಾವು ಬೇರೆ ದಿನಗಳಂದು ಹೆಚ್ಚಾಗಿ ಹೋಗುತ್ತಿದ್ದೆವು. ರಾತ್ರಿ ಅಲ್ಲೇ ಕಳೆಯುತ್ತಿದ್ದು , ಹಗಲು ಹೊತ್ತು ಠಾಕೂರರ ಕೋಣೆಯಲ್ಲಿ ಹೆಚ್ಚು ಜನರಿರುತ್ತಿದ್ದರೆ, ಶಿವಮಂದಿರಕ್ಕೆ ಅಥವಾ ಪಂಚವಟಿಗೆ ಓಡುತ್ತಿದ್ದೆವು.

ಮರುದಿನ ಸಂಜೆ ಭಕ್ತನು ಕೇಳಿಕೊಂಡ, “ಠಾಕೂರರ ಬಗ್ಗೆ ಏನಾದರೂ ಹೇಳಿ” ಎಂದು. (ಈ ದಿನವೇ ಬೆಳಗ್ಗೆ ಅವನಿಗೆ ಮಂತ್ರ ದೀಕ್ಷೆಯಾಗಿತ್ತು.)

ಬಾಬಾ : ಏನು ಹೇಳಲಿ, ಹೇಳು?

ಭಕ್ತ : ಅವರ ಬಗ್ಗೆ ನಿಮ್ಮಿಂದಲೇ ಕೇಳಬೇಕೆಂಬ ಆಸೆ. ಅವರನ್ನು ಯಾವಾಗ ನೋಡಿದಿರಿ ಮತ್ತು ಹೇಗೆ? ಆ ದಿನದ ವಿಷಯ ಪುಸ್ತಕದಲ್ಲಿಲ್ಲ. ನಾನು ಇನ್ನು ಯಾವಾಗ ಬರುತ್ತೇನೋ ಏನೋ.

ಬಾಬಾ : ಮೊದಲ ಬಾರಿ ಭೇಟಿಯಾದಾಗ, ನಾನಿನ್ನೂ ತುಂಬ ಚಿಕ್ಕ ಹುಡುಗ. ಚಿಕ್ಕಂದಿನಲ್ಲಿ ಬಟ್ಟೆಯನ್ನು ಸೊಂಟದ ಮೇಲೆ ಉಟ್ಟು ಶೌಚಕ್ಕೆ ಹೋಗುತ್ತಿದ್ದೆ. ಅನಂತರ ಶುಚಿ ಮಾಡಿಕೊಳ್ಳಲು ಗಂಗೆಗೆ ಹೋಗುತ್ತಿದ್ದೆ. ಆಗ ಅವರು ಭಕ್ತರೊಂದಿಗೆ ಕುಳಿತ್ತಿದ್ದರು. ಅವರು ನನ್ನನ್ನು ನೋಡಿದರು, ಆಗ ಗಂಗೆಯ ನೀರು ಇಳಿಮುಖವಾಗಿತ್ತು – ನಾನು ನೀರಿಗೆ ಬಹಳಷ್ಟು ಇಳಿದಿದ್ದೆ. ಅವರು ನನ್ನನ್ನು ಕರೆದರು, “ಅಯ್ಯಾ, ಅಲ್ಲಿಗೆ ಹೋಗಬೇಡ! ಅಲ್ಲಿಗೆ ಹೋಗಬೇಡ! ಹಂಸಪುಕುರಕ್ಕೆ ಹೋಗು. ಗಂಗಾವಾರಿ ಬ್ರಹ್ಮವಾರಿ. ಅದರಲ್ಲಿ ಶುಚಿ ಮಾಡಿಕೊಳ್ಳುವುದೆ?” ನಾನೂ ಬಿಡುವ ಹುಡುಗನಲ್ಲ. ನಾನೆಂದೆ, “ಇಲ್ಲಿ ಗಂಗೆಯನ್ನು ಬಿಟ್ಟರೆ ಬೇರಾವ ನೀರೂ ಇಲ್ಲವಲ್ಲ?” ಠಾಕೂರರೆಂದರು, “ಇಲ್ಲಿಯ ವಿಷಯವೇ ಬೇರೆ.”

“ದಕ್ಷಿಣೇಶ್ವರದಲ್ಲಿ ಠಾಕೂರರ ಕೋಣೆಯು ಸದಾ ಭಗವದ್ಭಾವದಿಂದ ತುಂಬಿ ತುಳುಕುತ್ತಿತ್ತು! ಸಾಮಾನ್ಯವಾಗಿ ಎಲ್ಲರಿಗೂ ಅನುಭೂತಿಗಳಾಗುತ್ತಿದ್ದವು. ಸಹಜವಾಗಿಯೆ ಆಧ್ಯಾತ್ಮಿಕ ಪ್ರೇರಣೆಯಾಗುತ್ತಿತ್ತು. ನೂರಾರು ಜನ್ಮಗಳ ಸಾಧನೆಯ ಫಲವು ಅಲ್ಲಿ ಧ್ಯಾನಕ್ಕೆ ಕುಳಿತರೆ ಲಭ್ಯವಾಗುತ್ತಿತ್ತು. ಠಾಕೂರರಿಗಾದರೋ ಆಗಾಗ ಭಾವಸಮಾಧಿಯುಂಟಾಗುತ್ತಿತ್ತು. ಈ ಕ್ಷಣ ಸಮಾಧಿ ಭಂಗವಾದರೆ ಮತ್ತೆ ಸಮಾಧಿಯುಂಟಾಗುತ್ತಿತ್ತು. ಇವೆಲ್ಲಾ ಹೇಳುವಂಥವೆ? ಅವರ ಒಂದೊಂದೇ ಮಾತುಗಳ ಮೂಲಕ ವೇದ ವೇದಾಂತವನ್ನರಿಯುವುದು ಎಷ್ಟೊಂದು ಸುಲಭವಾಗಿಬಿಡುತ್ತಿತ್ತು!

“ಠಾಕೂರರು ನನಗೆಂದರು, ನಿನಗೆ ನರೇಂದ್ರನ ಪರಿಚಯವಿದೆಯೆ? ಅವನು ಕಲ್ಕತ್ತೆಯ ಹುಡುಗ. ಅವನದು ಬೊಗಸೆಗಣ್ಣು

ಗಳು – ಅವು ಹೊರನೋಡುತ್ತಿರುವಂತೆ ಇವೆ, ಆದರೆ ನಿಜವಾಗಿ ಅಂತರ್ಮುಖಿ. ಅವನೊಡನೆ ಹೆಚ್ಚಾಗಿ ಒಡನಾಡು. ಮಾರನೆಯ ದಿನವೇ ನಾನು ಸ್ವಾಮೀಜಿ ಬಳಿಗೆ ಹೋದೆ, ಅವರಿಂದ ಆಕರ್ಷಿತ ನಾದೆ. ಅನಂತರ ನೆರಳಿನಂತೆ ಅವರೊಡನೆ ಸುತ್ತಾಡಿದ್ದೇನೆ.

''ಆಗ ನಾನು ಬಹಳ ಆಚಾರವಂತನಾಗಿದ್ದೆ. ಸಸ್ಯಾಹಾರವನ್ನೇ ತೆಗೆದುಕೊಳ್ಳುತ್ತಿದ್ದೆ. ಸ್ವಾಮೀಜಿ ಅದಕ್ಕೇ ನನ್ನನ್ನು ಬಯ್ಯುತ್ತಿದ್ದರು. ಅವರೆನ್ನುತ್ತಿದ್ದರು, 'ಅವೆಲ್ಲ ಬಿಟ್ಟುಬಿಡು. ಮೀನು, ಮಾಂಸ ತಿನ್ನು. ಧರ್ಮಕ್ಕೂ ಇದಕ್ಕೂ ಸಂಬಂಧವಿಲ್ಲ.' ನಾನವರ ಮಾತನ್ನು ಕೇಳು ತ್ತಿರಲಿಲ್ಲ. ನನ್ನನ್ನೊಪ್ಪಿಸಲು ಅವರಿಗೂ ಸಾಧ್ಯವಾಗುತ್ತಿರಲಿಲ್ಲ. ಆದ್ದ ರಿಂದಲೇ ಅವರ ಉತ್ಸವದಂದು ಮೀನುಗೀನು ಇಲ್ಲದಿದ್ದರೆ ದುಃಖ ವಾಗುತ್ತದೆ. ಆಶ್ಚರ್ಯವೆಂದರೆ ಇದೇ ನೋಡು – ನಿನ್ನೆ ಎಷ್ಟೊಂದು ಮೀನು ಬಂದವು; ಎಲ್ಲರೂ ತಿಂದಿರಿ! ಭಕ್ತರು ಹಾಗೂ ಅವರ ದರಿದ್ರ ನಾರಾಯಣರು!

''ಠಾಕೂರರು ಹೇಳುತ್ತಿದ್ದರು, 'ಏಕೆ ಆಚಾರವಂತನಾಗಬೇಕು? ಹೋಗು, ಕಾಳಿಯ ಗುಡಿಯಲ್ಲಿ ಪ್ರಸಾದವನ್ನುಂಡು ಬಾ' ಅಂತ. ನನಗೆ ಅದು ಇಷ್ಟವಾಗುತ್ತಿರಲಿಲ್ಲ. ಅದನ್ನು ತಿಳಿದ ಠಾಕೂರರು ನಾನು ಯಾವ ಗುಡಿಗೆ ಹೋಗುತ್ತಿದ್ದೆನೆಂದು ನೋಡುತ್ತಿದ್ದರು– ಕಾಳಿಯ ಗುಡಿಗೋ, ವಿಷ್ಣುವಿನ ಗುಡಿಗೋ ಅಂತ. ಕಾಳಿಯ ದೇವಸ್ಥಾನಕ್ಕೆ ಹೋಗುತ್ತಿದ್ದೆ , ಪ್ರಸಾದವನ್ನು ತಿಂದಾದ ಮೇಲೆ, 'ಅಮ್ಮಾ, ಇವೆಲ್ಲಾ ತಿನ್ನದಿದ್ದರೆ ನಿನಗೇನು ಸರಿಯೆನಿಸುವುದಿಲ್ಲವೆ?' ಎಂದುಕೊಳ್ಳುತ್ತಿದ್ದೆ. ಹೀಗೆ ಅದೆಷ್ಟು ವಿಷಯಗಳು! ಹೇಳುತ್ತಾ ಹೋದರೆ ಮುಗಿಯುವುದಿಲ್ಲ. ಠಾಕೂರರು ಪ್ರಕಾಶಗೊಂಡದ್ದು ಎಷ್ಟು? One fourth (ಕಾಲು ಭಾಗ) ಅಥವಾ ಕಾಲು ಭಾಗದ ಕಾಲು ಅಂಶ!

''ಸ್ವಾಮೀಜಿಯ ಮಾತುಗಳು ಅದೆಷ್ಟು ಜ್ಞಾಪಕಕ್ಕೆ ಬರುತ್ತವೆ! ಸ್ವಾಮೀಜಿ ಯಾವಾಗ ಏನನ್ನು ಒತ್ತಿ ಹೇಳುತ್ತಿದ್ದರೋ, ಕೇಳಿದವರಿಗೆ ಅದೇ ಸತ್ಯ, ಮಿಕ್ಕವೆಲ್ಲ ಏನೂ ಇಲ್ಲ ಅನ್ನಿಸುತ್ತಿತ್ತು. ಬೇಲೂರಿನ ಗಂಗಾ ತೀರದಲ್ಲಿ ಎಷ್ಟು ದಿನ, ಎಷ್ಟು ಭಾವಗಳು! ಯಾವ ದಿನ ಯಾವ ರೀತಿಯ ಭಾವವೋ ಆ ದಿನ ಬೇಲೂರು ಮಠದಲ್ಲಿ ಅದೇ ಭಾವವಿರು ತ್ತಿತ್ತು. ಶಿವನ ಬಗ್ಗೆ ಮಾತನಾಡಿದ ದಿನ, ಸ್ವಾಮೀಜಿಯೇ ಸಾಕ್ಷಾತ್ ಶಿವ, ಶಂಕರ ಎನ್ನಿಸುತ್ತಿತ್ತು. ಇಡೀ ಮಠದಲ್ಲಿ ಅದೇ ಭಾವ. ಬುದ್ಧನ ವಿಚಾರವಾಗಿ ಮಾತನಾಡಿದಂದು ಇದೊಂದು ಬೌದ್ಧಮಠವೆಂದು ಭಾಸವಾಗುತ್ತಿತ್ತು. ಎಲ್ಲವೂ ಶಾಂತ, ಸ್ಥಿರ. ಅವರು ಎಂದು ರಾಧಾ ರಾಣಿಯ ವಿಷಯವಾಗಿ ಮಾತನಾಡುತ್ತಿದ್ದರೊ, ಅಂದು ಎಲ್ಲಾ ಬಂಧನಗಳನ್ನೂ ಕಿತ್ತೊಗೆದು ಅವರು ವ್ರಜಗೋಪಿಯಾದಂತೆ ತೋರುತ್ತಿದ್ದು, ಮಠವೆಲ್ಲ ಸುಮಧುರ ಗೋಪೀಭಾವದಿಂದ ತುಂಬಿ ದಂತಿರುತ್ತಿತ್ತು. ಸ್ವಾಮೀಜಿ ಅನೇಕ ಬಾರಿ ಹೇಳಿದ್ದಾರೆ:

Radha was not of flesh and blood
Radha was a froth of flesh in the ocean of love

'ರಾಧೆ ರಕ್ತ-ಮಾಂಸಗಳಿಂದ ಕೂಡಿದವಳಲ್ಲ. ಆಕೆ ಪ್ರೇಮ ಸಮುದ್ರದಲ್ಲಿನ ಒಂದು ಬುದ್ಬುದ'

೧೭ ನೇ ಜನವರಿ: ಸಂಜೆ ಬ್ರಹ್ಮಚಾರಿ ಆದಿಚೈತನ್ಯ (Rudolf Ady– ಜರ್ಮನ್) ಮೊದಲನೇ ಮಹಾಯುದ್ಧದ ನಂತರ ವೈರಾಗ್ಯಹೊಂದಿ ಅಮೆರಿಕಾಗೆ ಹೋದರು. ಅಲ್ಲಿ Vedantha Society(ವೇದಾಂತ ಸೊಸೈಟಿ)ಯ ಸಂಪರ್ಕಕ್ಕೆ ಬಂದು ಭಾರತಕ್ಕೆ ಆಗಮಿಸಿದರು. ಅನೇಕ ಹಣ್ಣು – ಸಿಹಿತಿಂಡಿಗಳನ್ನು ತೆಗೆದುಕೊಂಡು (ಸಾರಗಾಛಿಗೆ) ಬಂದಿದ್ದಾರೆ. ನೆಲದ ಮೇಲೆ ಕುಳಿತು, ಪಾದಗಳಿಗೆ ತಮ್ಮ ಶಿರವನ್ನು ಮುಟ್ಟಿಸಿ ಬಾಬಾಗೆ ಪ್ರಣಾಮ ಮಾಡಿದ್ದಾರೆ. ಬಾಬಾ ನಮ್ಮೆಡೆ ತಿರುಗಿ ಹೇಳಿದರು, ''ನೋಡಿ ನೋಡಿ, ಇವರಿಂದ ಕಲಿಯಿರಿ. ಭಕ್ತಿಯನ್ನು ಕಲಿಯಿರಿ. ಮಾಡಬೇಕಾದ್ದನ್ನು ಮಾಡುವವ ರೆಂದರೆ ಇವರೇ – ಧ್ಯಾನ, ಧಾರಣೆ, ತ್ಯಾಗ, ತಪಸ್ಸು. ಅವರಲ್ಲಿ ದೃಢತೆಯಿದೆ, ಇಲ್ಲವಾದರೆ ಹೇಗೆತಾನೆ ಸಾಧ್ಯ? ಎಲ್ಲರೂ ಬಂದು ದೀಕ್ಷೆಯನ್ನು ಪಡೆದು ಹೋಗುತ್ತಾರೆ. ನಂತರ ಅವರೇನು ಮಾಡುತ್ತಾರೆಂದು ತಿಳಿಯಲು ನನಗೂ ಸಾಧ್ಯವಿಲ್ಲ. ಎಲ್ಲವನ್ನೂ ಸಾವಧಾನದಿಂದ ಉಪಯೋಗಿಸಿಕೊಳ್ಳುವ ಬಗೆ ಅವರಿಗೆ ತಿಳಿದಿದೆ. ಇದರೊಳಗೆ ಅದೇನನ್ನು ನೋಡುತ್ತಾರೋ, ನನಗೇನು ಗೊತ್ತು? ಆ ದಿನ ಅವನು, 'ಬಾಬಾ, ಗಂಗಾಸ್ನಾನಕ್ಕೆ ಹೋಗುತ್ತೇನೆ,' ಎಂದಾಗ ಬೇಡವೆಂದೆ. ಹಳ್ಳಿಯ ರಸ್ತೆಗಳು, ವೈಶಾಖ – ಜ್ಯೇಷ್ಠಮಾಸ. ಕೊನೆಗೆ, ಯಾರನ್ನಾದರೂ ಜೊತೆಯಲ್ಲಿ ಕರೆದುಕೊಂಡು ಹೋಗಲು ಹೇಳಿದೆ. ಗಂಗೆಯ ಮೇಲೆ ಯಾರಿಗೆ ಭಕ್ತಿಯುಂಟಾಗಿದೆಯೋ, ಅವರಿಗಿನ್ನೇನು ಬೇಕು?''

ಸ್ನಾನವನ್ನು ಮುಗಿಸಿ ಮರಳಿ ಬಂದ ದಂಡಕಮಂಡಲುಧಾರಿ ಗೌರವರ್ಣದ ಬ್ರಹ್ಮಚಾರಿ ಬಂದು ನಮಸ್ಕರಿಸಿದನು. ನನಗೆ ಅವ ನನ್ನು ಗುರುತಿಸಲಾಗಲಿಲ್ಲ. ಅವನು ಸಾಕ್ಷಾತ್ ಶಿವನಂತೆ ಕಂಡನು.

೧೮ನೇ ಜನವರಿ: Miss. Mcleod (ಮಿಸ್ ಮ್ಯಾಕ್‌ಲೌಡ್), Mr. & Mrs. Brewster (ಶ್ರೀಮತಿ ಹಾಗೂ ಶ್ರೀ ಬ್ರೂಸ್ಟರ್) ಕಲಾವಿದರನ್ನು ಜೊತೆಯಲ್ಲಿ ಕರೆದುಕೊಂಡು Ady(ಆದಿಚೈತನ್ಯ) ಮತ್ತೆ ಬಂದಿದ್ದಾನೆ. ಸೆಲೂನು ಗಾಡಿ ರೈಲ್ವೆಯ ಸೈಡಿಂಗ್‌ನಲ್ಲೇ ಇದೆ. ಮಿಸ್ ಮ್ಯಾಕ್‌ಲೌಡ್ ಹಿಂದೆಂದೂ ಸಾರಗಾಛಿಯನ್ನು ನೋಡಿರ ಲಿಲ್ಲ. ಬಹಳ ದಿನಗಳಿಂದ ನೋಡಬೇಕೆಂಬ ಆಸೆ ಆಕೆಗಿತ್ತು. ಆದ್ದರಿಂದ ಬಂದಿದ್ದಾರೆ. ಉಪಹಾರವನ್ನು ತಮ್ಮೊಡನೆಯೇ ತಂದಿ ದ್ದಾರೆ. ಅಡುಗೆಯವನೂ ಜೊತೆಯಲ್ಲಿದ್ದಾನೆ. ಆಶ್ರಮದಿಂದ ಅವರಿಗೆ ಬೇಕಾದುದು ಹಾಲು ಮಾತ್ರವೆ.

ಎಲ್ಲರ ಉಪಹಾರದ ನಂತರ ಇಬ್ಬರೂ ಶ್ರೀರಾಮಕೃಷ್ಣರ ಮಂದಿರದ ನೆಲದ ಮೇಲೆ ಕುಳಿತು ಮಾತನಾಡುತ್ತಿದ್ದಾರೆ. ಮಿಸ್ ಮ್ಯಾಕ್ಲೌಡ್‌ನ ಪ್ರಶ್ನೆಗಳಿಗೆ ಬಾಬಾ ಉತ್ತರಿಸುತ್ತಿದ್ದಾರೆ.

Sw. A : Yes, I have seen Swamiji after his passing away as clearly as I see you now, otherwise I could not live. Seperation was so painful! I was going to commit sucide but was prevented by Swamiji. He caught my hand when I was about to jump under the running tram.

(ಸ್ವಾಮಿ ಅಖಂಡಾನಂದ: ಹೌದು. ಸ್ವಾಮೀಜಿಯ ದೇಹತ್ಯಾಗದ ನಂತರವೂ ನಾನವರನ್ನು ಸ್ಪಷ್ಟವಾಗಿ ನೋಡಿದ್ದೇನೆ, ಈಗ ನಿನ್ನನ್ನು ನೋಡುತ್ತಿರುವಂತೆಯೇ ನೋಡಿದ್ದೇನೆ. ಇಲ್ಲವಾದರೆ ನಾನು ಜೀವಂತವಾಗಿರುತ್ತಿರಲಿಲ್ಲ. ವಿಯೋಗವು ಎಷ್ಟು ದುಃಖಕರವಾಗಿತ್ತೆಂದರೆ ನಾನು ಆತ್ಮಹತ್ಯೆ ಮಾಡಿಕೊಳ್ಳಲೆಂದು ಚಲಿಸುತ್ತಿದ್ದ ಟ್ರಾಮ್‌ನ ಕೆಳಗೆ ಧುಮುಕಲು ಹೊರಟಿದ್ದೆ. ಸ್ವಾಮೀಜಿ ನನ್ನ ಕೈಹಿಡಿದು ತಡೆದರು.)

Miss. Mac L: : Yes he lives in you, in me, in all. He cannot die. He is Atman. They say Swamiji was a great teacher, but I and many others knew him to be a great learner. He learnt from all, so he conquered all. He would learn something always, so he was always fresh, never monotonous – never repeating the same thing.

(ಮಿಸ್. ಮ್ಯಾಕ್‌ಲೌಡ್: ಹೌದು, ಅವರು ನಿಮ್ಮೊಳಗೆ, ನನ್ನೊಳಗೆ ಎಲ್ಲರೊಳಗೆ ಇದ್ದಾರೆ. ಅವರಿಗೆ ಸಾವಿಲ್ಲ – ಅಮರ ಆತ್ಮರು. ಜನರು ಸ್ವಾಮೀಜಿಯವರೊಬ್ಬರು ದೊಡ್ಡ ಗುರುಗಳೆಂದು ಹೇಳುತ್ತಾರೆ, ಆದರೆ ಅವರೊಬ್ಬ ದೊಡ್ಡ ವಿದ್ಯಾರ್ಥಿ. ಅವರು ಎಲ್ಲರಿಂದಲೂ ಕಲಿಯುತ್ತಿದ್ದರು. ಆದ್ದರಿಂದಲೇ ಅವರು ಎಲ್ಲರ ಮನಸ್ಸನ್ನೂ ಗೆದ್ದಿದ್ದರು. ಸರ್ವದಾ ಅವರು ಒಂದಲ್ಲ ಒಂದು ವಿಷಯವನ್ನು ಕಲಿತುಕೊಳ್ಳುತ್ತಿದ್ದರು. ಆದ್ದರಿಂದಲೇ ಅವರು ಚಿರನೂತನರಾಗಿದ್ದಾರೆ, ಎಂದೂ ಏಕಸ್ವರವುಳ್ಳವರಾಗಿರಲಿಲ್ಲ – ಒಂದೇ ವಿಷಯವನ್ನು ಒಂದೇ ರೀತಿಯಲ್ಲಿ ಎಂದಿಗೂ ಹೇಳುತ್ತಿರಲಿಲ್ಲ.)

Swami A : Yes, that is the teaching of our Guru Maharaj. On his deathbed, unable to speak because of throatsore, he violently protested against somebody saying 'I know'… … He said, 'you know! What do you know of the infinite ? Don't say this again, say, 'Friend, so long as I live, I learn.' That is what he taught and what we learnt.

(ಸ್ವಾಮಿ ಅಖಂಡಾನಂದ: ಹೌದು. ನಮಗೆ ನಮ್ಮ ಗುರು ಮಹಾರಾಜರು ಈ ಶಿಕ್ಷಣವನ್ನೇ ಕೊಟ್ಟಿದ್ದರು. ಮರಣಶಯ್ಯೆಯಲ್ಲಿದ್ದಾಗ ಗಂಟಲು ನೋವಿನಿಂದಾಗಿ ಅವರಿಗೆ ಮಾತನಾಡಲು ಆಗುತ್ತಿರಲಿಲ್ಲ. ಆಗ ಒಬ್ಬನು 'ನನಗೆ ಗೊತ್ತು…' ಎಂದಾಕ್ಷಣವೇ ಠಾಕೂರರೆಂದರು 'ಏನು ಗೊತ್ತು? ಇನ್ನೆಂದೂ ಹಾಗೆನ್ನಬೇಡ. ಗೆಳೆಯ, ಬದುಕಿರುವವರೆಗೂ ನಾನು ಕಲಿಯುತ್ತೇನೆ.' ಅವರು ನಮಗೆ ಅದನ್ನೇ ಕಲಿಸಿದ್ದರು, ನಾವೂ ಅದನ್ನೇ ಕಲಿತೆವು.)

Ms. Mac L.: Give me your message for the coming Centenary. They want it.

(ಮಿಸ್. ಮ್ಯಾಕ್‌ಲೌಡ್: ಬರಲಿರುವ ಶ್ರೀರಾಮಕೃಷ್ಣ ಜನ್ಮಶತಾಬ್ಧಿ ಸಂಚಿಕೆಗೆ ನಿಮ್ಮ ಸಂದೇಶವನ್ನು ನೀಡಿ. ಅವರಿಗದು ಬೇಕು)

Sw. A: I have no measage of mine own, but I have got this message from the Lord. 'I am Infinite and Eternal. What is my Centenary?' (ನನ್ನದೇ ಆದ ಸಂದೇಶವೇನೂ ಇಲ್ಲ. ಆದರೆ ನಾನು ಭಗವಂತನಿಂದ ಈ ಸಂದೇಶವನ್ನು ಪಡೆದಿದ್ದೇನೆ – 'ನಾನೇ ಅನಾದಿ, ಅನಂತ. ಹೀಗಿರುವಾಗ ನನ್ನ ಶತಾಬ್ದಿ ಎಂದರೇನು?')

Miss. Mac L: All right. I shall take this message with me. (ಸರಿ. ನಾನು ಈ ಸಂದೇಶವನ್ನೇ ತೆಗೆದುಕೊಂಡು ಹೋಗುತ್ತೇನೆ.)

ದಿನವಿಡೀ ಅಲ್ಲೇ ಇದ್ದು ಸ್ವಾಮೀಜಿ ಸಂಬಂಧವಾಗಿ ನಾನಾ ವಿಷಯಗಳನ್ನು ಮಾತನಾಡುತ್ತ ಈ ೮೦ ವಯಸ್ಸಿನ ವೃದ್ಧೆಯು ಆಶ್ರಮವನ್ನು ತರುಣಿಯ ಉತ್ಸಾಹದಿಂದ ಹಾಗೂ ಪ್ರೇಮಪೂರಿತ ದೃಷ್ಟಿಯಿಂದ ಕಾಣತೊಡಗಿದರು.

ದೇಗುಲದ ಗರ್ಭಗೃಹದ ವೇದಿಕೆಯಲ್ಲಿ ಸ್ವಾಮೀಜಿಯ ಒಂದು ಸ್ಫಟಿಕದ ಮೂರ್ತಿ (ಪರಿವ್ರಾಜಕ ವೇಷದಲ್ಲಿ)ಯನ್ನು ನೋಡಿ ಅವರು ಬಹಳ ಸಂತೋಷಗೊಂಡರು. ಅದು ಆಕೆಯ ನಿರ್ದೇಶನದಂತೆಯೇ ತಯಾರಿಸಿದ ಒಂದು ಕೊಡುಗೆಯಾಗಿತ್ತು.

Miss. Mac L: Yes, nothing but crystal can represent Swamiji. (ಸ್ವಾಮೀಜಿಯವರನ್ನು ಸ್ಫಟಿಕವಲ್ಲದೆ ಮತ್ತೇನೂ ಪ್ರತಿನಿಧಿಸಲಾರದು.)

ಸ್ವಾಮೀಜಿಯ ಉಜ್ವಲತೆ ಹಾಗೂ ಪರಿಶುದ್ಧತೆಯನ್ನು ಪರಿಗಣಿಸಿಯೇ ಆಕೆ ಈ ಮಾತುಗಳನ್ನು ಹೇಳಿದ್ದರೆನ್ನಿಸುತ್ತದೆ. ಹೀಗೆ ಇಂಥ ಅನೇಕ ವಿಷಯಗಳ ಬಗ್ಗೆ ಮಾತನಾಡಿ ಸಂಜೆಯ ರೈಲುಗಾಡಿಯಲ್ಲಿ ಎಲ್ಲರೂ ಹೊರಟುಹೋದರು. ಹೋಗುವಾಗ Ady ಹೇಳಿದರು, 'Saragachi is an oasis in the midst of a desert.' (ಸಾರಗಾಛಿಯು ಮರುಭೂಮಿಯ ಮಧ್ಯದಲ್ಲಿ ಒಂದು ಉದ್ಯಾನ.)

(ಮುಂದುವರಿಯುವುದು) *

ಚಂಡಮಾರುತ ಅಪ್ಪಳಿಸಿದಾಗ ಜನರಿಗೆ ಗಾಬರಿಯಾಗುವುದು. ಅಂಥ ವೇಳೆ ಸಮಾಧಾನದಿಂದಿರಬೇಕು. ಅದೇರೀತಿ ಮನಸ್ಸಿನಲ್ಲೂ ಬಿರುಗಾಳಿಯೇಳುವುದುಂಟು. ಆಗ ಯಾರು ಮನಸ್ಸನ್ನು ಸ್ಥಿರವಾಗಿ ಭಗವಂತನಲ್ಲೇ ನೆಲೆನಿಲ್ಲಿಸುವರೋ, ಆಗ ಬಿರುಗಾಳಿ ಏನೂ ಮಾಡದು. ಪೂರ್ಣ ಮನಸ್ಸಿನಿಂದ ಭಗವಂತನಲ್ಲಿ ಶರಣಾಗು. ಬಿರುಗಾಳಿ ಶಾಶ್ವತವೇನಲ್ಲ. ಮತ್ತೆ ಒಳ್ಳೆಯ ಭಾವನೆಗಳು ಬರುವವು; ಮತ್ತೆ ನಿನ್ನ ಮನಸ್ಸಿನಲ್ಲಿ ಶಾಂತಿ ನೆಲೆಸುವುದು. ಶಾಂತಿಯ ಮೂರ್ತರೂಪವಾದ ಭಗವಂತನನ್ನು ಮಾತ್ರ ಎಂದಿಗೂ ಬಿಟ್ಟುಬಿಡಬೇಡ.

–ಸ್ವಾಮಿ ತುರೀಯಾನಂದ

('Spiritual Treasures' ಗ್ರಂಥದಿಂದ)

ಸ್ವಾಮಿ ನಿತ್ಯಸ್ಥಾನಂದ

ವಿಶ್ವರೂಪದರ್ಶನ

ಪ್ರತಿಯೊಂದಕ್ಕೂ ವ್ಯಕ್ತ ಮತ್ತು ಅವ್ಯಕ್ತ ಎಂಬ ಎರಡು ರೂಪಗಳಿರುತ್ತವೆ. ಇಂದ್ರಿಯ ಮನಸ್ಸುಗಳಿಗೆ ಗೋಚರವಾದುದು ವ್ಯಕ್ತ, ಗೋಚರವಾಗದುದು ಅವ್ಯಕ್ತ. ಬೀಜವು ವ್ಯಕ್ತ ರೂಪ, ಅದರಲ್ಲಿ ಸುಪ್ತವಾಗಿರುವ ಮರ ಅವ್ಯಕ್ತರೂಪ. ಸಂಗೀತವು ವ್ಯಕ್ತವಾದ ಸ್ಥೂಲ ಸ್ಪಂದನ, ಅದರ ಹಿಂದೆ ಅವ್ಯಕ್ತವಾದ ಸೂಕ್ಷ್ಮ ಸ್ಪಂದನಗಳಿರುತ್ತವೆ. ನಾವಾಡುವ ಮಾತು ವ್ಯಕ್ತರೂಪ, ಅದರ ಹಿಂದೆ ಅವ್ಯಕ್ತ ಭಾವನೆಗಳಿರುತ್ತವೆ. ಪ್ರಪಂಚವು ವ್ಯಕ್ತರೂಪ, ಇದು ಲೀಲೆ. ಇದರ ಹಿಂದೆ ಅವ್ಯಕ್ತ ಸತ್ಯವಿದೆ, ಅದನ್ನು ನಿತ್ಯ ಎನ್ನುತ್ತಾರೆ. ನಿತ್ಯದ ಇನ್ನೊಂದು ರೂಪವೇ ಲೀಲೆ. ಬೀಜವು ತಾನು ನಾಶವಾಗಿ, ತಾನಾಗಿಯೇ ಮರವಾಗುತ್ತದೆ. ಮಣ್ಣು ತಾನು ನಾಶವಾಗದೆಯೇ ಮಡಕೆಯಾಗುತ್ತದೆ, ಆದರೆ ಇನ್ನೊಬ್ಬರ ಸಹಾಯದಿಂದ. ಸಮುದ್ರವು ತಾನು ನಾಶವಾಗದೆ, ತಾನಾಗಿಯೇ ಅಲೆಗಳಾಗುತ್ತದೆ. ಹೀಗೆ ಭಗವತ್ ಸತ್ಯವು ತಾನಾಗಿಯೇ, ತನ್ನನ್ನು ಕಳೆದುಕೊಳ್ಳದೆ ಪ್ರಪಂಚವಾಗಿ ಕಾಣಿಸಿಕೊಳ್ಳುತ್ತದೆ. ಇದನ್ನೇ ಲೀಲೆ ಎಂದು ಕರೆಯುವುದು.

ಸಮುದ್ರವು ಅಲೆಗಳಾದಾಗ ನೀರಿನ ಸ್ವರೂಪದಲ್ಲಿ ಯಾವ ಬದಲಾವಣೆಯೂ ಉಂಟಾಗುವುದಿಲ್ಲ. ಆದರೆ ನಮ್ಮ ಭಗವತ್ ಕಲ್ಪನೆಗೂ ಕಾಣುವ ವಿಶ್ವಕ್ಕೂ ಯಾವ ಹೊಂದಾಣಿಕೆಯೂ ಇಲ್ಲ. ಈ ಪ್ರಪಂಚ ದ್ವಂದ್ವಮಯ, ಆದರೆ ಭಗವಂತನಲ್ಲಿ ಯಾವ ದ್ವಂದ್ವವನ್ನೂ ನಾವು ಕಾಣುವಂತಿಲ್ಲ. ರೌದ್ರ-ಸೌಮ್ಯ, ಹುಟ್ಟು-ಸಾವು, ಒಳಿತು-ಕೆಡುಕು, ಪಾಪ-ಪುಣ್ಯ, ಸುಖ-ದುಃಖ - ಇವೇ ಮುಂತಾದ ದ್ವಂದ್ವಗಳನ್ನು ಜಗತ್ತಿನೆಲ್ಲೆಲ್ಲಿಯೂ ಕಾಣುತ್ತೇವೆ. ಆದರೆ ಈ ದಂದ್ವಗಳು ವ್ಯಕ್ತಿನಿಷ್ಠವಾದುದು - ಜಗತ್ತು ಒಳಿತೂ ಅಲ್ಲ, ಕೆಡಕೂ ಅಲ್ಲ. ಗಾಳಿಯು ಮಂದವಾಗಿ ಬೀಸಿದರೆ ಸುಖ, ಬಿರುಗಾಳಿಯಾದರೆ ದುಃಖ. ಮನುಷ್ಯನು ಸಣ್ಣ ಪ್ರಾಣಿಗಳಿಗೆ ದೈತ್ಯನಾಗಿ ಕಾಣುತ್ತಾನೆ, ನಮಗೆ ಮನ್ಮಥನಾಗಿ ಕಾಣಿಸಬಹುದು. ಭೂಕಂಪವು ನಿರ್ಜನ ಪ್ರದೇಶದಲ್ಲಾದರೆ ಅದೊಂದು ಅನಾಹುತವೇ ಅಲ್ಲ, ಅದೊಂದು ಸುದ್ದಿಯೇ ಆಗುವುದಿಲ್ಲ. ಅದೇ ಜನನಿಬಿಡ ಪ್ರದೇಶದಲ್ಲಾದರೆ ಅದೊಂದು ದೊಡ್ಡ ಅನಾಹುತವಾಗುತ್ತದೆ, ಪ್ರಕೃತಿವಿಕೋಪವಾಗುತ್ತದೆ.

ಸೃಷ್ಟಿ ಮತ್ತು ನಾಶ ಬೇರೆಬೇರೆಯಲ್ಲ, ಇದೊಂದು ಅವಸ್ಥಾಂತರ ಅಷ್ಟೇ. ಪ್ರತಿಕ್ಷಣವೂ ಜನನ-ಮರಣ ನಡೆಯುತ್ತಿದೆ. ಪ್ರತಿಕ್ಷಣವೂ ಹಳೆಯ ಜೀವಾಣುಗಳು ನಾಶವಾಗಿ ಹೊಸ ಜೀವಾಣುಗಳು ಹುಟ್ಟುತ್ತವೆ. ಇದೇ ದೈಹಿಕ ಬೆಳವಣಿಗೆ. ಹಳೆಯ ಸಂಸ್ಕಾರಗಳನ್ನು ನಾಶ ಮಾಡದೆ ನಾವು ಉತ್ತಮರಾಗಲಾರೆವು. ಹಳೆಯ ಪದ್ಧತಿ ಸಂಪ್ರದಾಯಗಳನ್ನು ನಾಶಮಾಡದೆ ಸಮಾಜ ಮುಂದುವರಿಯ ಲಾಗದು. ರುದ್ರನ ಋಣ ತೀರಿಸದೆ ವಿಷ್ಣು ವಿನ ನಿಯಮವನ್ನು ಉಳಿಸಿಕೊಳ್ಳಲಾಗದು ಎಂದು ಶ್ರೀಅರವಿಂದರು ಹೇಳುತ್ತಾರೆ. ನಾಶವೇ ಪ್ರಗತಿಯ ಮೊದಲ ನಿಯಮ ಎಂದು ಅವರು ಸಾರುತ್ತಾರೆ. ನಮ್ಮ ದೇಹದೊಳಗೆ ನಿರಂತರ ಯುದ್ಧ ನಡೆಯುತ್ತಿರುವುದರಿಂದಲೇ ನಾವು ಬದುಕಿರುವುದು. ಯುದ್ಧವೇ ಎಲ್ಲದರ ತಂದೆ, ಎಲ್ಲದರ ರಾಜ ಎಂದು ಗ್ರೀಕ್ ತತ್ತ್ವಜ್ಞಾನಿ ಹಿರಾಕ್ಲಿಟಸ್ ಹೇಳುತ್ತಾನೆ. ಹಾಗಾದರೆ ಯುದ್ಧವನ್ನು ನಾವು ಸಮರ್ಥಿಸಬೇಕೇ? ಆವುಗಳನ್ನು ಅನುಮೋದಿಸಬೇಕೇ? ಇಲ್ಲ, ಅವುಗಳ ವಿರುದ್ಧ ಹೋರಾಡಬೇಕು.

ಪರಸ್ಪರ ವಿರುದ್ಧಾಂಶಗಳು ಸೇರಿಯೇ ಈ ವಿಶ್ವ ಉಂಟಾಗಿರು ವುದು, ಇದಿಲ್ಲದಿದ್ದರೆ ವಿಶ್ವವೇ ಇರುವುದಿಲ್ಲ. ವಿರೋಧಗಳ ಹೋರಾಟದಿಂದ ವಿರೋಧಗಳನ್ನು ಮೀರಿ ಹೋಗಬೇಕು. ಧರ್ಮ ಮತ್ತು ಅಧರ್ಮಗಳ ಯುದ್ಧದಲ್ಲಿ ಕೊನೆಗೆ ಧರ್ಮಕ್ಕೆ ಜಯ ಎಂದು ಸಾಮಾನ್ಯವಾಗಿ ಹೇಳುತ್ತೇವೆ. ನಿಜಾಂಶವೇನೆಂದರೆ ಒಮ್ಮೆ ಅದಕ್ಕೆ ಜಯ, ಒಮ್ಮೆ ಇದಕ್ಕೆ ಜಯ - ಇದೇ ಜಗತ್ತು. ನಾವು ಇವೆರಡನ್ನು ಮೀರಿಹೋಗಬೇಕು. ಶ್ರೀಅರವಿಂದರು ಹೇಳುತ್ತಾರೆ: ಜಗತ್ತಿನಲ್ಲಿ ಕಾಣುವ ವೈರುಧ್ಯಗಳು ಭಗವಂತನಿಗೇ ಸೇರಿದವು. ಅವುಗಳನ್ನು ಸ್ವೀಕರಿಸಿ, ಅವುಗಳ ಮೂಲಕವೇ ನಾವು ಮುಂದುವರಿದು ದಿವ್ಯ ಸಾಮರಸ್ಯವನ್ನು, ಪರಮ ಸಮತ್ವವನ್ನು ತಲುಪಬೇಕು. ಇದೇ ಭಗವಂತನ ಅತೀತ, ಅನಂತ, ನೆನೆಸಿಕೊಂಡರೇ ಮೈ ನವಿರೇಳುವ ಪರಮಾನಂದದ ಸ್ಥಿತಿ.

ಒಳಿತು-ಕೆಡುಕು, ದೇವರು-ಸೈತಾನ, ದೇವ-ಅಸುರ - ಇವೆಲ್ಲವೂ ಭಗವತ್ ಶಕ್ತಿಯ ವಿವಿಧ ಅಭಿವ್ಯಕ್ತಿಗಳು. ಸ್ವಾಮಿ ವಿವೇಕಾನಂದರು ಹೇಳುವಂತೆ, ಇರುವುದು ಒಂದೇ ಶಕ್ತಿ - ಇದೇ ಒಳಿತು ಕೆಡಕುಗಳಾಗಿ ಅಭಿವ್ಯಕ್ತವಾಗುತ್ತಿರುವುದು. ದೇವರು ಮತ್ತು ಸೈತಾನರು ವಿರುದ್ಧ ದಿಕ್ಕಿನಲ್ಲಿ ಹರಿಯುತ್ತಿರುವ ಒಂದೇ ನದಿ. ಅವರೇ ಇನ್ನೊಂದು ಕಡೆ ಹೇಳುತ್ತಾರೆ: ನಾನೆ ಕ್ರಿಸ್ತ, ನಾನೆ ಜುಡಾಸ್ ಎಂದು. (ಜುಡಾಸ್ ಎಂಬುವವನು ಕ್ರಿಸ್ತನ ಶಿಷ್ಯರಲ್ಲಿ ಒಬ್ಬ, ಕ್ರಿಸ್ತನಿಗೇ ಮೋಸಮಾಡಿ ಅವನನ್ನು ಸೆರೆ ಹಿಡಿಯುವುದಕ್ಕೆ ಸಹಾಯ ಮಾಡಿದ ಮಹಾಪಾಪಿ). ಅವರ ಈ ಕೆಳಗಿನ ಮಾತು ಅತ್ಯಂತ ರೋಮಾಂಚಕಾರಿಯಾಗಿದೆ: ಬೀದಿಯಲ್ಲಿರುವ ಮಹಿಳೆ, ಜೈಲಿನಲ್ಲಿರುವ ಕಳ್ಳ-ಇವರೆಲ್ಲ ನೀವು ಒಳ್ಳೆಯವರಾಗಿರಲೆಂದು

ಬಲಿಪಶುಗಳಾಗಿರುವ ಕ್ರಿಸ್ತರು. ಇದೇ ಸಮತೋಲನದ ನಿಯಮ. ಎಲ್ಲ ಕಳ್ಳರೂ ಕೊಲೆಗಡುಕರೂ, ಎಲ್ಲ ಅನ್ಯಾಯವಂತರೂ ದುರ್ಬಲರೂ ದುರಾಚಾರಿಗಳೂ ಸೈತಾನರೂ ಎಲ್ಲರೂ ನನ್ನ ಕ್ರಿಸ್ತರು.

ಹತ್ತನೆಯ ಅಧ್ಯಾಯದಲ್ಲಿ ಮುಖ್ಯವಾಗಿ ವಿಶೇಷ ಶಕ್ತಿಯ ಆವಿರ್ಭಾವದಲ್ಲಿ ಭಗವಂತನನ್ನು ಕಾಣಬೇಕೆಂದು ಹೇಳಿದ್ದಾಯಿತು. ಹನ್ನೊಂದನೆಯ ಅಧ್ಯಾಯದಲ್ಲಿ ಇಡೀ ವಿಶ್ವವನ್ನೇ ಭಗವತ್ ಸ್ವರೂಪವಾಗಿ ಕಾಣಬೇಕೆಂಬ ಅಭಿಪ್ರಾಯ ವ್ಯಕ್ತವಾಗಿದೆ. ನಾವು ಜಗತ್ತನ್ನು ಅದು ಇರುವಂತೆಯೇ ಸ್ವೀಕರಿಸಬೇಕು. ಕೆಡುಕನ್ನು ಕಳೆದು ಒಳಿತನ್ನು ಸ್ವೀಕರಿಸಿದರೆ ಆಗದು, ರೌದ್ರವನ್ನು ಕಳೆದು ಸೌಮ್ಯವನ್ನು ಸ್ವೀಕರಿಸಿದರೆ ಆಗದು, ಕಷ್ಟವನ್ನು ಕಳೆದು ಸುಖವನ್ನು ಮಾತ್ರ ಸ್ವೀಕರಿಸಿದರೆ ಆಗದು. ಶ್ರೀ ರಾಮಕೃಷ್ಣರು ತಮಗಾದ ಒಂದು ದಿವ್ಯ ದರ್ಶನವನ್ನು ವರಿಸುತ್ತಾರೆ: ಒಬ್ಬ ಸುಂದರ ಮಹಿಳೆ ಒಂದು ಮುದ್ದಾದ ಮಗುವಿಗೆ ಜನ್ಮ ನೀಡುತ್ತಾಳೆ. ಆ ಮಗುವನ್ನು ತೊಡೆ ಮೇಲಿರಿಸಿ ಹಾಲುಣಿಸಿ, ಮುದ್ದಿಸಿ ಆನಂದಪಡುತ್ತಾಳೆ. ಮರುಕ್ಷಣದಲ್ಲೇ ವಿಕಾರರೂಪವನ್ನು ಪಡೆಯುತ್ತಾಳೆ, ವಿಕೃತ ಅಟ್ಟಹಾಸವನ್ನು ಮಾಡುತ್ತಾಳೆ. ತಾನೇ ಹೆತ್ತ ಮಗುವನ್ನು ಕಚ ಕಚ ತಿಂದು ಚಪ್ಪರಿಸುತ್ತಾಳೆ. ಇದೇ ಜಗತ್ತು. ಸೂರ್ಯನಿಂದಲೇ ಭೂಮಿ ಹುಟ್ಟುತ್ತದೆ ಮತ್ತು ಸೂರ್ಯನೇ ಈ ಭೂಮಿಯನ್ನು ಪೋಷಿಸುತ್ತಿರುವುದು. ಮುಂದೆ ಈ ಸೂರ್ಯನೇ ಈ ಭೂಮಿಯನ್ನು ನುಂಗಿ ಹಾಕುತ್ತಾನೆ. ಒಂದು ಧೂಮಕೇತುವು ಬಂದು ಭೂಮಿಗೆ ಹೊಡೆದರೆ ಸಾಕು, ಇದು ಅಲ್ಲೋಲ ಕಲ್ಲೋಲವಾಗುತ್ತದೆ, ಎಲ್ಲ ಜೀವ ಜಂತುಗಳೂ ನಾಶವಾಗಬಹುದು. ಭಗವಂತನಿಗೆ ಗ್ರಹನಕ್ಷತ್ರಗಳೆಲ್ಲ ಚೆಂಡುಗಳಿದ್ದಂತೆ, ಅವನು ಚೆಂಡಾಟ ಆಡುತ್ತಿರುವನು. ಅವನಿಗೆ ಚೆಂಡಾಟ, ನಮಗೆ ಗೋಳಾಟ ಎಂದು ನಮಗನಿಸಬಹುದು. ನಾವು ನಮ್ಮ ದೃಷ್ಟಿಯಿಂದ, ಸೀಮಿತ ದೃಷ್ಟಿಯಿಂದ ಮಾತ್ರ ನೋಡುತ್ತೇವೆ. ಆದರೆ ಪೂರ್ಣದೃಷ್ಟಿಯಿಂದ ನೋಡಿದರೆ ಎಲ್ಲವೂ ಅರ್ಥಪೂರ್ಣವಾಗುತ್ತದೆ. ಅನೇಕ ಕೇಂದ್ರಗಳಿರುವ ಒಂದು ದೊಡ್ಡ ಸಂಸ್ಥೆ ಇದೆ ಎಂದಿಟ್ಟುಕೊಳ್ಳೋಣ. ಶಾಖಾಕೇಂದ್ರದವರಿಗೆ ತಮ್ಮ ಕೇಂದ್ರದ ಸಮಸ್ಯೆಗಳೇ ಬಹಳ ಪ್ರಧಾನವಾಗಿ ಕಂಡುಬರುತ್ತದೆ. ಆದರೆ ಪ್ರಧಾನ ಕೇಂದ್ರದವರು ಒಟ್ಟು ಸಂಸ್ಥೆಯ ದೃಷ್ಟಿಯಿಂದ ನೋಡುತ್ತಾರೆ, ಶಾಖಾಕೇಂದ್ರದ ಸಮಸ್ಯೆಗಳು ಅವರಿಗೆ ಗೌಣ. ಆದರೆ ಶಾಖಾಕೇಂದ್ರದವರು ಪ್ರಧಾನಕೇಂದ್ರದವರು ನಮಗೆ ಗಮನವನ್ನೇ ಕೊಡುತ್ತಿಲ್ಲ ಎಂದು ದೂರಬಹುದು. ನಾವು ವೈಯಕ್ತಿಕ, ಸಂಕುಚಿತ ದೃಷ್ಟಿಯಿಂದ ನೋಡುವುದರಿಂದಲೇ ಅನೇಕ ವಿಷಯಗಳು ನಮ್ಮ ಮೇಲೆ ಪರಿಣಾಮವನ್ನು ಉಂಟುಮಾಡುತ್ತವೆ. ನಮ್ಮ ದೃಷ್ಟಿ ವಿಶಾಲವಾಗಬೇಕು, ಭೂಮವಾಗಬೇಕು. ಆದ್ದರಿಂದಲೇ ಉಪನಿಷತ್ತು ಹೇಳುತ್ತದೆ: **ಭೂಮಾದ್ವೈ ಸುಖಂ ಭವತಿ ನಾಲ್ಪೇ ಸುಖಮಸ್ತಿ** – ಭೂಮದಲ್ಲಿ ಮಾತ್ರ ಸುಖ, ಅಲ್ಪದಲ್ಲಿ ಸುಖವಿಲ್ಲ. ಭೂಮದೃಷ್ಟಿಯನ್ನು ಬೆಳೆಸಿಕೊಳ್ಳಬೇಕೆಂಬುದು ವಿಶ್ವರೂಪದರ್ಶನದ ಉದ್ದೇಶ. ಆಗ ವಿಶ್ವವು ಒಂದು ಕ್ರೀಡೆಯಾಗಿ ಕಂಡುಬರುತ್ತದೆ. ಸ್ವಾಮಿ ವಿವೇಕಾನಂದರು ಸುಂದರವಾಗಿ ವಿವರಿಸುತ್ತಾರೆ: ದೇವರು ಪರಿಪೂರ್ಣ, ಅವನಿಗೆ ಯಾವ ಕೊರತೆಯೂ ಇಲ್ಲ. ಯಾವುದೋ ಒಂದು ಉದ್ದೇಶದಿಂದ ಅವನು ಸೃಷ್ಟಿಸುತ್ತಿರುವನು ಎಂಬ ಕಥೆ, ಕಥೆಯ ದೃಷ್ಟಿಯಿಂದ ಚೆನ್ನಾಗಿರಬಹುದೇ ಹೊರತು ಅನ್ಯಥಾ ಅಲ್ಲ. ಇದೆಲ್ಲ ನಿಜವಾಗಿ ಆಟ, ಸೃಷ್ಟಿ ಎಂಬುದೊಂದು ಒಂದು ದೊಡ್ಡ ತಮಾಷೆಯಾಗಿರಬೇಕು. ನೀವು ದರಿದ್ರರಾದರೆ ಅದನ್ನು ಒಂದು ತಮಾಷೆಯಂತೆ ನೋಡಿ, ಶ್ರೀಮಂತ ರಾದರೆ ಶ್ರೀಮಂತತನವನ್ನು ಒಂದು ತಮಾಷೆಯಂತೆ ಭಾವಿಸಿ. ಅಪಾಯ ಬಂದರೆ ಅದೂ ಒಂದು ದೊಡ್ಡ ತಮಾಷೆಯೇ, ಸಂತೋಷ ಬಂದರೆ ಅದೂ ಸ್ವಲ್ಪ ದೊಡ್ಡ ತಮಾಷೆಯೇ. ಪ್ರಪಂಚ ಒಂದು ಕ್ರೀಡಾಭೂಮಿ. ನಾವೆಲ್ಲ ದೊಡ್ಡ ತಮಾಷೆಯಲ್ಲಿ ನಿರತರಾಗಿರುವೆವು, ಆಟದಲ್ಲಿ ನಿರತರಾಗಿರುವೆವು. *(ಕೃತಿಶ್ರೇಣಿ, ೧.೨೪೪)*

ಜಗತ್ತನ್ನು ಅದರ ವೈರುಧ್ಯಗಳೊಂದಿಗೆ ಸಂಪೂರ್ಣವಾಗಿ ಸ್ವೀಕರಿಸುವಂತೆ, ನಮ್ಮ ವ್ಯಕ್ತಿತ್ವವನ್ನೂ ಸಂಪೂರ್ಣವಾಗಿ ಸ್ವೀಕರಿಸಬೇಕು. ನಮ್ಮಲ್ಲೂ ಅನೇಕ ವೈರುಧ್ಯಗಳಿವೆ. ನಾನು ಅಸಹ್ಯಪಡುವಂತಹ, ದಿಗಿಲನ್ನುಂಟುಮಾಡುವಂತಹ, ನಮ್ಮ ಆತ್ಮ-ಗೌರವವನ್ನು ಕುಂಠಿಸುವಂತಹ ಅನೇಕ ಭಾವವಿಕಾರಗಳು ನಮ್ಮಲ್ಲಿವೆ. ನಾವು ಅವನ್ನು ಮರೆಮಾಚಲು ಪ್ರಯತ್ನಿಸುತ್ತೇವೆ, ಅವುಗಳನ್ನು ನಾವು ನೋಡುವುದಕ್ಕೇ ಇಷ್ಟಪಡುವುದಿಲ್ಲ. ಇದರಿಂದ ಸಮಸ್ಯೆ ಇನ್ನೂ ಉಲ್ಬಣವಾಗುತ್ತದೆ, ವ್ಯಕ್ತಿತ್ವದಲ್ಲಿ ಒಡಕು ಉಂಟಾಗುತ್ತದೆ. ನಾವು ವ್ಯಕ್ತಿತ್ವವನ್ನು ಸಮಗ್ರವಾಗಿ ಸ್ವೀಕರಿಸಬೇಕು. ಆಗ ಎಲ್ಲ ದ್ವಂದ್ವಗಳು ಅರ್ಥಪೂರ್ಣವಾಗುತ್ತವೆ, ತಮ್ಮ ವೈರುಧ್ಯವನ್ನು ಕಳೆದುಕೊಳ್ಳುತ್ತವೆ. ನಕಾರಾತ್ಮಕವೂ ಸಕಾರಾತ್ಮಕವಾಗುತ್ತದೆ. ಒಂದು ವರ್ಣಚಿತ್ರದಲ್ಲಿ ಹೊರವಲಯದ ಅನೇಕ ಗೆರೆಗಳು, ವರ್ಣವೈವಿಧ್ಯಗಳು ಮೊದಲನೋಟಕ್ಕೆ ನಮಗೆ ಅರ್ಥಹೀನವಾಗಿ ಕಾಣಬಹುದು. ಆದರೆ ವರ್ಣಚಿತ್ರದ ಒಟ್ಟು ಅರ್ಥ ನಮಗೆ ಗೋಚರಿಸಿದಾಗ ಎಲ್ಲವೂ ಅರ್ಥಪೂರ್ಣವಾಗುತ್ತವೆ. ಹೀಗೆಯೇ ಎಲ್ಲವನ್ನೂ ಅರ್ಥಪೂರ್ಣವಾಗಿ ಸ್ವೀಕರಿಸಿದಾಗ ಇಡೀ ವ್ಯಕ್ತಿತ್ವವೂ ಅರ್ಥಪೂರ್ಣವಾಗುತ್ತದೆ. ಆಗ ವ್ಯಕ್ತಿಗೆ ತಾನಿರುವ ಸಂಸ್ಥೆಯೂ ಅರ್ಥಪೂರ್ಣವಾಗುತ್ತದೆ, ಸಮಾಜವೂ ಅರ್ಥಪೂರ್ಣವಾಗುತ್ತದೆ, ಅನಂತರ ಇಡೀ ಜಗತ್ತು ಅರ್ಥಪೂರ್ಣವಾಗುತ್ತದೆ. ತನ್ನ ವ್ಯಕ್ತಿತ್ವವೇ ಗೊಂದಲಮಯವಾಗಿರುವಾಗ ಎಲ್ಲವೂ ಗೊಂದಲಮಯವಾಗಿಯೇ ಕಾಣುತ್ತದೆ. ವ್ಯಷ್ಟಿಯು ಸಮಷ್ಟಿಯಲ್ಲಿ ತನ್ನ ಅರ್ಥಪೂರ್ಣವಾದ ಅಸ್ತಿತ್ವವನ್ನು ಕಂಡುಕೊಳ್ಳುವುದೇ ಧರ್ಮ.

ನಾವು ಭಗವಂತನ ಸೌಮ್ಯರೂಪವನ್ನು ಇಷ್ಟಪಡುತ್ತೇವೆ, ಅದನ್ನೇ ಪೂಜಿಸುತ್ತೇವೆ ಕೂಡ. ಅಂದರೆ ಪ್ರಪಂಚದ ಸೌಮ್ಯಭಾಗವನ್ನು ಮಾತ್ರ ಸ್ವೀಕರಿಸಿ ರೌದ್ರಭಾಗದ ಕಡೆ ಕಣ್ಮುಚ್ಚಲು ಇಷ್ಟಪಡುತ್ತೇವೆ ಎಂದರ್ಥ. ನಾವು ಎರಡನ್ನೂ ಸ್ವೀಕರಿಸಬೇಕೆಂದಾದರೆ ರೌದ್ರ, ಬೀಭತ್ಸ ರೂಪವನ್ನೂ ನಾವು ಪೂಜಿಸಬೇಕು. ಮುಂದೆ ಎರಡನ್ನೂ ಮೀರಿಹೋಗಿ ನಿರಪೇಕ್ಷ ಸತ್ಯದಲ್ಲಿ ನೆಲೆಗೊಳ್ಳಬೇಕು. ಹಿಂದೆ ಭಗವಂತನ ರುದ್ರಭಯಂಕರ ರಾಕ್ಷಸೀ ರೂಪವನ್ನು ಪೂಜಿಸುವ ಸಂಪ್ರದಾಯವಿತ್ತು. ಅಂತಹ ದೇವತೆಗಳಿಗೆ ನರಬಲಿ ಪಶುಬಲಿ ನೀಡಲಾಗುತ್ತಿತ್ತು. ಅಂತಹ

ಸಂಪ್ರದಾಯಗಳನ್ನು ಅತ್ಯಂತ ಅನಾಗರಿಕ ಎಂದು ಆಧುನಿಕ ವಿಚಾರವಾದಿಗಳು ಕಟುವಾಗಿ ಟೀಕಿಸುತ್ತಾರೆ. ಆದರೆ ಇಂತಹ ಸಂಪ್ರದಾಯಗಳು ಬಹಳವಾಗಿ ಕಡಮೆಯಾಗುತ್ತಿದ್ದರೂ ಅವು ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಜನರು ಭಯಂಕರವಾದುದನ್ನು ಪೂಜಿಸದಿರಬಹುದು, ಆದರೆ ಭಯಂಕರವಾದುದನ್ನು ನೋಡಲು ಇಷ್ಟಪಡುತ್ತಾರೆ. ಬೀಭತ್ಸ ಸಿನಿಮಾ (horror films) ನೋಡಲು ಜನ ಮುನ್ನುಗ್ಗುತ್ತಾರೆ. ನರಬಲಿಯನ್ನು ಅಮಾನವೀಯ ಎಂದು ನಿಂದಿಸುತ್ತಾರೆ, ಜನರನ್ನು ನಿರ್ದಯವಾಗಿ ಸಾಯಿಸುತ್ತಾರೆ. ಪಶುಬಲಿಯನ್ನು ಬರ್ಬರಕೃತ್ಯವೆಂದು ಬಡಬಡಿಸುತ್ತಾರೆ, ಅನೇಕ ಪ್ರಾಣಿಗಳನ್ನು ಕೊಂದು ತಿನ್ನುತ್ತಾರೆ. ದೇವರಿಗೆ ಅರ್ಪಿಸಿದರೆ ಅದು ಅನಾಗರಿಕ, ನಾವೇ ತಿಂದರೆ ಅದು ನಾಗರಿಕ! ಎಂಥ ವಿರೋಧಾಭಾಸ! ಮನುಷ್ಯನಲ್ಲಿ ರೌದ್ರ ಮತ್ತು ಸೌಮ್ಯ ಸ್ವಭಾವಗಳೆರಡೂ ಇವೆ ಹಾಗೂ ಎರಡನ್ನೂ ಅವನು ಪೂಜಿಸುವುದು ಸ್ವಾಭಾವಿಕ. ಒಂದನ್ನು ತಪ್ಪು ಎಂದು ನಿಲ್ಲಿಸಿದರೆ ಅದು ಬೇರೊಂದು ರೂಪದಲ್ಲಿ ವ್ಯಕ್ತವಾಗುತ್ತದೆ. ಪ್ರಸಿದ್ಧ ಮನಶ್ಶಾಸ್ತ್ರಜ್ಞರಾದ ಕಾರ್ಲ್ ಯೂಂಗ್ ಹೇಳುತ್ತಾರೆ: ಆಧುನಿಕ ಮಾನವನಿಗೆ ವಾಸ್ತವತೆಯು ಕಾಣುತ್ತಿಲ್ಲ. ಅವನು ಎಷ್ಟೇ ವೈಚಾರಿಕನಾಗಿದ್ದರೂ ದಕ್ಷನಾಗಿದ್ದರೂ ತನ್ನ ಹಿಡಿತಕ್ಕೆ ಮೀರಿದ 'ಶಕ್ತಿಗಳಿಂದ' ಅವನು ಅಭಿಭೂತನಾಗಿರುವನು. ಅವನ ದೇವತೆಗಳು, ರಾಕ್ಷಸರು ನಿಜವಾಗಿಯೂ ಕಣ್ಮರೆಯಾಗಿಲ್ಲ. ಅವು ಹೊಸ ಹೆಸರನ್ನು ಪಡೆದಿವೆ ಅಷ್ಟೇ. ಅವು ಪ್ರಕ್ಷುಬ್ಧತೆ, ಅನಿರ್ದಿಷ್ಟ ಭಯ, ಮಾನಸಿಕ ಗೊಂದಲ, ಕೊನೆಯಿಲ್ಲದ ಮಾತ್ರೆಭಕ್ಷಣ, ಮದ್ಯಪಾನ, ಅಸಂಖ್ಯ ಮನೋರೋಗಗಳು– ಇವೇ ಮುಂತಾದ ರೂಪದಲ್ಲಿ ಮಾನವನನ್ನು ಕುಣಿಸುತ್ತಿವೆ.

ಇದೊಂದು ವಿಚಿತ್ರ ಪ್ರಪಂಚ. ಯಾವುದು ನಾಗರಿಕ, ಯಾವುದು ಅನಾಗರಿಕ ಒಂದೂ ಅರ್ಥವಾಗುವುದಿಲ್ಲ. ಇದು ವೈರುಧ್ಯಗಳ ಗೊಂದಲ. ಇದೇ ಮಾಯೆ, ಇದೇ ವಿಶ್ವರೂಪ. ಶ್ರೀವಿದ್ಯಾರಣ್ಯರು ಇದನ್ನು ಸುಂದರವಾದ ಮಾತುಗಳಲ್ಲಿ ಹೇಳುತ್ತಾರೆ:

ನ ಜಾನಾಮಿ ಕಿಮಪ್ಯೇತದಿತ್ಯಂತೇ ಶರಣಂ ತವ ।
ಅತ ಏವ ಮಹಾಂತೋಽಸ್ಯ ಪ್ರವದಂತೀಂದ್ರಜಾಲತಾಮ್ ॥

ಕೊನೆಗೆ 'ನಾನು ಇದನ್ನು ಸ್ವಲ್ಪವೂ ಅರಿಯೆನು, ನಿನಗೆ ಶರಣು' ಎಂದು ಹೇಳಬೇಕಾಗುತ್ತದೆ. ಆದುದರಿಂದಲೇ ದೊಡ್ಡ ಮುನಿಗಳು ಈ ಜಗತ್ತು ಇಂದ್ರಜಾಲವೆಂದು ಹೇಳುತ್ತಾರೆ. *(ಪಂಚದಶೀ,* ಚಿತ್ರದೀಪವಿವೇಕ, *೧೪೬).*

ಆದ್ದರಿಂದಲೇ ಶ್ರೀಕೃಷ್ಣನು ಕೊನೆಯಲ್ಲಿ ಹೇಳುತ್ತಾನೆ:

ಮತ್ಕರ್ಮಕೃತ್ ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ ।
ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ॥ *(೧೧.೫೫)*

ಯಾರು ಎಲ್ಲ ಕರ್ಮಗಳನ್ನೂ ನನಗಾಗಿಯೇ ಮಾಡುತ್ತಾರೊ, ನನ್ನಲ್ಲಿಯೇ ನಿಷ್ಠೆಯುಳ್ಳವನೊ, ನನ್ನ ಭಕ್ತನೊ, ಎಲ್ಲ ಸಂಗವನ್ನೂ ತೊರೆದವನೊ ಹಾಗೂ ಯಾರ ವಿಷಯದಲ್ಲಿಯೂ ದ್ವೇಷಭಾವ ವಿಲ್ಲದವನೊ ಅವನು ನನ್ನನ್ನೇ ಪಡೆಯುತ್ತಾನೆ.

ಮತ್ಕರ್ಮಕೃತ್ ಎಂದರೆ ಭಗವಂತನಿಗೆ ಸಂಬಂಧಪಟ್ಟ, ಪೂಜೆ, ದೇವಾಲಯಕ್ಕೆ ಸಂಬಂಧಿಸಿದ ಕೆಲಸ, ಸಂಕೀರ್ತನೆ ಇತ್ಯಾದಿಗಳು ಆಗಬಹುದು. ಆದರೆ ಎಲ್ಲ ಕೆಲಸಗಳನ್ನೂ ಅವನಿಗಾಗಿಯೇ ಮಾಡುವುದು ಮುಖ್ಯ. ಕಾಶಿಗೆ ಹೋಗುವಾಗ ವಿಶ್ರಾಂತಿ ಊಟ ಇತ್ಯಾದಿಗಳೆಲ್ಲವೂ ಕಾಶಿಗಾಗಿಯೇ ಇರುತ್ತವೆ. ಆದರೆ ಮಾರ್ಗಮಧ್ಯದಲ್ಲಿ ಯಾವುದೋ ಊರನ್ನು ನೋಡುತ್ತ ಕಾಶಿಯನ್ನು ಮರೆಯಬಾರದು. ಹಾಗೆಯೇ ಎಲ್ಲ ಕಾರ್ಯಗಳನ್ನೂ ಭಗವಂತನಿಗಾಗಿಯೇ ಮಾಡುತ್ತ, ಕೊನೆಗೆ ಕಾರ್ಯದಲ್ಲಿಯೇ ತತ್ಪರರಾಗಿ ಭಗವಂತನೆಡೆಗೆ ಹೋಗುವುದನ್ನು ಮರೆಯಬಾರದು. ಎಪಿಕ್ಟಟಸ್ ಎಂಬ ಚಿಂತಕರು ಇದನ್ನು ಸುಂದರವಾಗಿ ಹೇಳುತ್ತಾರೆ: ನೀವು ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದರೆ, ಮತ್ತು ಹಡಗು ಒಂದು ಬಂದರಿನಲ್ಲಿ ನಿಂತುಕೊಂಡಿದ್ದರೆ ನೀವು ಸಮುದ್ರದ ದಡಕ್ಕೆ ಹೋಗಬಹುದು, ಹಾಗೆಯೇ ಓಡಾಡಿಕೊಂಡು ಬರಬಹುದು. ಏನಾದರೂ ವಸ್ತುಗಳನ್ನು ಕೈಗೆತ್ತಿಕೊಂಡು ಕುತೂಹಲದಿಂದ ನೋಡಬಹುದು. ಆದರೆ ತುಂಬ ಎಚ್ಚರಿಕೆಯಿಂದಿರಿ, ಒಂದು ಕಿವಿ ಕ್ಯಾಪ್ಟನ್ ಕರೆಯ ಕಡೆಗೇ ಇರಲಿ. ನಿಮ್ಮ ಗಮನ ಹಡಗಿನ ಕಡೆಗೇ ಇರಲಿ. ಚಿಕ್ಕಪುಟ್ಟ ವಿಷಯಗಳಲ್ಲಿ ಮನಸ್ಸು ಸುಲಭವಾಗಿ ಹರಿದುಹಂಚಿಹೋಗುತ್ತದೆ. ಕಾಪ್ಟನ್ ಕರೆ ಕೇಳುತ್ತಿದ್ದಂತೆಯೇ ಎಲ್ಲವನ್ನು ಆಚೆಗೆ ಎಸೆದು ಹಡಗಿನ ಕಡೆ ಓಡಲು ನಾವು ಸಿದ್ಧರಿರಬೇಕು. *(The Art of Living, p. 14)*

ಈ ರೀತಿ ಏಕನಿಷ್ಠೆ ಇರಬೇಕೆಂಬುದನ್ನು **'ಮತ್ಪರಮ'** ಶಬ್ದವು ಸೂಚಿಸುತ್ತದೆ. **'ಮತ್ಪರಮ'**ನಾಗದೆ ಸಂಪೂರ್ಣ **'ಸಂಗವರ್ಜಿತ'**ನಾಗುವುದು ದುಸ್ಸಾಧ್ಯ. ಆದರೆ ಎಲ್ಲ ಸಂಗವನ್ನು ತ್ಯಜಿಸುವುದು ದ್ವೇಷಭಾವನೆಯಿಂದಲ್ಲ, ತಿರಸ್ಕಾರದಿಂದಲ್ಲ – ಭಗವದ್ಭಕ್ತಿಭಾವದಿಂದ. ಭಕ್ತನ ಭಾವಶಕ್ತಿಯೆಲ್ಲವೂ ಭಕ್ತಿಭಾವವಾಗಿ ಪರಿವರ್ತಿತವಾಗಿರುತ್ತದೆ. ಆದ್ದರಿಂದ ವೈರಮನೋಭಾವಕ್ಕೆ ಅವಕಾಶವೇ ಇರುವುದಿಲ್ಲ. ಅತ್ಯಂತ ಅಪಕಾರ ಮಾಡಿದವರ ಮೇಲೂ ಅವನಿಗೆ ವೈರಭಾವವಿರುವುದಿಲ್ಲ. ಶ್ರೀರಾಮಕೃಷ್ಣರು ಒಂದು ಕಥೆಯನ್ನು ಹೇಳುತ್ತಾರೆ: ಒಬ್ಬ ಗುರುವಿಗೆ ಅನೇಕ ಶಿಷ್ಯರಿರುತ್ತಾರೆ. ಒಬ್ಬ ಶಿಷ್ಯನು ಭಿಕ್ಷೆಗೆ ಹೋಗಿದ್ದಾಗ ದುಷ್ಕರ್ಮಿಗಳು ಕೆಲವರು ಅವನ ಮೇಲೆರಗಿ ಅವನಿಗೆ ಸರಿಯಾಗಿ ಥಳಿಸಿದರು. ಅವನು ಪ್ರಜ್ಞೆತಪ್ಪಿ ಬಿದ್ದುಬಿಟ್ಟನು. ಬೇರೆ ಶಿಷ್ಯರು ಬಂದು ಅವನನ್ನು ಆಶ್ರಮಕ್ಕೆ ಎತ್ತಿಕೊಂಡುಹೋಗಿ ಚೆನ್ನಾಗಿ ಉಪಚರಿಸಲು ಅವನಿಗೆ ಸ್ವಲ್ಪ ಪ್ರಜ್ಞೆ ಬರತೊಡಗಿತು. ಈಗ ಒಬ್ಬ ಶಿಷ್ಯನು ಅವನಿಗೆ ಹಾಲು ಕುಡಿಸತೊಡಗಿದನು. ಅವನಿಗೆ ಪೂರ್ಣ ಪ್ರಜ್ಞೆ ಬಂದಿದೆಯೇ ಎಂಬುದನ್ನು ಪರೀಕ್ಷಿಸಲು, ''ನಿನಗೆ ಈಗ ಹಾಲನ್ನು ಕುಡಿಸುತ್ತಿರುವವರು ಯಾರು?'' ಎಂದು ಒಬ್ಬರು ಅವನನ್ನು ಕೇಳಿದರು. ಅವನು ಕಣ್ಣು ತೆರೆದು ಮಂದಹಾಸವನ್ನು ಬೀರುತ್ತ, ''ನನಗೆ ಯಾರು ಹೊಡೆದನೊ ಅವನೇ ಈಗ ಹಾಲು ಕುಡಿಸುತ್ತಿರುವನು.''

ಈ ರೀತಿ ವೈರಭಾವ, ತಿರಸ್ಕಾರಭಾವ ಇಲ್ಲದೆ ಎಲ್ಲವನ್ನೂ ಸ್ವೀಕರಿಸಬೇಕೆಂಬುದು ವಿಶ್ವರೂಪದರ್ಶನದ ಉದ್ದೇಶ. *

ಆಧ್ಯಾತ್ಮಿಕ ಸಂಭಾಷಣೆ

ಸ್ವಾಮಿ ಭೂತೇಶಾನಂದಜಿಯವರೊಂದಿಗೆ

ಕನ್ನಡ ಅವತರಣಿಕೆ : ಸ್ವಾಮಿ ಮಂಗಳಾತ್ಮಾನಂದ

ರಾಮಕೃಷ್ಣ ಮಹಾಸಂಘದ 12ನೇ ಅಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ಭೂತೇಶಾನಂದಜಿ ಮಹಾರಾಜ್ ಅವರು ಸಾಧು, ಬ್ರಹ್ಮಚಾರಿಗಳು ಹಾಗೂ ಭಕ್ತರೊಂದಿಗೆ ನಡೆಸುತ್ತಿದ್ದ ಆಧ್ಯಾತ್ಮಿಕ ಸಂಭಾಷಣೆಗಳ ಸರಣಿಯ ಕೆಲವು ಭಾಗಗಳು 2011ರ 'ವಿವೇಕಪ್ರಭ' ಸಂಚಿಕೆಗಳಲ್ಲಿ ಪ್ರಕಟವಾಗಿತ್ತು. ರಾಮಕೃಷ್ಣ ಮಹಾಸಂಘದ ಬಂಗಾಳಿ ಮಾಸಪತ್ರಿಕೆ 'ಉದ್ಬೋಧನ್' ದಲ್ಲಿ ಪ್ರಕಟವಾಗಿದ್ದ ಈ ಸರಣಿಯ ಉಳಿದ ಭಾಗಗಳನ್ನು ಈಗ ಮುಂದುವರಿಸುತ್ತಿದ್ದೇವೆ. ಇದನ್ನು ಸುಲಲಿತವಾಗಿ ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿರುವ ಲೇಖಕರು ಕೊಯಮತ್ತೂರು ರಾಮಕೃಷ್ಣ ಮಿಷನ್ ವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಶ್ನೆ: ಸ್ವಾಮಿ ವಿವೇಕಾನಂದರ ನೆರೆಹೊರೆಯವರು ಅವರನ್ನು ಅಹಂಕಾರಿ ಎಂದು ನಿಂದಿಸುತ್ತಿದ್ದರು. ಆದರೆ ಅವರ ಜೀವನ ಚರಿತ್ರೆ ಬರೆದವರು ಅದನ್ನು ಆತ್ಮವಿಶ್ವಾಸ ಅಥವಾ Self confidence ಎಂದು ಕರೆದಿದ್ದಾರೆ. Self Confidence ಅಥವಾ Self Assertion ಇದರ ಅರ್ಥ ವ್ಯತ್ಯಾಸವನ್ನು ಹೇಗೆ ತಿಳಿಯಬಹುದು?

ಮಹಾರಾಜ್: ಒಬ್ಬ ವ್ಯಕ್ತಿಯನ್ನು ಬರೀ ಆತನ ಆಚಾರ ಅಥವಾ ಮಾತುಗಳಿಂದ ಅಳೆಯಲು ಸಾಧ್ಯವಿಲ್ಲ. ಸ್ವಾಮೀಜಿ ಒಂದು ವೇಳೆ ಅಹಂಕಾರಿಯಾಗಿರುತ್ತಿದ್ದರೆ ಇತರರನ್ನು ತೀರ ತುಚ್ಛ ದೃಷ್ಟಿಯಿಂದ ನೋಡುತ್ತಿದ್ದರು. ಆದರೆ ಅವರು ಹಾಗೆ ಮಾಡುತ್ತಿರಲಿಲ್ಲ. ಅವರು ಹೇಳುತ್ತಿದ್ದರು, ಎಲ್ಲರೊಳಗೂ ಆ ಬ್ರಹ್ಮವಸ್ತು ಇದೆ ಎಂದು. ಆದುದರಿಂದ ಇಲ್ಲಿ ಅಹಂಕಾರದ ಪ್ರಶ್ನೆಯೇ ಏಳುವುದಿಲ್ಲ. ಈ ವಿಚಾರಗಳನ್ನು ಕೂಡ ನಾವು ಪರಾಂಬರಿಸಿ ನೋಡಬೇಕು. ಸ್ವಾಮೀಜಿಯವರು ತನ್ನ ಗುರುಭಾಯಿಗಳಿಗೆ (ಸಹೋದರ ಸಂನ್ಯಾಸಿಗಳು) ಎಷ್ಟೊಂದು ಗದರಿಸುತ್ತಿದ್ದರು! ಭವಿಷ್ಯತ್ತಿನಲ್ಲಿ ಇಡೀ ಸಂಘದ secretary (ಕಾರ್ಯದರ್ಶಿ)ಯ ಭಾರವನ್ನು ಯಾರ ಮೇಲೆ ಹಾಕಲು ನಿಶ್ಚಯಿಸಿದ್ದರೋ, ಅಂತಹ ಸ್ವಾಮಿ ಶಾರದಾನಂದರಿಗೆ, ''ಬಿಡು ಬಿಡು, ನಿನ್ನ ಚಟಾಕಿನಷ್ಟು ಬುದ್ಧಿಯನ್ನು ಉಪಯೋಗಿಸದೆ, ಹಾಗೆಯೇ ದೊಡ್ಡದು ಮಾಡಿ ಇಡು'' ಎಂದು ಗದರಿಸುತ್ತಿದ್ದರು. ಇನ್ನು ಉಳಿದ ಗುರುಭಾಯಿಗಳಿಗೂ ಹೀಗೆಯೇ ಬಯ್ಯುತ್ತಿದ್ದರು. ಇನ್ನು ಶಿಷ್ಯಂದಿರ ಕಥೆ ಕೇಳಲೇಬೇಡಿ! ಆದರೆ ಅವರ ಪ್ರೀತಿವಿಶ್ವಾಸ ನೋಡಬೇಕಿತ್ತು – ಅವರು ಅಷ್ಟೇ ಪ್ರೀತಿಸುತ್ತಿದ್ದರು. ಆದ್ದರಿಂದ ಈ background ನೋಡಿ ಅವರ ಬಗ್ಗೆ ಮಾತನಾಡಬೇಕು.

ಪ್ರಶ್ನೆ: ಆತ್ಮಶ್ಲಾಘನೆ – ಇದನ್ನು ಹೇಗೆ ಅರಿಯಬಹುದು? ಇದನ್ನು ವರ್ಜಿಸುವ ಉಪಾಯ ಯಾವುದು?

ಮಹಾರಾಜ್: ಇತರರನ್ನು ಅಹಂಕಾರಿ ಎಂದು ಹೇಳುವ ಬದಲು ತನ್ನಲ್ಲಿ ಅಹಂಕಾರ ಉಂಟೋ ಇಲ್ಲವೋ ಎಂಬುದನ್ನು ವಿಚಾರ ಮಾಡಿದರೆ ಆತನಲ್ಲಿ ಅಹಂಕಾರ ನಿಲ್ಲದು; ಓಡಿಹೋಗುತ್ತದೆ. ತನ್ನನ್ನು ತಾನೇ ಪರೀಕ್ಷೆಮಾಡಿ ನೋಡಿದರೆ ಗೊತ್ತಾಗುತ್ತದೆ, ನಿನ್ನ ಎಷ್ಟೋ ವಿಚಾರಗಳು ನಿನಗೆ ತಿಳಿಯದೆ, ಬೇರೆಯವರ ಎದುರು ನೀನೇ ಸಣ್ಣವನಾಗುತ್ತೀ. ಆಗ ಅಲ್ಲಿ ಅಹಂಕಾರವಿರಲು ಅವಕಾಶವೇ ಇಲ್ಲ; ಅಹಂಕಾರ ಅಲ್ಲೆಲ್ಲೂ ಪ್ರವೇಶ ಮಾಡದು.

ಪ್ರಶ್ನೆ: ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಜನರು ಎಷ್ಟೊಂದು ಪೂಜೆ ಪುನಸ್ಕಾರ, ಜಪತಪ ಮಾಡುತ್ತಾರೆ; ಆದರೆ ಅವರಿಗೆ ವಿಶ್ವಾಸವಿರುವುದಿಲ್ಲ – ಈ ಮಾತಿನ ಅರ್ಥವೇನು?

ಮಹಾರಾಜ್: ಇಷ್ಟೆಲ್ಲ ಮಾಡಿದರೂ 'ಪಾಪ, ಪಾಪ' ಎಂದು ಹೇಳುವುದರಿಂದ ವಿಶ್ವಾಸ ಬರುವುದಿಲ್ಲ. ಜಪತಪ ಮಾಡಿಯೂ 'ನಾನು ಪಾಪಿ, ಪಾಪಿ' ಎಂದು ಹೇಳುತ್ತಾರೆ. ಭಗವನ್ನಾಮದಲ್ಲಿ ವಿಶ್ವಾಸವಿದ್ದವರು, ಯಾರೂ ಕೂಡ ತನ್ನನ್ನು ತಾನೇ 'ಪಾಪಿ, ಪಾಪಿ' ಎಂದು ಹಳಿಯುವುದಿಲ್ಲ. 'ನಾಮಜಪದಿಂದ ನನ್ನ ಸಮಸ್ತ ಪಾಪಗಳೂ (ಸಂಕಷ್ಟ) ದೂರವಾಗುತ್ತವೆ' ಎಂಬ ವಿಶ್ವಾಸವನ್ನು ಇಡಬೇಕು. ಆತನ ಹೆಸರಿನಿಂದ ಸಮಸ್ತ ಮಾಲಿನ್ಯವೂ ಹೊರಟು ಹೋಗುತ್ತದೆ.

ನಾಮೇತೇ ಕಾಲ-ಪಾಶ ಕಾಟೇ, ಜಟೇ ತಾ ದಿಯಚೆ ರಟೆ,
ಆಮ್ರಾ ತೋ ಸೇಇ ಜಟೇರ್ ಮುಟೇ, ಹೋಯೆಛಿ ಆರ್ ಹಬ್‌ಕಾರ್।
ನಾಮೇರೆಇ ಭರೊಸಾ ಕೇವಲ್ ಶ್ಯಾಮಾ ಗೋ ತೋಮಾರ್ ।

'ನಿನ್ನ ನಾಮ ಜಪದಿಂದ ಕಾಲಪಾಶವು ತರಿದುಹೋಗುತ್ತದೆ. ನಾವು ಸಂಸಾರ ಎಂಬ ಜಟೆಯ ಮುಷ್ಟಿಯಲ್ಲಿ ಸಿಲುಕಿಕೊಂಡಿದ್ದೇವೆ. ಇದರಿಂದ ಹೊರಬರಲು ಯಾರಿಗೆ ಸಾಧ್ಯ? ಓ ಶ್ಯಾಮಾ, ಮೃತ್ಯುವಿನಿಂದ ಪಾರಾಗಲು ನಿನ್ನ ನಾಮ(ಜಪ)ದಲ್ಲಿ ಭರವಸೆ ಇಟ್ಟಿದ್ದೇವೆ.'

ಒಬ್ಬ ರಾಜನಿಗೆ ಬ್ರಹ್ಮಹತ್ಯೆಯ ಪಾಪ (ದೋಷ) ಬಂದಿತ್ತು. ಅವನು ಒಬ್ಬ ಋಷಿಯ ಬಳಿಗೆ ಬ್ರಹ್ಮಹತ್ಯಾದೋಷದ ಪರಿಹಾರ ಕೇಳಲು ಹೋದ. ಋಷಿ ಮನೆಯಲ್ಲಿರಲಿಲ್ಲ. ಆತನ ಮಗ ಮನೆಯಲ್ಲಿದ್ದ. ರಾಜ ಋಷಿಪುತ್ರನ ಬಳಿ ಪರಿಹಾರೋಪಾಯವನ್ನು ಕೇಳಿದ. ಮೂರು ಸಲ ರಾಮನಾಮವನ್ನು ಜಪಿಸು, ಇದರಿಂದ ಸರ್ವಪಾಪಗಳೂ ನಾಶವಾಗುತ್ತವೆ ಎಂದ ಋಷಿಪುತ್ರ. ಋಷಿ ಮನೆಗೆ ಬಂದ ಮೇಲೆ ಮಗ ಹೇಳಿದ, ''ಒಬ್ಬ ರಾಜ ಬಂದಿದ್ದ, ಆತನಿಗೆ ಬ್ರಹ್ಮಹತ್ಯಾದೋಷ ಬಂದಿತ್ತು, ಅದಕ್ಕೆ ಪ್ರಾಯಶ್ಚಿತ್ತ ಏನೆಂದು ಕೇಳಿದ, ಅದಕ್ಕೆ ನಾನು, ಮೂರು ಸಲ ರಾಮನಾಮ ಜಪಿಸು ಎಂದು ಹೇಳಿದೆ.'' ಅದಕ್ಕೆ ಋಷಿ, ''ಏನು ಹೇಳುತ್ತೀಯಾ? ಒಂದೇ ಒಂದು ಸಲ ರಾಮನಾಮ ಜಪಿಸಿದರೆ, ಕೋಟಿ ಬ್ರಹ್ಮಹತ್ಯಾದೋಷಗಳೂ ಪರಿಹಾರವಾಗುತ್ತವೆ. ಇನ್ನು ಮೂರು ಸಲ ಮಾಡಿದರೆ...?'' ಇದಕ್ಕೆ ಹೆಸರು ವಿಶ್ವಾಸ. ಒಂದೇ ಒಂದು ರಾಮನಾಮ ಜಪದಲ್ಲಿ ಕೋಟಿ ಬ್ರಹ್ಮಹತ್ಯಾ ದೋಷಗಳೂ ಪರಿಹಾರವಾಗುತ್ತವೆ.

ಪ್ರಶ್ನೆ: ಮಹಾರಾಜ್, ನಾವು ನಡುನಡುವೆ 'ಭಗವಾನ್‌ಲಾಭ, ಭಗವಾನ್‌ಲಾಭ' (ಭಗವತ್ಸಾಕ್ಷಾತ್ಕಾರ) ಎಂದು ಕೇಳುವುದು ಅಥವಾ

ಹೇಳುವುದುಂಟು. ಇದರ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿ ವ್ಯಾಖ್ಯಾನ ಮಾಡುತ್ತಾರೆ, ಅರ್ಥೈಸುತ್ತಾರೆ. ಉದಾಹರಣೆಗೆ, ಒಬ್ಬ ಅನಾಹತಧ್ವನಿ ಕೇಳುತ್ತಾನೆ, ಇನ್ನೊಬ್ಬ ದೇವದೇವಿಯರ ಮೂರ್ತಿ ದರ್ಶನ ಮಾಡುತ್ತಾನೆ, ಮಗದೊಬ್ಬ ಜ್ಯೋತಿದರ್ಶನ ಮಾಡುತ್ತಾನೆ ...ಎಂದೆಲ್ಲ ಹೇಳುತ್ತಾರೆ.

ಮಹಾರಾಜ್: ಅನಾಹತಧ್ವನಿಯನ್ನು ಯಾರೂ ಭಗವತ್ ಸಾಕ್ಷಾತ್ಕಾರವೆಂದು ಹೇಳುವುದಿಲ್ಲ.

ಪ್ರಶ್ನೆ: ಭಗವಾನ್‌ಲಾಭ ಅಥವಾ ಭಗವತ್ಸಾಕ್ಷಾತ್ಕಾರವನ್ನು 'ಇದೇ ಭಗವಾನ್‌ಲಾಭ'ವೆಂದು ಹೇಗೆ ತಿಳಿದುಕೊಳ್ಳಲಿ?

ಮಹಾರಾಜ್: ಭಗವಾನ್‌ಲಾಭ ಒಬ್ಬನಿಗೆ ಆಗಿದೆ ಎಂದು ತಿಳಿಯಬೇಕಾದರೆ, ಅದಕ್ಕೆ ಕೆಲವು ಲಕ್ಷಣಗಳಿವೆ. ಭಗವಂತನು ಹೇಗೆ ಶುದ್ಧ, ಪವಿತ್ರ ಮತ್ತು ಸದ್ಗುಣ ಸಮನ್ವಿತನೋ ಹಾಗೆಯೇ ಯಾರು ಆತನನ್ನು ಒಲಿಸಿಕೊಂಡಿದ್ದಾನೋ, ಆತನೂ ಕೂಡ ಪವಿತ್ರ, ಶುದ್ಧ, ಮತ್ತು ಸರ್ವಗುಣ ಸಮನ್ವಿತನಾಗುತ್ತಾನೆ. ಭಗವತ್‌ಸಾಕ್ಷಾತ್ಕಾರವೆಂದರೆ ಇದೇ. ಆತನಲ್ಲಿ ಅಹಂಕಾರವಿರುವುದಿಲ್ಲ, ಅಭಿಮಾನವಿರುವುದಿಲ್ಲ; ಅವನು ನಿರ್ಭಯನಾಗಿರುತ್ತಾನೆ, ಸರ್ವಗುಣ ಸಮನ್ವಿತನಾಗಿರುತ್ತಾನೆ. ಈ ಗುಣಗಳೆಲ್ಲ ಆತನೊಳಗಿನಿಂದ ಸ್ಫುರಿಸುತ್ತಿರುತ್ತವೆ.

ಪ್ರಶ್ನೆ: ನಾವೆಲ್ಲ ನಮ್ಮ ಶಕ್ತ್ಯಾನುಸಾರ ಈ ದಾರಿಯಲ್ಲಿ ಮುಂದುವರಿಯಲು ಪ್ರಯತ್ನ ಮಾಡುತ್ತೇವೆ.. ಆದರೆ ನಿಜವಾಗಿಯೂ ಈ ದಾರಿಯಲ್ಲಿ ಸರಿಯಾಗಿ ಮುಂದುವರಿಯುತ್ತಿದ್ದೇವೆ ಎನ್ನುವುದಕ್ಕೆ ಅಳತೆಗೋಲು ಏನು?

ಮಹಾರಾಜ್: ವಿಶ್ವಾಸವೇ ಅತಿಮುಖ್ಯ. ಗುರು ಮತ್ತು ಶಾಸ್ತ್ರ ವೇದಾಂತವಾಕ್ಯಗಳಲ್ಲಿ ವಿಶ್ವಾಸ – ಇದು ಮೊದಲ ಹಂತ. ಎರಡನೆಯದು ಆಂತರ್ಯದಿಂದ ಪ್ರಯತ್ನ. ಇವುಗಳಿದ್ದರೆ ಮುಂದುವರಿಯುವ ಸಂಭವ ಇರುತ್ತದೆ. ಸರಿ, ಇವು ನಿನ್ನೊಳಗೆ ಇದೆ ಎಂದು ಹೇಗೆ ತಿಳಿಯಬೇಕು? ಇದಕ್ಕೆ ಭಾಗವತದಲ್ಲಿ ಒಂದು ಶ್ಲೋಕವಿದೆ. ಯಾರು ಭಗವಂತನಲ್ಲಿ ಶರಣಾಗತನಾಗಿದ್ದಾನೋ ಆತನಲ್ಲಿ, ಈ ಮೂರು ಗುಣ ಒಟ್ಟಿಗೆ ಬರುತ್ತವೆ: **ಭಕ್ತಿರ್ವಿರಕ್ತಿರ್ಭಗವತ್ ಪ್ರಬೋಧಃ ।** ಭಗವಂತನಲ್ಲಿ ಅನುರಾಗ ವೃದ್ಧಿಸುತ್ತದೆ, ಭಗವಂತ ಬಿಟ್ಟು ಇನ್ನಿತರ ವಸ್ತುಗಳಲ್ಲಿ ವೈರಾಗ್ಯ ಬರುತ್ತದೆ. ಇನ್ನು ಭಗವತ್ ಸ್ವರೂಪದ ಬಗ್ಗೆ ಸಂದೇಶ ದೂರವಾಗುತ್ತದೆ. ವ್ಯಕ್ತಿ ಮುಂದುವರಿದ ಹಾಗೆ ಈ ಮೂರು ಗುಣಗಳೂ ಸಮಭಾವದಲ್ಲಿ ಆತನೊಳಗಿಂದ ಪ್ರಕಾಶಕ್ಕೆ ಬರುತ್ತದೆ. ಭಾಗವತ ಶ್ಲೋಕವೊಂದು ಹೀಗಿದೆ:

ಭಕ್ತಿಃ ಪರೇಶಾನುಭವೋ ವಿರಕ್ತಿರನ್ಯತ್ರ ಚೈಷ ತ್ರಿಕ ಏಕಕಾಲಃ ।
ಪ್ರಪದ್ಯಮಾನಸ್ಯ ಯಥಾಶ್ನತಃ ಸ್ಯುಸ್ತುಷ್ಟಿಃ ಪುಷ್ಟಿಃ ಕ್ಷುದಪಾಯೋಽನುಘಾಸಮ್॥ *(ಭಾಗವತ 11-2-42)*

ದೃಷ್ಟಾಂತ ಹೀಗೆ ಹೇಳಿದೆ : ತೀರ ಹಸಿದವನೊಬ್ಬನಿಗೆ ಎಷ್ಟೊಂದು ಹಸಿವೆಯಾಗಿದೆ ಎಂದರೆ, ಆತನಿಗೆ ನಿಲ್ಲಲು ಕೂಡ ತ್ರಾಣವಿಲ್ಲದಾಗಿದೆ, ಮನಸ್ಸಿನಲ್ಲಿ ಭಾರೀ ಅಶಾಂತಿ ಎದ್ದಿದೆ. ಅಂತಹವನಿಗೆ ಊಟ ಕೊಡಲಾಗುತ್ತದೆ. ಒಂದೊಂದು ಮುಷ್ಟಿ ಅನ್ನ ಜಠರ ಸೇರಿದ ಹಾಗೆ, ಆತನ ದುರ್ಬಲತೆ ಕಡಿಮೆಯಾಗುತ್ತ ಹೋಗುತ್ತದೆ. ಮಾನಸಿಕ ಅಸಂತೋಷ ಕಡಿಮೆಯಾಗುತ್ತದೆ. ಹೀಗೆ ಯಾರು ಭಗವಂತನಲ್ಲಿ ಶರಣಾಗತರಾಗುತ್ತಾರೋ ಅವರಿಗೆ ಈ ಮೂರು ಗುಣಗಳು ಒಟ್ಟೊಟ್ಟಿಗೆ ಬರುತ್ತವೆ – **ಭಕ್ತಿ, ವಿರಕ್ತಿ, ಭಗವತ್ ಪ್ರಬೋಧ.**

ಪ್ರಶ್ನೆ: ಮಹಾರಾಜರೆ, ಒಂದು ಭಜನೆ ಇದೆ– **'ರಾಜರಾಜೇಶ್ವರ ದೇಖಾ ದಾವು । ಕರುಣಾಭಿಖಾರಿ ಆಮಿ ಕರುಣಾನಯನೇ ಚಾವು'** ಅಂತ. ಇದರ ಅರ್ಥವೇನು?

ಮಹಾರಾಜ್: ಅವನು ರಾಜರಾಜೇಶ್ವರನಾಗಿರದಿದ್ದರೆ ಆತನ ಹತ್ತಿರ ಬೇಡುವುದೇನು ಬಂತು? ಅವನು ಒಂದು ವೇಳೆ ಕರುಣಾಮಯ ನಲ್ಲದಿದ್ದರೆ ನನಗೆಲ್ಲಿಂದ ಕರುಣೆತೋರಿಸಬಲ್ಲ? ಹೀಗಾಗಿ ಈ ರೀತಿ ಪ್ರಾರ್ಥನೆ ಮಾಡುತ್ತೇವೆ.

ಪ್ರಶ್ನೆ: ಯಾರು ಭಗವಂತನಲ್ಲಿ ವಿಶ್ವಾಸವಿಡುವುದಿಲ್ಲವೋ, ಯಾರು ಈಶ್ವರನನ್ನು ಒಪ್ಪುವುದಿಲ್ಲವೋ ಅವರಿಗೆ ಇದನ್ನೆಲ್ಲ ಹೇಳಿ ಪ್ರಯೋಜನವಿಲ್ಲ.

ಮಹಾರಾಜ್: ಅಂತಹವರು ಈಶ್ವರನನ್ನು ಒಪ್ಪುವುದೂ ಇಲ್ಲ, ಅಥವಾ ಈ ರೀತಿ ಹೇಳುವುದೂ ಇಲ್ಲ, ಅವರಿಗೇಕೆ ದಯಾಮಯ, ಕರುಣಾಮಯ ಇತ್ಯಾದಿ?

ಪ್ರಶ್ನೆ: ಯಾರು ದೇವರರನ್ನು ನಂಬುವುದಿಲ್ಲವೋ ಅಂತಹವರು, ''ನೀನೇಕೆ ದೇವರನ್ನು ದಯಾಮಯನೆಂದು ಹೇಳುವೆ'' ಎಂದು ಪ್ರಶ್ನಿಸಿದರೆ?

ಮಹಾರಾಜ್: ನಾವು ಆತನ ದಯೆಯ ಮೇಲೆ ನಿರ್ಭರರಾಗಿದ್ದೇವೆ, ಎಂದು ಹೇಳುವುದು. ಆತನನ್ನು ದಯಾಮಯನೆಂದು ಹೇಳುತ್ತೇವೆ, ಆದರೆ ಆತನನ್ನು ಅರಿತು ಹಾಗೆ ಹೇಳುತ್ತಿಲ್ಲ. ಅವನ ಪ್ರಾರ್ಥನೆ ಮಾಡುತ್ತೇನೆ, ಅದು ಅವನ ವಿಶ್ವಾಸ ಗಳಿಸಲಿಕ್ಕಾಗಿ. ವಿಶ್ವಾಸವಿದ್ದರೆ ಇನ್ನು ದಯಾಮಯ ಎಂದು ಕರೆಯಬೇಕು?

ಪ್ರಶ್ನೆ: ನಮ್ಮ ಮನಸ್ಸಿನ ಭಾವ, ನಮ್ಮ ಮನಸ್ಸಿನ ಗುಣಗಳನ್ನೇ ಈಶ್ವರನ ಗುಣವೆಂದು ಆರೋಪಿಸುತ್ತೇವೆ. ಅಂದರೆ ಈಶ್ವರನಿಗೆ ದಯಾಮಯ ಅಥವಾ ಇನ್ನಿತರ ಗುಣಗಳನ್ನು ಆರೋಪಿಸುತ್ತೇವೆ. ಇದರಲ್ಲಿ ವಾಸ್ತವಾಂಶವಿರುವುದಿಲ್ಲ.

ಮಹಾರಾಜ್: ಯಾರು ಈಶ್ವರನನ್ನು ಅರಿತಿದ್ದರೋ ಅವರೇ ಹೇಳಬಲ್ಲರು. ಭಗವಂತನನ್ನು ಅರಿಯದವನು, ಅವನು ಎಂಥವನೆಂದು ಹೇಗೆ ಹೇಳಬಲ್ಲ? ಅವನನ್ನು ದಯಾಮಯ ಎಂದು ಹೇಳುವವರು, ಅವರಿಗೆ ದಯೆ ಬೇಕೆಂದು ಪ್ರಾರ್ಥನೆ ಮಾಡುತ್ತಾರೆ. ಸಿಖ್ಖರು ಶ್ರೀರಾಮಕೃಷ್ಣರಿಗೆ ಹೇಳಿದರು, ಭಗವಂತ ದಯಾಮಯ ಎಂದು. ಪರಮಹಂಸರು ಕೇಳುತ್ತಾರೆ, 'ಅವನೇಕೆ ದಯಾಮಯ?'ಅದಕ್ಕೆ ಸಿಖ್ಖರು, 'ಆತ ನಮಗೆ ಅದು ಕೊಡುತ್ತಾನೆ, ಇದು ಕೊಡುತ್ತಾನೆ' ಎಂದರು. ಅದಕ್ಕೆ ಪರಮಹಂಸರು ಹೇಳಿದರು, ''ತಂದೆ ತನ್ನ ಮಕ್ಕಳನ್ನು ಸಾಕುವುದು, ಅದೇನು ಮಹಾ ದೊಡ್ಡ ಕೆಲಸವೆ?'' *

ಒಂದು ಅಸಾಧಾರಣ ಸಾಹಸಗಾಥೆ

''ಇಚ್ಛಾಶಕ್ತಿ ಎಲ್ಲಕ್ಕಿಂತ ಪ್ರಬಲವಾದುದು. ಅದರ ಎದುರಿಗೆ ಎಲ್ಲವೂ ಮಣಿಯಬೇಕು. ಅದು ಸ್ವಯಂ ಭಗವಂತನಿಂದ ಬರುವುದು'' ಎಂಬ ಸ್ವಾಮಿ ವಿವೇಕಾನಂದರ ಮಾತಿಗೆ ಜೀವಂತ ನಿದರ್ಶನ ಇಲ್ಲಿದೆ – ಪ್ರಪಂಚದ ಅತ್ಯುನ್ನತ ಪರ್ವತ ಶಿಖರವಾದ ಎವರೆಸ್ಟ್ ಶಿಖರವನ್ನು ಏರಿದ ಮೊದಲ ಅಂಗವಿಕಲ ಮಹಿಳೆ ಕುಮಾರಿ ಅರುಣಿಮಾ ಸಿನ್ಹಾ ಅವರ ಅಸಾಧಾರಣ ಯಶೋಗಾಥೆ. ಇತ್ತೀಚೆಗೆ ಅವರು ಬೆಂಗಳೂರು, ಮೈಸೂರು ನಗರಗಳಿಗೆ ಭೇಟಿಯಿತ್ತು ಹಲವು ಸಂಘಸಂಸ್ಥೆಗಳಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಅವರ ಮಾತುಗಳು ಅನೇಕ ಮಂದಿ ಯುವಕ ಯುವತಿಯರ ಅಂತರಂಗದಲ್ಲಿ ಅಸಾಧಾರಣ ಸ್ಫೂರ್ತಿಯನ್ನು ತುಂಬಿದವು. ಅವರ ಮಾತುಗಳಿಂದಲೇ ಸಂಗ್ರಹಿಸಿದ ಅವರ ಸಾಹಸದ ಕಥೆಯನ್ನಿಲ್ಲಿ ಸಂಗ್ರಹಿಸಿ ನೀಡುತ್ತಿದ್ದೇವೆ.

ಉತ್ತರ ಪ್ರದೇಶದ ಲಕ್ನೋ ನಗರಕ್ಕೆ ಸೇರಿದ ಅರುಣಿಮಾ ಸಿನ್ಹಾ ರಾಷ್ಟ್ರಮಟ್ಟದ ಕ್ರೀಡಾಪಟುವಾಗಿದ್ದಳು; ಒಂದು ಪರೀಕ್ಷೆ ಬರೆಯುವ ಸಲುವಾಗಿ ೨೦೧೧ರ ಏಪ್ರಿಲ್ ೧೧ ರಂದು ಲಕ್ನೋದಿಂದ ದೆಹಲಿಗೆ ಪದ್ಮಾವತಿ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದಳು. ಮಧ್ಯರಾತ್ರಿಯಲ್ಲಿ ದರೋಡೆಕೋರರು ಪ್ರಯಾಣಿಕರ ಮೇಲೆ ಬಿದ್ದು, ಬಂದೂಕು ತೋರಿಸಿ ಅವರಲ್ಲಿದ್ದ ಹಣ, ಆಭರಣಗಳನ್ನೆಲ್ಲ ಬಲವಂತವಾಗಿ ದೋಚತೊಡಗಿದರು. ಧೀರ ಪ್ರವೃತ್ತಿಯ ಹುಡುಗಿ ಅರುಣಿಮಾ ಅದಕ್ಕೆ ಬಾಗಲಿಲ್ಲ. ತನ್ನಲ್ಲಿದ್ದ ಚಿನ್ನದ ಸರ, ಪರ್ಸ್ ಇವನ್ನು ಅವರಿಗೊಪ್ಪಿಸದ್ದಕ್ಕಾಗಿ ದರೋಡೆಕೋರರು ಅವಳನ್ನು ವೇಗವಾಗಿ ಓಡುತ್ತಿದ್ದ ರೈಲಿನಿಂದ ಹೊರಕ್ಕೆಸೆದುಬಿಟ್ಟರು! ಎದುರಿನಿಂದ ಬರುತ್ತಿದ್ದ ರೈಲುಗಾಡಿ, ಇನ್ನೊಂದು ಹಳಿಗಳ ಮೇಲೆ ಬಿದ್ದ ಅರುಣಿಮಾಳ ಮೇಲಿಂದ ಹಾದುಹೋಯಿತು. ಅವಳ ಎಡಗಾಲು (ಮೊಣಕಾಲ ಕೆಳಗಿನಿಂದ) ಕತ್ತರಿಸಿಹೋಯಿತು. ನೋವಿನಿಂದ ಅವಳಿಗೆ ಮೈ ಅಲುಗಾಡಿಸಲೂ ಸಾಧ್ಯವಾಗುತ್ತಿರಲಿಲ್ಲ. ಸಹಾಯಕ್ಕಾಗಿ ಎಷ್ಟು ಕೂಗಾಡಿದರೂ, ಅವಳ ಕೂಗು ಯಾರಿಗೂ ಕೇಳಿಸಲಿಲ್ಲ. ಇಡೀ ರಾತ್ರಿ ಅವಳು ರೈಲು ಹಳಿಗಳ ನಡುವೆ ಅಸಹಾಯಕಳಾಗಿ ಬಿದ್ದಿರಬೇಕಾಯಿತು.

ಮರುದಿನ ಬೆಳಿಗ್ಗೆ ಕೆಲವು ಮಂದಿ ಹಳ್ಳಿಯ ಜನರು ಅವಳ ಅವಸ್ಥೆಯನ್ನು ನೋಡಿ, ಅವಳನ್ನು ಸಮೀಪದ ಬರೇಲಿಯಲ್ಲಿನ ಒಂದು

ಸರ್ಕಾರಿ ಆಸ್ಪತ್ರೆಗೆ ಸೇರಿಸಿದರು. ತುರ್ತಾಗಿ ಅವಳಿಗೆ ಅಪರೇಷನ್ ಮಾಡಬೇಕಿತ್ತು. ಅಲ್ಲಿ ಅನಸ್ತೇಶಿಯಾ ನೀಡಲು, ಸಾಕಷ್ಟು ಪ್ರಮಾಣದ ರಕ್ತ ನೀಡಲು ವ್ಯವಸ್ಥೆಯಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಅಪರೇಷನ್ ಮಾಡಲಾಗದು ಎಂದು ವೈದ್ಯರು ಮಾತನಾಡಿಕೊಳ್ಳುತ್ತಿದ್ದರು. ಅಂಥ ವೇದನೆಯ ನಡುವೆಯೂ ಅದನ್ನು ಕೇಳಿಸಿಕೊಂಡ ಅರುಣಿಮಾ, ''ಇಲ್ಲ, ನಾನು ಬದುಕಬೇಕು. ನನಗೆ ಅನಸ್ತೇಶಿಯಾ ಇಲ್ಲದೇ ಅಪರೇಷನ್ ಮಾಡಿ. ಇಡೀ ರಾತ್ರಿ ನಾನು ಅಸಾಧ್ಯ ನೋವು ಅನುಭವಿಸಿದ್ದೇನೆ. ಅದರ ಮುಂದೆ ಇದು ಏನೂ ಅಲ್ಲ'' ಎಂದಳು. ಅವಳ ದೃಢವಾದ ಮಾತುಗಳನ್ನು ಕೇಳಿ ಬೆರಗಾದ ವೈದ್ಯರೊಬ್ಬರು ಸ್ವತಃ ತಮ್ಮ ರಕ್ತವನ್ನೇ ಅವಳಿಗೆ ನೀಡಿ ಅಪರೇಷನ್ ಮಾಡಲು ಮುಂದಾದರು. ಅಪರೇಷನ್ ಮಾಡುವಾಗ ಅವಳು ಇಡೀ ನೋವನ್ನು ಸಹಿಸಿಕೊಂಡಳು.

ಅಷ್ಟರಲ್ಲಿ ಅವಳಿಗೆ ಅಘಘಾತವಾದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದಂತೆ ಅವಳ ಬಂಧುಮಿತ್ರರು, ಕ್ರೀಡಾಕ್ಷೇತ್ರದ ಹಿತೈಷಿಗಳು ಅವಳ ನೆರವಿಗೆ ಬಂದರು. ಮೊದಲು ಲಕ್ನೋದ ಒಂದು ಒಳ್ಳೆಯ ಆಸ್ಪತ್ರೆಯಲ್ಲಿ, ಅನಂತರ ದೆಹಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆಸ್ಪತ್ರೆಯಲ್ಲೂ ಅವಳ ಚಿಕಿತ್ಸೆಗೆ ವ್ಯವಸ್ಥೆಯಾಯಿತು. ನಾಲ್ಕು ತಿಂಗಳ ಚಿಕಿತ್ಸೆಯ ನಂತರ ಅವಳಿಗೆ ಕೃತಕ ಕಾಲನ್ನು ಜೋಡಿಸಬೇಕಾಯಿತು. ಆದರೆ ಅವಳ ಕ್ರೀಡಾ ಜಗತ್ತು ಅಲ್ಲಿಗೇ ನಿಂತುಹೋಯಿತು.

ಅವಳು ಆಸ್ಪತ್ರೆಯಲ್ಲಿ ಮಲಗಿದ್ದಾಗ ಅವಳ ಬಂಧುಗಳು, ಸ್ನೇಹಿತರು ಅವಳ ಕ್ರೀಡಾಚಟುವಟಿಕೆ ಅಲ್ಲಿಗೇ ನಿಂತು ಹೋಯಿತೆಂದೇ ನಂಬಿದ್ದರು. ಅದಕ್ಕಾಗಿ ಅವರು ಅವಳ ಮುಂದೆ ವಿಷಾದ ವ್ಯಕ್ತಪಡಿಸಿದ್ದರು. ಅರುಣಿಮಾಗೆ ದೈಹಿಕ ಯಾತನೆಗಿಂತ ಹೆಚ್ಚಾಗಿ ಕ್ರೀಡೆಗಳಲ್ಲಿ ಭಾಗವಹಿಸಲಾಗದ ದುಃಖವೇ ಹೆಚ್ಚಿನದಾಗಿತ್ತು. ಇದ್ದಕ್ಕಿದ್ದಂತೆ ಅವಳಿಗೊಂದು ಛಲ ಬಂತು, ತಾನು ಏನನ್ನಾದರೂ ಸಾಧಿಸಬೇಕು. 'ಹೌದು, ನನ್ನಂಥ ವಿಕಲಾಂಗರಿಗೂ ಮಹತ್ತರವಾದ ಕಾರ್ಯ ಸಾಧಿಸಬಹುದು ಎಂಬುದನ್ನು ನಾನು ಜಗತ್ತಿಗೆ ತೋರಿಸಿಕೊಡಬೇಕು' ಎಂಬ ಆಲೋಚನೆ ಬಂತು. 'ಇಲ್ಲ, ನಾನೆಂದಿಗೂ ಸೋಲೊಪ್ಪಿಕೊಳ್ಳಲಾರೆ. ನನ್ನ ಸ್ನೇಹಿತರೆಲ್ಲ ಅಂದು ಕೊಂಡದ್ದನ್ನು ನಾನು ಸುಳ್ಳಾಗಿಸುತ್ತೇನೆ' ಎಂದು ಅವಳು ದೃಢವಾಗಿ ನಿರ್ಧರಿಸಿದಳು.

ಚಿಕಿತ್ಸೆ ಮುಗಿಯುತ್ತಿದ್ದಂತೆ ಅರುಣಿಮಾ ಪರ್ವತಾರೋಹಣದ ಬಗ್ಗೆ ಮಾಹಿತಿ ಸಂಗ್ರಹಿಸಿದಳು. ಪರ್ವತಾರೋಹಣ ಎಲ್ಲ ಕ್ರೀಡೆಗಳಲ್ಲಿ ಅತ್ಯಂತ ಕಠಿಣವೂ, ಅಪಾಯಕರವೂ ಅಷ್ಟೇ ಸಾಹಸದಿಂದ

ಎವರೆಸ್ಟ್ ವಿಜಯಿ

ಕೂಡಿದ್ದೂ ಆಗಿದೆ. ತಾನು ಅದನ್ನೇ ಸಾಧಿಸಬೇಕು, ಹೌದು, ಪ್ರಪಂಚದ ಅತ್ಯಂತ ಎತ್ತರದ ಶಿಖರವನ್ನೇ ಏರಿ ಅಸಾಧ್ಯವಾದುದನ್ನು ಸಾಧ್ಯವಾಗಿಸಬೇಕು! ಅರುಣಿಮಾ ನಿಶ್ಚಯಿಸಿಬಿಟ್ಟಳು.

ಎವರೆಸ್ಟ್ ಏರಿದ ಮೊತ್ತಮೊದಲ ಭಾರತೀಯ ಮಹಿಳೆ ಎಂಬ ಖ್ಯಾತಿ ಪಡೆದಿದ್ದ ಬಚೇಂದ್ರಿ ಪಾಲ್, ಪರ್ವತಾರೋಹಣ ಮಾಡುವವರಿಗೆ ತರಬೇತಿ ನೀಡುತ್ತಿದ್ದಳು. ಅವಳನ್ನು ಸಂಪರ್ಕಿಸುವ ಮುನ್ನ ಪ್ರತಿಯೊಬ್ಬರೂ ಅರುಣಿಮಾ ಮಾತನ್ನು ಕೇಳಿ ಹೌಹಾರಿ, ''ನೀನೆ? ನಿನಗೆ ಕಾಲಿಲ್ಲ, ಅದುಹೇಗೆ ಪರ್ವತ ಏರುತ್ತೀಯಂತೆ?'' ಎಂದು ಅವಳ ಆಸೆಗೆ ತಣ್ಣೀರೆರಚಿ ಛೇಡಿಸಿದ್ದರು. ಆದರೆ ಪಾಲ್ ಮಾತ್ರ ಅವಳ ಛಲವನ್ನು ಗುರುತಿಸಿ, ಅವಳಿಗೆ ಸಂಪೂರ್ಣ ಪ್ರೋತ್ಸಾಹ ನೀಡಿದ್ದಳು. ಅವಳ ಬಳಿ ಒಂದು ವರ್ಷ ಕಠಿಣ ತರಬೇತಿ ಪಡೆದ ಅರುಣಿಮಾ, ಎವರೆಸ್ಟ್ ಆರೋಹಣಕ್ಕೆ ಪೂರ್ವಭಾವಿಯಾಗಿ ಮಾಡುವ ಐಲೆಂಡ್ ಪೀಕ್ ಎಂಬ ಶಿಖರವನ್ನು ಯಶಸ್ವಿಯಾಗಿ ಏರಿದಳು.

೨೦೧೩ರ ಜನವರಿಯಲ್ಲಿ ಅರುಣಿಮಾ ರಾಮಕೃಷ್ಣ ಮಿಷನ್ನಿನ ಒಂದು ಕೇಂದ್ರಕ್ಕೆ ಹೋಗಿದ್ದಾಗ ಅಲ್ಲಿನ ಸ್ವಾಮೀಜಿಗಳು ಅವಳಿಗೆ ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಹಾಗೂ ಶ್ರೀರಾಮಕೃಷ್ಣ, ಶಾರದಾದೇವಿ, ಸ್ವಾಮಿ ವಿವೇಕಾನಂದರ ಚಿತ್ರಗಳಿರುವ ಒಂದು ಫೋಟೋವನ್ನು ಉಡುಗೊರೆಯಾಗಿ ಕೊಟ್ಟರು. ಆ ಪುಸ್ತಕವನ್ನು ಯಾವಾಗಲೂ ಓದಿ ಸ್ಫೂರ್ತಿ ಪಡೆಯುವಂತೆ, ತೊಂದರೆಯಾದಾಗಲೆಲ್ಲ ದಿವ್ಯತ್ರಯರನ್ನು (ಶ್ರೀರಾಮಕೃಷ್ಣ, ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರು) ಪ್ರಾರ್ಥಿಸುವಂತೆ ಅವರು ಉಪದೇಶಿಸಿದರು. ಅರುಣಿಮಾ ಅಂತೆಯೇ ಅವನ್ನೆಲ್ಲ ಪಾಲಿಸಿದಳು.

ಎವರೆಸ್ಟ್ ಆರೋಹಣಕ್ಕೆ ಸಿದ್ಧಳಾದ ಅರುಣಿಮಾ ೨೦೧೩ರ ಏಪ್ರಿಲ್ ೧ ರಂದು ನೇಪಾಳದ ಕಾಠಮಂಡು ತಲುಪಿದಳು. ೧೭ರಂದು ಮೂಲಶಿಬಿರವನ್ನು ತಲುಪಿದ ಆಕೆ ಒಂದು ತಿಂಗಳ ಕಾಲ ಅಲ್ಲಿನ ಪರಿಸರಕ್ಕೆ ಹೊಂದಿಕೊಂಡಳು. ತನ್ನ ಟೆಂಟ್‌ನಲ್ಲೇ ಒಂದು ಸಣ್ಣ ಗುಡಿಯನ್ನು ಮಾಡಿಕೊಂಡು, ಅದರಲ್ಲಿ ದಿವ್ಯತ್ರಯರ ಚಿತ್ರವನ್ನಿಟ್ಟು, ಅದನ್ನು ಪ್ರತಿದಿನ ಪೂಜಿಸುತ್ತಿದ್ದಳು. ಮೇ ೧೬ ರಂದು ಮೂಲಶಿಬಿರದಿಂದ ಎವರೆಸ್ಟ್ ಶಿಖರದತ್ತ ಆರೋಹಣ ಆರಂಭವಾಯಿತು. ಅರುಣಿಮಾ ಉಳಿದವರಿಗಿಂತ ಹೆಚ್ಚು ತೊಂದರೆ ಎದುರಿಸಬೇಕಾಯಿತು. ಅತ್ಯಂತ ಕಠಿಣವಾದ ಆರೋಹಣದ ನಡುವೆ ಒಂದು ಬಾರಿ ಕೃತಕ ಕಾಲು ಕಿತ್ತುಬಂತು. ಉಳಿದವರೆಲ್ಲ, 'ಮುಂದುವರಿ, ಮುಂದುವರಿ' ಎಂದು ಕೂಗಾಡುತ್ತಿದ್ದರು. ಅರುಣಿಮಾ ತನ್ನ ಕೃತಕ ಕಾಲನ್ನು ಒಂದು ಕೈಯಲ್ಲಿ ಹಿಡಿದುಕೊಂಡು ಮತ್ತೆ ಅದನ್ನು ಜೋಡಿಸಿಕೊಂಡಳು. ಪರ್ವತವನ್ನೇರುವಾಗಲೆಲ್ಲ ಅವಳು ''ಜೈ ಸ್ವಾಮೀಜಿ!'' ಎಂದು ಸ್ವಾಮಿ ವಿವೇಕಾನಂದರಿಗೆ ಜೈಕಾರ ಮಾಡುತ್ತಿದ್ದಳು. ಆಗಾಗ ತನ್ನ ಬ್ಯಾಗಿನಲ್ಲಿದ್ದ ದಿವ್ಯತ್ರಯರ ಚಿತ್ರವನ್ನು ತೆಗೆದು ನೋಡಿ, ಅನಂತರ ಅವಳು ಅದನ್ನು ಬ್ಯಾಗಿನ ಒಳಗಿಡುತ್ತಿದ್ದಳು. ಅದನ್ನು ನೋಡಿದ ಜೊತೆಗಾರ ಶೆರ್ಪಾ, ''ಅದೇಕೆ ಹೀಗೆ ಅನಗತ್ಯವಾದದ್ದನ್ನೆಲ್ಲ ಮಾಡುತ್ತೀರಿ?'' ಎಂದು ಕೇಳುತ್ತಿದ್ದ. ಆಗ ಅರುಣಿಮಾ, ''ನಿನಗೆ ಇದು ಅರ್ಥವಾಗುವುದಿಲ್ಲ, ಇದು ನನ್ನ ಎನರ್ಜಿ ಕ್ಯಾಪ್ಸೂಲ್ (ಶಕ್ತಿದಾಯಕ ಮಾತ್ರೆ)''ಎನ್ನುತ್ತಿದ್ದಳು.

ನಡುನಡುವೆ ಅನೇಕ ಶವಗಳು ಮರಳುತ್ತಿದ್ದವು. ಅನೇಕ ಮಂದಿ ಪರ್ವತಾರೋಹಣದ ನಡುವೆಯೇ ವಿವಿಧ ತೊಂದರೆಗಳಿಂದ ಹೆಣವಾಗಿಬಿಡುತ್ತಿದ್ದರು. ಅವೆಲ್ಲ ತೀರ ಸಾಮಾನ್ಯವಾಗಿತ್ತು. ಅದನ್ನೆಲ್ಲ ನೋಡಿದರೂ ಅರುಣಿಮಾ ಎದೆಗುಂದಲಿಲ್ಲ. ಅವರಿಗಾಗಿ ಆಕೆ ಪ್ರಾರ್ಥಿಸಿದಳು: ''ನಿಮ್ಮಲ್ಲಿ ಎಷ್ಟು ಮಂದಿ ಶಿಖರವೇರಿ ಜಯಶಾಲಿಗಳಾಗಿದ್ದೀರೋ ನನಗೆ ತಿಳಿಯದು. ನಿಮ್ಮ ಸಲುವಾಗಿ ನಾನು ಈ ಆರೋಹಣ ಪೂರೈಸಿ ಮರಳುತ್ತೇನೆ. ದಯವಿಟ್ಟು ನನ್ನನ್ನು ಹರಸಿ.''

ಇನ್ನೇನು, ೭೦೦ ಅಡಿ ದೂರದಲ್ಲೇ ಎವರೆಸ್ಟ್ ಶಿಖರದ ತುದಿ ಇದೆ ಎನ್ನುವಾಗ ಅರುಣಿಮಾಳ ಆಮ್ಲಜನಕ ಖಾಲಿಯಾಗುವ ಸೂಚನೆ ಲಭಿಸಿತು. ಕೂಡಲೇ ಶೆರ್ಪಾ 'ವಾಪಸ್' ಎಂದ. (ಏನಾದರೂ ಸಣ್ಣ ತೊಂದರೆಯಾದಾಗಲೂ ಶೆರ್ಪಾ 'ವಾಪಸ್' ಎನ್ನುತ್ತಿದ್ದ. ಅನಗತ್ಯ ತೊಂದರೆಯಾಗಿ ಜೀವ ಕಳೆದುಕೊಳ್ಳುವ ಬದಲು, ಹಿಂದಿರುಗಿ ಬದುಕಿ ಉಳಿಯುವುದು ವಾಸಿ ಎಂದು ಹಾಗನ್ನುತ್ತಿದ್ದ. ಅತ್ಯಂತ ಅಪಾಯಕರ ಸನ್ನಿವೇಶದಲ್ಲಿ ಹಾಗೆ ಹಿಂದಿರುಗುವುದು ಅನಿವಾರ್ಯ. ಆದರೆ ಅರುಣಿಮಾಗೆ 'ವಾಪಸ್' ಎಂಬ ಶಬ್ದವನ್ನು ಕೇಳಿದಂತೆಲ್ಲ ಇಮ್ಮಡಿ ಚೈತನ್ಯ ತುಂಬಿಬಿಡುತ್ತಿತ್ತಂತೆ. ತಾನು ಇದನ್ನು ಸಾಧಿಸಲೇಬೇಕು ಎಂದು ಅವಳು ಮತ್ತಷ್ಟು ದೃಢ ನಿಶ್ಚಯದಿಂದ ಮುಂದುವರಿಯುತ್ತಿದ್ದಳಂತೆ.) ಅಷ್ಟು ಎತ್ತರದ ಶಿಖರದಲ್ಲಿ ಆಮ್ಲಜನಕವಿಲ್ಲದಿದ್ದರೆ ಸಾವು ನಿಶ್ಚಿತವೆ. ಅರುಣಿಮಾ ಅಲ್ಲಿಂದಲೇ ಎವರೆಸ್ಟ್ ಶಿಖರದ ತುದಿಯನ್ನು ನೋಡಬಹುದಾಗಿತ್ತು. ''ಶಿಖರದ ತುದಿ ತಲುಪಲು ಬೇಕಾದಷ್ಟು ಆಕ್ಸಿಜನ್ ನನ್ನ ಬಳಿ ಇದೆ. ನನ್ನ ದೇಶದ ಧ್ವಜ ಮತ್ತು ದಿವ್ಯತ್ರಯರ ಚಿತ್ರವನ್ನು ಅಲ್ಲಿ ನಾನು ಇಡಲೇಬೇಕು'' ಎಂದು ಆಲೋಚಿಸಿ, ಅವಳು ತನ್ನ ಜೀವನದ ಅತ್ಯಂತ ಅಪಾಯಕರವಾದ ನಿರ್ಧಾರವನ್ನು ತೆಗೆದುಕೊಂಡಳು. ಶೆರ್ಪಾ ಅವಳಿಗೆ ಎಚ್ಚರಿಕೆ ನೀಡಿದ; ಅವಳ ಸಾವನ್ನು ಕಣ್ಣಮುಂದೆ ನೋಡಬೇಕಾಗುವುದು, ಹಾಗಾಗಿ ತಾನು ಅವಳ ಜೊತೆಗೆ ಬರಲಾರೆ ಎಂದ. ಆದರೆ ಅವಳ ದೃಢನಿರ್ಧಾರವನ್ನು ಕಂಡು, ಕೊನೆಗೂ ಅವಳೊಂದಿಗೆ ಸೇರಿಕೊಂಡ.

ಮೇ ೨೧ರಂದು ಪೂರ್ವಾಹ್ನ ೧೦.೫೫ಕ್ಕೆ ಅರುಣಿಮಾ ಎವರೆಸ್ಟ್ ಶಿಖರದ ತುದಿಯನ್ನು ಏರಿದಳು. ಅವಳು ತನ್ನ ಜೀವನದ ಮಹತ್ತರ ಸಾಹಸವನ್ನು ಮೆರೆದಿದ್ದಳು. ಪ್ರಪಂಚದಲ್ಲಿ ಮೊದಲ ಬಾರಿಗೆ ಎವರೆಸ್ಟ್ ಏರಿದ ಅಂಗವಿಕಲ ಮಹಿಳೆ ಅವಳಾಗಿದ್ದಳು. ಅಲ್ಲಿ

ಮೈಸೂರು ರಾಮಕೃಷ್ಣ ವಿದ್ಯಾಶಾಲೆಯಲ್ಲಿ

ಅವಳು ಭಾರತದ ತ್ರಿವರ್ಣಧ್ವಜ, ದಿವ್ಯತ್ರಯರ ಚಿತ್ರ ಹಾಗೂ ಆರೋಹಣಕ್ಕೆ ಆರ್ಥಿಕ ವ್ಯವಸ್ಥೆ ಮಾಡಿಕೊಟ್ಟ ಟಾಟಾ ಸ್ಟೀಲ್ ಕಂಪೆನಿಯ ಧ್ವಜ ಇವನ್ನು ನೆಟ್ಟಳು. ತಾನು ಎವರೆಸ್ಟ್ ಏರಿದ್ದರ ದಾಖಲೆಗಾಗಿ ತನ್ನ ಫೋಟೋ ತೆಗೆಯಲು ಅವಳು ಶೆರ್ಪಾನ ಕೈಗೆ ಕ್ಯಾಮರಾ ಕೊಟ್ಟಳು. ''ಈಗಲೇ ವಾಪಸ್ ಹೋಗೋಣ, ಇಲ್ಲದಿದ್ದರೆ ಸತ್ತುಬಿಡುತ್ತೀಯೆ'' ಎಂದ ಶೆರ್ಪಾ. ಆದರೂ ಅವಳ ಒತ್ತಾಯಕ್ಕೆ ಮಣಿದು ಅವನು ಫೋಟೋ ತೆಗೆದ. ''ಈಗ ಸ್ವಲ್ಪ ಹೊತ್ತು ನನ್ನ ವೀಡಿಯೋ ತೆಗೆ'' ಎಂದಳು ಅರುಣಿಮಾ. ಆಗ ಕೆರಳಿ ಕೆಂಡವಾದ ಶೆರ್ಪಾ, 'ಫೋಟೋ ತೆಗೆದದ್ದಾಯಿತು, ಈಗ ವೀಡಿಯೋ! ಇದೇನು, ಸಾವಿನ ಜೊತೆಗೆ ಚೆಲ್ಲಾಟವೆ!' ಎಂದುಕೊಂಡಿರಬೇಕು – ಆದರೆ ಅರುಣಿಮಾ ಬಿಡಲಿಲ್ಲ. ಕೊನೆಗೂ ಅವನು ಎರಡು ನಿಮಿಷ ವೀಡಿಯೋ ತೆಗೆದ. ಭಾರತದ ಯುವಜನತೆಗೆ ತನ್ನ ಸಾಧನೆಯನ್ನು ತೋರಿಸಿ, ಅವರಿಗೆಲ್ಲ ತನ್ನ ಸ್ಫೂರ್ತಿಯ ಸಂದೇಶವನ್ನು ಸಾರಲು ಅವಳಿಗದು ಅಗತ್ಯವಾಗಿತ್ತು.

ಅನಂತರ ಎವರೆಸ್ಟ್ ಶಿಖರದ ತುದಿಯಲ್ಲಿ ಹಿಮದಲ್ಲೇ ಒಂದು ಪೀಠವನ್ನು ಮಾಡಿ, ಅದರ ಮೇಲೆ ತನ್ನಲ್ಲಿದ್ದ ದಿವ್ಯತ್ರಯರ ಚಿತ್ರವನ್ನು ಸ್ಥಾಪಿಸಿದಳು ಅರುಣಿಮಾ. ಅವಳು ದಿವ್ಯತ್ರಯರನ್ನು ಪ್ರಾರ್ಥಿಸಿದಳು: ''ನನಗೆ ರಾಮಕೃಷ್ಣ ಮಿಷನ್ನಿನ ಸಾಧುಗಳ ಹಾಗೆ ಮಂತ್ರ ಹೇಳಿ ಪ್ರಾರ್ಥಿಸಲು ಬರುವುದಿಲ್ಲ. ಆದರೆ ನನ್ನ ಎದೆಯಾಳದ ಈ ಪ್ರಾರ್ಥನೆಯನ್ನು ದಯವಿಟ್ಟು ಸ್ವೀಕರಿಸಿ. ಜಗತ್ತಿನಲ್ಲಿರುವ ಎಲ್ಲರ ಕಷ್ಟವನ್ನೂ ನಿವಾರಿಸಿ; ವಿಶೇಷವಾಗಿ ನನಗಿಂತಲೂ ದುರದೃಷ್ಟಶಾಲಿಗಳನ್ನು.''

ಆಗಲೇ ತಡವಾಗುತ್ತಿತ್ತು. ಎವರೆಸ್ಟ್ ಶಿಖರದ ತುದಿಯಲ್ಲಿ ಪೂರ್ವಾಹ್ನ ೧೧ ಗಂಟೆಯ ನಂತರ ಇರುವುದೆಂದರೆ ಸಾವು ಕಟ್ಟಿಟ್ಟಬುತ್ತಿ. ಈಗಾಗಲೇ ಗಂಟೆ ಹನ್ನೊಂದಾಗಿತ್ತು. ಆಗಲೇ ಗಂಟೆಗೆ ೨೩೦ ಕಿ.ಮೀ. ವೇಗದಲ್ಲಿ ಗಾಳಿ ಬೀಸುತ್ತಿತ್ತು. ಹವಾಮಾನ ಸೊನ್ನೆಗಿಂತ ೪೦ ಡಿಗ್ರಿ ಕೆಳಗಿತ್ತು. ಅರುಣಿಮಾಳ ಬಳಿ ಇದ್ದ ಆಮ್ಲಜನಕದ ಸಿಲಿಂಡರ್‌ನಲ್ಲಿ ಸ್ವಲ್ಪ ಮಾತ್ರ ಉಳಿದಿತ್ತು. ಇನ್ನೂ ಅರುಣಿಮಾಳ ಪ್ರಾರ್ಥನೆ ಮುಗಿದಿಲ್ಲವಲ್ಲ ಎಂದು ಶೆರ್ಪಾ ಚಡಪಡಿಸುತ್ತಿದ್ದ. ಪ್ರಾರ್ಥನೆ ಮುಗಿಸಿದ ಅರುಣಿಮಾ ಹಿಂದಿರುಗಿ ಪರ್ವತ ಇಳಿಯತೊಡಗಿದಳು. ಅಷ್ಟರಲ್ಲಿ ಒಂದು ಅದ್ಭುತವೇ ನಡೆದು ಅರುಣಿಮಾಗೆ ಇನ್ನೊಂದು ಆಕ್ಸಿಜನ್ ಸಿಲಿಂಡರ್ ದೊರಕಿತು.

ಒಬ್ಬ ಬ್ರಿಟಿಷ್ ಆರೋಹಿ ಎರಡು ಸಿಲಿಂಡರ್‌ಗಳೊಂದಿಗೆ ಪರ್ವತಾರೋಹಣ ಮಾಡುತ್ತಿದ್ದ. ನಡುವೆ ಹವಾಮಾನ ಕೆಟ್ಟುಹೋಗಿ, ಅವನು ಎವರೆಸ್ಟ್ ಶಿಖರವೇರದೆ ಹಿಂದಿರುಗುತ್ತಿದ್ದ. ಸುರಕ್ಷತೆಗಾಗಿ ಅವನು ಅರ್ಧ ಖಾಲಿಯಾಗಿದ್ದ ಸಿಲಿಂಡರನ್ನು ಕಳಚಿ ಅಲ್ಲೇ ಬಿಸಾಡಿ, ಇನ್ನೊಂದನ್ನು ಧರಿಸಿಕೊಂಡಿದ್ದ. ಅದನ್ನು ಗಮನಿಸಿದ ಶೆರ್ಪಾ, ಓಡಿಹೋಗಿ ಎಸೆದಿದ್ದ ಸಿಲಿಂಡರನ್ನು ತಂದು ಅರುಣಿಮಾಗೆ ನೀಡಿದ. ಹೀಗೆ ಅರುಣಿಮಾ ಸಾವಿನ ಅಂಚಿನಿಂದ ಪಾರಾದಳು.

ಹಿಂದಿರುಗಿ ಬರುವಾಗ ಅರುಣಿಮಾ ಇನ್ನಷ್ಟು ತೊಂದರೆಗಳನ್ನು ಅನುಭವಿಸಬೇಕಾಯಿತು. ಒಂದೆಡೆ ಅವಳ ಕೈಗಳು ಮರಗಟ್ಟಿಹೋಗಿ, ಪರ್ವತಾರೋಹಣದ ಹಗ್ಗವನ್ನು ಹಿಡಿಯಲು ಸಾಧ್ಯವಾಗದೆ ಹೋಯಿತು. ಅವಳು ನೋವು ತಡೆಯಲಾಗದೆ ಒಂದೇ ಸಮನೆ ಅಳತೊಡಗಿದಳು. ಕಣ್ಣೀರಿಡುತ್ತ ಅವಳು ತನ್ನಲ್ಲೇ ಹೇಳಿಕೊಂಡಳು: ''ಅರುಣಿಮಾ, ಅತ್ತು ಪ್ರಯೋಜನವಿಲ್ಲ. ಬದುಕಿ ಉಳಿಯಬೇಕಿದ್ದರೆ ನೀನು ಸಹಿಸಿಕೊಳ್ಳಬೇಕು. ನಿಲ್ಲದೆ ಮುಂದಕ್ಕೆ ಸಾಗಬೇಕು!'' ಅವಳು ದೇವರಲ್ಲಿ ಮೊರೆಯಿಟ್ಟಳು– ''ಓ ದೇವರೆ, ನೀನು ಸರ್ವಶಕ್ತ ಎಂದು ನಾನು ತಿಳಿದಿದ್ದೇನೆ. ನಾನು ಇಲ್ಲೇ ಸಾಯಬೇಕು ಅಂತ ನೀನು ತೀರ್ಮಾನಿಸಿದ್ದೀಯಾ? ನಾನು ನಿನ್ನ ಮಗಳು. ನಿನ್ನ ಮಗಳಾಗಿರುವಾಗ ನಾನು ನನ್ನಿಂದಾದಷ್ಟೂ ಬದುಕಿ ಉಳಿಯಲು ಹೋರಾಡುತ್ತೇನೆ. ಯಾರು ಗೆಲ್ಲುತ್ತಾರೋ ನೋಡೋಣ!''

ಕೊನೆಗೂ ಅರುಣಿಮಾ ಬದುಕಿ ಉಳಿದಳು; ಬಹುಕಷ್ಟದಿಂದ ಹಿಂದಿರುಗಿ ಬಂದಳು. ಭಾರತದ ಹಲವೆಡೆ ಸಂಚರಿಸುತ್ತ, ವಿವಿಧ ಸಂಘಸಂಸ್ಥೆಗಳಲ್ಲಿ ತನ್ನ ಅಸಾಧಾರಣ ಅನುಭವಗಳನ್ನು ಸ್ಫೂರ್ತಿಭರಿತ ಮಾತುಗಳ ಮೂಲಕ ಹೇಳುತ್ತ ಸಹಸ್ರಾರು ಮಂದಿ ಯುವಕ-ಯುವತಿಯರನ್ನು ಪ್ರೇರೇಪಿಸುವುದರಲ್ಲಿ ಅರುಣಿಮಾ ನಿರತಳಾಗಿದ್ದಾಳೆ. ಅಂಗವಿಕಲರಿಗಾಗಿ ಒಂದು ಸ್ಪೋರ್ಟ್ಸ್ ಅಕಾಡೆಮಿಯನ್ನು ಸ್ಥಾಪಿಸುವ ಯೋಜನೆಯನ್ನೂ ಅವಳು ಹಾಕಿ ಕೊಂಡಿದ್ದು, ಅದಕ್ಕಾಗಿ ನಿಧಿಸಂಗ್ರಹ ಮಾಡುತ್ತಿದ್ದಾಳೆ. ಇದಲ್ಲದೆ, ಪ್ರಪಂಚದ ಏಳು ಖಂಡಗಳ ಅತ್ಯುನ್ನತ ಶಿಖರಗಳನ್ನೆಲ್ಲ ಏರುವ ಮಹತ್ವಾಕಾಂಕ್ಷೆಯನ್ನು ಅವಳು ಹೊಂದಿದ್ದಾಳೆ, ಈಗಾಗಲೇ ಎವರೆಸ್ಟ್ ಸೇರಿದಂತೆ (ಏಷ್ಯಾ, ಯೂರೋಪ್ ಹಾಗೂ ಆಫ್ರಿಕಾ ಖಂಡಗಳ) ಮೂರು ಶಿಖರಗಳನ್ನು ಯಶಸ್ವಿಯಾಗಿ ಏರಿದ್ದಾಳೆ. ಅವಳ ಮುಂದಿನ ಗುರಿ ಆಸ್ಟ್ರೇಲಿಯಾದ ಅತ್ಯುನ್ನತ ಶಿಖರ. ಕೆಲವೇ ವರ್ಷಗಳಲ್ಲಿ ಅವಳು ತನ್ನ ಗುರಿಯನ್ನು ಸಾಧಿಸುವುದರಲ್ಲಿ ಯಾವುದೇ ಸಂದೇಹವಿಲ್ಲ.

''ಪ್ರಪಂಚದ ಇತಿಹಾಸವೆಂದರೆ, ಅದು ತನ್ನಲ್ಲಿ ಆತ್ಮವಿಶ್ವಾಸ ಹೊಂದಿದ ಕೆಲವೇ ವ್ಯಕ್ತಿಗಳ ಇತಿಹಾಸ. ಆತ್ಮವಿಶ್ವಾಸ ಒಳಗಿರುವ ದಿವ್ಯತೆಯನ್ನು ಪ್ರಕಟಗೊಳಿಸುವುದು'' ಎಂಬ ಸ್ವಾಮಿ ವಿವೇಕಾನಂದರ ವಾಣಿ ಅರುಣಿಮಾ ಸಿನ್ಹಾಳ ಸಾಧನೆಯನ್ನು ಕಂಡಾಗ ಹೆಚ್ಚು ಸ್ಪಷ್ಟವಾಗುತ್ತದೆ.

*(ಆಧಾರ: **Global Vedanta,** Summer Issue, 2014 ಮತ್ತು ೨೬.೯.೨೦೧೪ ರಂದು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಅರುಣಿಮಾ ಸಿನ್ಹಾ ಮಾಡಿದ ಭಾಷಣದಿಂದ ಸಂಗ್ರಹಿಸಿದ ಭಾಗಗಳು. ಹೆಚ್ಚಿನ ವಿವರಗಳಿಗೆ : **arunimasinha.com** ನೋಡಿ)* *

ಇದು ನನ್ನಿಂದಲೇ

ರಷ್ಯಾ ದೇಶದ ವೈರಿತ್ತಾದ **ಸಂತ ಸೆರಾಫಿಂ** (೧೭೫೯–೧೮೩೩) ಒಬ್ಬ ರೈತರ ಹುಡುಗನಾಗಿದ್ದವನು. ಅನಂತರ ಅವನು ಗೃಹಸ್ಥ ಜೀವನದ ಹಲವು ಮುಖಗಳನ್ನು ನೋಡಿ, ಕೊನೆಗೆ ರಷ್ಯಾದ ಅತಿದೊಡ್ಡ ಕ್ರೈಸ್ತ ಸಂನ್ಯಾಸೀ ಮಠದಲ್ಲಿ ಆಧ್ಯಾತ್ಮಿಕ ಗುರುವಾದನು. ತನ್ನ ಬದುಕನ್ನೆಲ್ಲ ದೇವರಿಗಾಗಿ ಅರ್ಪಿಸಿ, ಜೀವನದುದ್ದಕ್ಕೂ ಇತರರಿಗೋಸ್ಕರ ಪ್ರಾರ್ಥಿಸುತ್ತ ಕಳೆದ.

'It was from Me' ಎಂಬ ಈ ಬರಹ ಅವನ ಮರಣಾನಂತರ ಪ್ರಕಟವಾಯಿತು. ಈ ಬರಹ ಲಂಡನ್ ವೇದಾಂತ ಸೊಸೈಟಿಯ ತ್ರೈಮಾಸಿಕ ಪತ್ರಿಕೆಯಾದ 'ವೇದಾಂತ'ದ ಮೇ–ಜೂನ್ ೨೦೦೮ ಸಂಚಿಕೆಯಲ್ಲಿ ಪ್ರಕಟವಾಯಿತು. ಇದನ್ನು ರಷ್ಯನ್ ಭಾಷೆಯಿಂದ ಇಂಗ್ಲಿಷ್‌ಗೆ ಅನುವಾದಿಸಿದವರು ಜಾನ್ ಫಿಲಿಪ್ಸ್. *ಕನ್ನಡಾನುವಾದ : 'ಅನಾಮಿಕಾ'*

ಎಂದಾದರೂ ನೀನು ಯೋಚಿಸಿರುವೆಯಾ? ನಿನಗೆ ಏನಾದರೂ ಆದರೆ ನನಗೂ ಅದೇ ಆದಂತೆ. ಏಕೆಂದರೆ ನಿನಗೆ ಕಷ್ಟವಾದರೆ ಅದು ನನಗೆ ಪ್ರಿಯವಾದವನಿಗೆ ಕಷ್ಟವಾದಂತೆ. ನನ್ನ ದೃಷ್ಟಿಯಲ್ಲಿ ನೀನು ನನಗೆ ಹತ್ತಿರದವನು ಮತ್ತು ನಾನು ನಿನ್ನನ್ನು ಪ್ರೀತಿಸುತ್ತೇನೆ. ಆದ್ದರಿಂದ ನಿನ್ನನ್ನು ನೋಡಿಕೊಳ್ಳುವುದೆಂದರೆ ನನಗದು ಆನಂದವೇ ಸರಿ.

ಪ್ರಲೋಭನೆಗಳು ನಿನ್ನಲ್ಲಿ ಹುಟ್ಟಿದಾಗ, ಆ ವೈರಿ ಒಂದು ರಭಸವಾದ ಪ್ರವಾಹದಂತೆ ಬಂದಾಗ, ತಿಳಿದುಕೊ – ಅದು **ನನ್ನಿಂದಲೇ.** ನಿನ್ನ ಪರವಾಗಿ ಹೋರಾಡುವ ಜವಾಬ್ದಾರಿಯನ್ನು ನೀನು ನನಗೆ ವಹಿಸಿದಾಗಲೇ ನಿನ್ನ ದೌರ್ಬಲ್ಯಕ್ಕೆ ನನ್ನ ಶಕ್ತಿಯ ಅಗತ್ಯ ಮತ್ತು ಭದ್ರತೆ ನಿನಗೆ ಸಿಗುವುದು.

ಕಷ್ಟಕರ ಸಂದರ್ಭಗಳಲ್ಲಿ ನೀನು ಸಿಲುಕಿದಾಗ, ನಿನ್ನನ್ನು ಯಾರೂ ಅರ್ಥಮಾಡಿಕೊಳ್ಳದವರ ನಡುವೆ ಇದ್ದಾಗ, ಹಾಗೂ ನಿನ್ನ ಅಗತ್ಯವನ್ನು ಯಾರೂ ಪರಿಗಣಿಸದೆ ಹೋದಾಗ, ನಿನ್ನನ್ನು ಪಕ್ಕಕ್ಕೆ ತಳ್ಳುವಾಗ – ತಿಳಿದುಕೊ, ಇದೂ **ನನ್ನಿಂದಲೇ.** ನಾನು ನಿನ್ನ ಭಗವಂತ, ನಿನ್ನ ಸಂದರ್ಭಗಳನ್ನು ವ್ಯವಸ್ಥೆ ಮಾಡು ವವನು. ಈಗಿರುವ ನಿನ್ನ ಪರಿಸ್ಥಿತಿ ಆಕಸ್ಮಿಕವಾಗಿ ಅಲ್ಲ. ನಾನೇ ಈ ಪರಿಸ್ಥಿತಿಯನ್ನು ನಿನಗೆ ನಿಯೋಜಿಸಿರುವೆ. ನಮ್ರತೆಯನ್ನು ಕಲಿಸು ಎಂದು ನನ್ನನ್ನು ನೀನು ಕೇಳಲಿಲ್ಲವೇ? ಆದ್ದರಿಂದ ನಿನ್ನನ್ನು ಆ ಜಾಗದಲ್ಲಿ, ಈ ಪಾಠವನ್ನು ಕಲಿಯಬಹುದಾದ ಶಾಲೆಯಲ್ಲಿ ಇಟ್ಟಿರುವೆ. ನಿನ್ನ ಈಗಿನ ಸಂದರ್ಭಗಳು ಮತ್ತು ನಿನ್ನೊಂದಿಗೆ ಇರುವವರು – ಎಲ್ಲವೂ ನನ್ನ ಇಚ್ಛೆಯನ್ನೇ ಈಡೇರಿಸುವುವು.

ನೀನು ಆರ್ಥಿಕ ತೊಂದರೆಗಳಲ್ಲಿ ಸಿಲುಕಿದ್ದರೆ ನಿನಗೆ ದೈನಂದಿನ ಖರ್ಚುಗಳಿಗೂ ಹಣ ಇಲ್ಲದಿದ್ದರೆ, ಅದೂ **ನನ್ನಿಂದಲೇ.** ಏಕೆಂದರೆ, ನಿನ್ನ ಜೀವನಕ್ಕೆ ಬೇಕಾಗುವುದನ್ನೆಲ್ಲ ವ್ಯವಸ್ಥೆ ಮಾಡುವವನು ನಾನೇ. ನೀನು **ನನ್ನೊಡನೆ** ಓಡಿ ಬರಬೇಕು, ನನ್ನನ್ನೇ ಅವಲಂಬಿಸಬೇಕು. ನನ್ನ ಸಂಪನ್ಮೂಲಗಳು ಅಕ್ಷಯ. ನಿನ್ನ ಮೇಲೆ ನನಗಿರುವ ಶ್ರದ್ಧೆ ಮತ್ತು ನಿನಗೆ ನಾನಿತ್ತ ಭರವಸೆಗಳನ್ನು ನೀನು ನಂಬಬೇಕೆಂಬುದು ನನ್ನ ಆಸೆ. ಯಾರೂ ನಿನ್ನ ಬೇಡಿಕೆಗಳನ್ನು ಕಂಡು, 'ನಿನಗೆ ನಿನ್ನ ಭಗವಂತನ ಮೇಲೆ ನಂಬಿಕೆಯಿಲ್ಲ' ಎನ್ನಬಾರದು.

ದುಃಖಮಯವಾದ ರಾತ್ರಿಯನ್ನು ಕಳೆಯುತ್ತಿರುವೆಯಾ? ನಿನ್ನ ನಿಕಟ ಸಂಬಂಧಿಗಳಿಂದ, ಸ್ನೇಹಿತರಿಂದ, ನಿನ್ನ ಆಪ್ತರಿಂದ ಅಗಲಿರುವೆಯಾ? ನಿನ್ನ ದುಃಖವನ್ನು ನಾನು ತಿಳಿದಿರುವೆನು, ನಿನ್ನ ನೋವನ್ನು ಅನುಭವಿಸಿರುವೆನು. ನಾನೇ ಇದಕ್ಕೆ ಅನುಮತಿ ನೀಡಿರುವೆನು – ನೀನು ನನ್ನಡೆಗೆ ಬರಲಿ ಎಂದು; ಮತ್ತು ನನ್ನಲ್ಲೇ ಶಾಶ್ವತವಾದ ಸಮಾಧಾನ ಪಡೆಯಲಿ ಎಂದು.

ನಿನ್ನ ಸ್ನೇಹಿತನಿಂದ – ಯಾರ ಹತ್ತಿರ ನಿನ್ನ ಭಾವನೆಗಳನ್ನು ಹಂಚಿಕೊಂಡಿರುವೆಯೋ ಅವನಿಂದ ನಿರಾಶೆಗೊಂಡಿರುವೆಯಾ? **ನಾನೇ** ಈ ನಿರಾಶೆಗಳಿಗೆ ಅವಕಾಶ ಕೊಟ್ಟಿದ್ದೆ. ಏಕೆಂದರೆ, ನಿನಗೆ ಅತ್ಯಂತ ಆಪ್ತನಾದ ಸ್ನೇಹಿತ ಭಗವಂತನೊಬ್ಬನೇ ಎಂದು ನೀನು ಅರಿಯಬೇಕು. ನನ್ನೊಂದಿಗೆ ನೀನು ಮಾತನಾಡಬೇಕು, ನನ್ನೊಂದಿಗೆ ನಿನ್ನ ಸುಖ, ದುಃಖಗಳನ್ನು ಹಂಚಿಕೊಳ್ಳಬೇಕು, ಇದೇ ನನ್ನ ಬಯಕೆ.

ಯಾರಾದರೂ ನಿನ್ನನ್ನು ನಿಂದಿಸಿದರೇ? ಅದರ ಬಗ್ಗೆ ನನಗೆ ಹೇಳು. ನನ್ನನ್ನು ಗಟ್ಟಿಯಾಗಿ ಹಿಡಿದುಕೊ. ಅಂಥ 'ನಿಂದಿಸುವ ನಾಲಗೆ'ಗಳಿಂದ ದೂರವಾಗಿ ನಿನ್ನ ಏಕೈಕ ಆಶ್ರಯ ಮತ್ತು ಆತ್ಮವಾದ ನನ್ನಡೆಗೆ ಬಾ. ನಿನ್ನ ಸತ್ಯವನ್ನು, ನಿನ್ನ ವಿಧಿಯನ್ನು, ನಡುಹಗಲಿನ ಬಿಸಿಲಿನಂತೆ ಬೆಳಕಿಗೆ ತರುವೆನು.

ನಿನ್ನ ಯೋಜನೆಗಳು ಅಸ್ತವ್ಯಸ್ತಗೊಂಡಿವೆಯೇ? ನಿನ್ನ ಆತ್ಮ ಬಳಲಿ ಬೆಂಡಾಗಿದೆಯೆ? ಇದೂ **ನನ್ನಿಂದಲೇ.** ನೀನು ನಿನ್ನ ಯೋಜನೆಗಳನ್ನು ಏರ್ಪಡಿಸಿ ನನ್ನ ಅನುಗ್ರಹಕ್ಕೆಂದು ನನ್ನ ಬಳಿ ತಂದೆ, ಆದರೆ ನಿನ್ನ ಜೀವನದ ಸನ್ನಿವೇಶಗಳನ್ನು ಕ್ರಮಗೊಳಿಸುವ ಅವಕಾಶವನ್ನು ನನಗೆ ವಹಿಸಬೇಕೆಂಬುದೇ ನನ್ನಾಸೆ. ಆಗ ಅದೆಲ್ಲದರ ಹೊಣೆ ನನ್ನದಾಗುತ್ತದೆ. ಏಕೆಂದರೆ ನಿನಗೆ ಅದನ್ನು ಹೊರಲು ಭಾರವಾಗುವುದು, ನಿನಗೆ ಮಾತ್ರ ಅವುಗಳನ್ನು ನಿಭಾಯಿಸಲು ಸಾಧ್ಯವಿಲ್ಲ. ಏಕೆಂದರೆ ನೀನು ನಿಮಿತ್ತ ಮಾತ್ರವಷ್ಟೆ, ನಿರ್ವಾಹಕನಲ್ಲ.

ಯಾವುದಾದರೊಂದು ಅನಿರೀಕ್ಷಿತವಾದ ಸೋಲಿನ ಘಟನೆ ನಡೆದು ನಿನ್ನ ಹೃದಯ ನಿರುತ್ಸಾಹಗೊಂಡಿದೆಯೇ? ಇದೂ **ನನ್ನಿಂದಲೇ** ಎಂದು ತಿಳಿದುಕೊ. ಏಕೆಂದರೆ, ಆ ದೌರ್ಬಲ್ಯವನ್ನೆಲ್ಲ ತೊಡೆದುಹಾಕಲು ನಿನ್ನ ಹೃದಯ ಮತ್ತು ನಿನ್ನ ಆತ್ಮ ಸತತವೂ **ನನ್ನ** ಕಣ್ಣೆದುರು ಇರಬೇಕು; ಅವುಗಳು **ನನ್ನ** ನಾಮದಿಂದ ಪ್ರಜ್ವಲಿಸಬೇಕು.

ನಿನ್ನ ಆತ್ಮೀಯರಿಂದ ಯಾವ ಸುದ್ದಿಯೂ ಬಂದಿಲ್ಲವೆಂದು ನೀನು ಚಿಂತೆ, ಅಸಮಾಧಾನಗಳಿಂದ ಕೂಡಿರುವೆಯಾ? ಇದೂ **ನನ್ನಿಂದಲೇ** ಎಂದು ತಿಳಿದುಕೊ. ದುರ್ಬಲಗೊಳ್ಳುತ್ತಿರುವ ನಿನ್ನ ಚೈತನ್ಯವನ್ನು ನಾನು ಪರೀಕ್ಷೆ ಮಾಡುತ್ತಿರುವೆನು. ನೀನು ಕೊಟ್ಟಿರುವ ಭರವಸೆಯ ಮೇಲೆ ನಿನಗಿರುವ ಶ್ರದ್ಧೆಯ ಕೋಟೆಯನ್ನು, ನಿನ್ನ ಆತ್ಮೀಯರಿಗಾಗಿ ಮಾಡುವ ನಿನ್ನ ವ್ಯಾಕುಲವಾದ ಪ್ರಾರ್ಥನೆಗಳ ಸಾಮರ್ಥ್ಯವನ್ನು ಪರೀಕ್ಷಿಸುತ್ತಿರುವೆನು. ಏಕೆಂದರೆ ನೀನು ಅವರ ರಕ್ಷಣೆಯನ್ನು ನನ್ನ ನಿಷ್ಕಳಂಕ ತಾಯಿಗೆ ಒಪ್ಪಿಸಿರಲಿಲ್ಲವೇ? ಅವರ ಕ್ಷೇಮವನ್ನು ನನ್ನ ಪ್ರೀತಿಗೆ ಸಮರ್ಪಿಸಿರಲಿಲ್ಲವೇ?

ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ನೀನು ಯಾವುದೋ ಗಂಭೀರ ಕಾಯಿಲೆಗೆ ತುತ್ತಾಗಿ ಹಾಸಿಗೆ ಹಿಡಿದರೆ, ಅದೂ **ನನ್ನಿಂದಲೇ.** ಏಕೆಂದರೆ ನಿನ್ನ ದೈಹಿಕ ಬಲಹೀನತೆಯಲ್ಲಿ, ನಿನಗೆ ನೀಡಲಾದ ಪರೀಕೆಯಲ್ಲಿ ನೀನು ಇನ್ನೂ ಹೆಚ್ಚಾಗಿ, ತೀವ್ರವಾಗಿ ನನ್ನನ್ನು ಕರೆಯಬೇಕೆಂಬುದು ನನ್ನ ಬಯಕೆ. ಈ ಪರೀಕ್ಷೆಯನ್ನು ಗೊಣಗಾಡದೆ ಎದುರಿಸಬೇಕೆಂದೂ, ಅದಕ್ಕೆ ಅನುಗುಣವಾಗಿ ನಾನು ಯೋಜಿಸಿರುವ ಪರಿಹಾರಗಳ ನಡುವೆ ನೀನು ತಲೆಹಾಕದೆ, ನಿನ್ನ ಮೇಲೆ ನಾನು ಹರಿಸುವ ಕೃಪೆಗೆ ನಮ್ರವಾಗಿ ತಲೆಬಾಗಿಸಬೇಕೆಂಬುದೇ ನನ್ನ ಆಸೆ.

ನೀನು ನನಗೋಸ್ಕರ ವಿಶೇಷವಾಗಿ ಏನನ್ನಾದರೂ ರಚಿಸ ಬೇಕೆಂದು ಬಯಸಿ, ಅದರ ಬದಲು ಕಾಯಿಲೆ ಹಿಡಿದು ನಿತ್ರಾಣದಿಂದ ಹಾಸಿಗೆ ಹಿಡಿದರೆ ತಿಳಿ, ಇದೂ **ನನ್ನಿಂದಲೇ.** ಏಕೆಂದರೆ, ನಿನ್ನ ವ್ಯವಹಾರಗಳಲ್ಲಿ ನೀನು ಮುಳುಗಿರುವಾಗ, ನಿನ್ನ ಗಮನವನ್ನು ನನ್ನಡೆಗೆ ಸೆಳೆಯಲು ಸಾಧ್ಯವಾಗದೆ ಹೋಗುವೆ. ಆಗ ನೀನು **ನನ್ನ** ಸೇವೆಯಲ್ಲೇ ಇರುವೆ, ನೀನು ಏನೂ ಅಲ್ಲ, ಎಂಬ ಅಗಾಧವಾದ ಸತ್ಯವನ್ನು ನಿನಗೆ ಮನವರಿಕೆ ಮಾಡಲು ಕಲಿಸುವೆ. ನನ್ನ ಕೆಲವು ಅತ್ಯುತ್ತಮ ಕಾರ್ಯಕರ್ತರು ನಿರಂತರ ಪ್ರಾರ್ಥನೆ ಮಾಡುವುದನ್ನು ಕಲಿಯುವ ಸಲುವಾಗಿ ಜೀವನದ ಚಟುವಟಿಕೆಗಳಿಂದ ದೂರ ಇರುವರು.

ಅನಿರೀಕ್ಷಿತವಾಗಿ ಯಾವುದಾದರೊಂದು ಹೊಣೆಗಾರಿಕೆಯನ್ನು ವಹಿಸಬೇಕಾಗಿ ಬಂದರೆ, ಹೋಗು, ನನ್ನ ಮೇಲೆ ಭರವಸೆ ಇಟ್ಟು ಅದನ್ನು ಮಾಡು. ನಾನೇ ಈ ಕಷ್ಟಗಳನ್ನು ತಂದಿರುವೆ, ಏಕೆಂದರೆ ಭಗವಂತ ನೀನು ಕೈಗೊಂಡಿರುವ ಎಲ್ಲ ಕಾರ್ಯಗಳನ್ನು, ಮಾರ್ಗ ಗಳನ್ನು, ಕರ್ತವ್ಯಗಳನ್ನು ಹರಸುವನು, ಆಶೀರ್ವದಿಸುವನು. ಇಂದು ನಾನು ಪವಿತ್ರವಾದ ತೈಲ ತುಂಬಿದ ಪಾತ್ರೆಯೊಂದನ್ನು ನಿನಗೆ ಕೊಡುವೆನು. ಅದನ್ನು ಸಾಕಷ್ಟು ಬಳಸು, ನನ್ನ ಕಂದ. ನಿನಗೆ ಒದಗುವ ಎಲ್ಲ ಕಷ್ಟ, ಎಲ್ಲ ತಿರಸ್ಕಾರ, ನಿನ್ನ ಕೆಲಸದ ಬಗ್ಗೆ ಮಾಡುವ ಅಪಹಾಸ್ಯ ಇವುಗಳಿಂದಾಗಿ ನಿನಗೆ ಕಿರುಕುಳವುಂಟಾದಾಗ, ನಿನ್ನ ದೌರ್ಬಲ್ಯ, ಅಸಹಾಯಕತೆಗಳು ನಿನ್ನ ಅರಿವಿಗೆ ಬಂದಾಗ – **ಅದು ನನ್ನಿಂದಲೇ** ಎಂಬ ತೈಲದಿಂದ ಸವರು.

ಪ್ರತಿಯೊಂದು ಅಪಹಾಸ್ಯ ಭಗವಂತನಿಂದ ಬಂದಿರುವ ಒಂದು ಎಚ್ಚರಿಕೆಯೆಂದು ನೀನು ನೆನಪಿಟ್ಟುಕೊ. ಆದ ಕಾರಣ ಇಂದು ನಿನಗೆ ತಿಳಿಸಿದ್ದನ್ನೆಲ್ಲಾ ಹೃದಯದಲ್ಲಿ ಇಟ್ಟುಕೊ: **ಇದು ನನ್ನಿಂದಲೇ.** ಇದನ್ನು ಪಾಲಿಸು. ಯಾವಾಗ ನೀನು ಎಲ್ಲದರಲ್ಲಿಯೂ **ನನ್ನನ್ನೇ** ನೋಡಲು ಕಲಿಯುವೆಯೋ ಆವಾಗ ಪ್ರತಿಯೊಂದು ಕುಟುಕು, ಚುಚ್ಚುಗಳೂ ಮೊಂಡಾಗುವವು. ನಿನ್ನ ಆತ್ಮವನ್ನು ಪರಿಪೂರ್ಣಗೊಳಿಸುವ ಸಲುವಾಗಿ ಎಲ್ಲವೂ ನನ್ನಿಂದಲೇ ಕಳುಹಿಸಲ್ಪಟ್ಟಿದೆ. **ಇದು ನನ್ನಿಂದಲೇ.** *

ತ್ಯಾಗರಾಜರ ಭಕ್ತಿ

ಸಂತ ತ್ಯಾಗರಾಜರು ಸದಾ ರಾಮನಾಮ, ಜಪಗಳಲ್ಲೇ ನಿರತರಾಗಿರುತ್ತಿದ್ದರು. ಅದಕ್ಕಾಗಿ ಅವರ ಅಣ್ಣನಿಗೆ ಕೋಪ ಬಂದು, ತ್ಯಾಗರಾಜರು ಪೂಜೆ ಮಾಡುತ್ತಿದ್ದ ಶ್ರೀರಾಮನ ವಿಗ್ರಹವನ್ನು ಕಾವೇರಿ ನದಿಗೆ ಎಸೆದುಬಿಟ್ಟರು. ಮರುದಿನ ಬೆಳಿಗ್ಗೆ ಪೀಠದಲ್ಲಿ ವಿಗ್ರಹವಿಲ್ಲದ್ದನ್ನು ನೋಡಿ ತ್ಯಾಗರಾಜರಿಗೆ ತುಂಬಾ ದುಃಖವಾಯಿತು. 'ನನ್ನ ಬಂಧುಗಳು ಇಷ್ಟೊಂದು ತೊಂದರೆ ಮಾಡುತ್ತಿದ್ದರೂ ಸುಮ್ಮನಿರುವೆಯಲ್ಲಾ!' ಎಂದು ಅವರು ತಮಗಾದ ಅನ್ಯಾಯ, ದುಃಖವನ್ನು ತೋಡಿಕೊಂಡರು. ಒಂದು ದಿನ ರಾತ್ರಿ ಕನಸಿನಲ್ಲಿ ಶ್ರೀರಾಮನು ಕಾಣಿಸಿಕೊಂಡು, ಆ ವಿಗ್ರಹ ಎಲ್ಲಿದೆ ಎಂಬುದನ್ನು ತಿಳಿಸಿಕೊಟ್ಟನು. ತ್ಯಾಗರಾಜರು ಕಾವೇರೀತೀರಕ್ಕೆ ಹೋಗಿ ಹುಡುಕಿದಾಗ ಆ ವಿಗ್ರಹ ಸಿಕ್ಕಿತು. ತ್ಯಾಗರಾಜರ ಸಂತೋಷಕ್ಕೆ ಪಾರವೇ ಇರಲಿಲ್ಲ. ಎಲ್ಲ ವಿಧಿಗಳೊಡನೆ ಆ ವಿಗ್ರಹವನ್ನು ಮರಳಿ ಪೀಠದಲ್ಲಿ ಸ್ಥಾಪಿಸಿ, ಪೂಜೆಮಾಡಿ, ಆನಂದದಿಂದ ಹಾಡಿದರು.

ಅಷ್ಟಾದರೂ ತ್ಯಾಗರಾಜರಿಗೆ ಸಂಪೂರ್ಣ ಸಮಾಧಾನವಾಗಲಿಲ್ಲ. ಅವರ ಮಗಳ ಮದುವೆಯ ಸಂದರ್ಭದಲ್ಲಿ ಅವರ ಶಿಷ್ಯ ವಾಲಾಜಪೇಟೆ ವೆಂಕಟರಮಣ ಭಾಗವತರು ಕೋದಂಡರಾಮನ ಚಿತ್ರವನ್ನು ದೂರದ ಊರಿನಿಂದ ಕಾಲುನಡಿಗೆಯಲ್ಲೇ ಹೊತ್ತುತಂದು, ತ್ಯಾಗರಾಜರಿಗೆ ಉಡುಗೊರೆಯಾಗಿ ಕೊಟ್ಟರು. ಹಲವು ವರ್ಷಗಳ ಹಿಂದೆ ಕಳೆದುಹೋಗಿದ್ದ ಶ್ರೀರಾಮ ಈಗ ಈ ಚಿತ್ರದ ಮೂಲಕ ಮರಳಿ ದೊರಕಿದಂತಾಗಿ, ಅತ್ಯಾನಂದದಿಂದ ಅವರು 'ನನ್ನು ಪಾಲಿಂಪ' ಎಂಬ ಕೀರ್ತನೆಯನ್ನು ಹಾಡಿದರು. ಆ ಚಿತ್ರವನ್ನು ರಾಮನ ವಿಗ್ರಹದ ಜೊತೆಯಲ್ಲಿಟ್ಟು ಪೂಜೆಮಾಡತೊಡಗಿದರು ತ್ಯಾಗರಾಜರು. ಅಂತರಂಗದಲ್ಲೆಲ್ಲ ಭಗವಂತನನ್ನೇ ತುಂಬಿಕೊಂಡ ಭಕ್ತನಿಗೆ ಬಾಹ್ಯಮೂರ್ತಿಯಲ್ಲೂ ಅವನ ಜೀವಂತಮೂರ್ತಿ ಕಾಣಿಸುವುದರಲ್ಲಿ ಆಶ್ಚರ್ಯವೇನಿದೆ!

ಬುಗ್ಗೆಯ ನೀರು

ಇದೊಂದು ಬಹಳ ಹಿಂದಿನ ಕಾಲದಲ್ಲಿ ನಡೆದ ಕತೆ. ಒಬ್ಬ ಸೌದೆ ಒಡೆದು ಮಾರುವ ಮುದುಕ, ಸೌದೆ ಶೇಖರಿಸಲು ಕಾಡಿಗೆ ಹೋದ. ಸೌದೆ ಒಡೆದು ಒಡೆದು, ಬಹಳವಾಗಿ ದಣಿದುಹೋದ ಮುದುಕ ಒಂದು ಮರದ ನೆರಳಲ್ಲಿ ವಿಶ್ರಮಿಸಲು ಕುಳಿತ. ತನ್ನ ಜೀವನದಲ್ಲಿ ಕಳೆದುಹೋದ ದಿನಗಳನ್ನು ಕುರಿತು ಚಿಂತಿಸತೊಡಗಿದ. ಇದ್ದಕ್ಕಿದ್ದಂತೆ ಎಲ್ಲಿಂದಲೋ ಏನೋ, ನೀರು ಜುಳು ಜುಳು ಶಬ್ದಮಾಡುತ್ತಾ ಹರಿದು ಬೀಳುತ್ತಿರುವ ಮಧುರವಾದ ಶಬ್ದ ಅವನಿಗೆ ಕೇಳಿಸಿತು. 'ಹತ್ತಿರದಲ್ಲಿ ಎಲ್ಲಾದರೂ ನೀರಿನ ಬುಗ್ಗೆ ಇದೆಯೆ?' ಎಂದು ಆಲೋಚಿಸಿದ. ಆ ನೀರು ಬೀಳುತ್ತಿರುವ ಶಬ್ದ ಕೇಳಿಸಿಕೊಂಡೇ ಅವನ ಮನಸ್ಸಿಗೆ ತಂಪಿನ ಅನುಭವವಾಯಿತು, ಶಾಂತವಾಯಿತು. ಅವನು ಮೆಲ್ಲಗೆ ಮೇಲೆದ್ದು, ಅತ್ತ ಇತ್ತ ಸ್ವಲ್ಪ ಹುಡುಕಾಟ ನಡೆಸುತ್ತಲೇ ಕಾಡಿನಲ್ಲಿ ಒಂದು ಕಡೆ ನೀರಿನ ಬುಗ್ಗೆ ಇರುವುದನ್ನು ಕಂಡ! ನೀರು ಕಂಡದ್ದೆ ಅವನಿಗೆ ವಿಪರೀತವಾದ ಬಾಯಾರಿಕೆಯ ಅನುಭವ ಆಯಿತು. ಬುಗ್ಗೆಯಿಂದ ಹರಿದು ಬರುತ್ತಿದ್ದ

ನೀರನ್ನು ತೃಪ್ತಿಯಾಗುವವರೆಗೆ ಕುಡಿದ. ನೀರು ಕುಡಿದದ್ದೇ ತಡ, ಒಂದು ಅದ್ಭುತ ಘಟಿಸಿತು! ಏನು ಆಶ್ಚರ್ಯ!! ಅವನ ಸುಕ್ಕುಗಟ್ಟಿದ್ದ ಚರ್ಮ, ವಯಸ್ಸಾದ ದೇಹ ಯೌವನ ತುಂಬಿಕೊಂಡು ಕಂಗೊಳಿಸಿತು! ಅವನು ತನ್ನ ಕಳೆದುಹೋಗಿದ್ದ ಯೌವನವನ್ನು ಮತ್ತೆ ಪಡೆದಿದ್ದ! ತನ್ನಲ್ಲಾದ ಮಾರ್ಪಾಡಿನಿಂದಾಗಿ ಅವನು ಬಹಳವಾಗಿ ಆನಂದಿಸಿದ. ಓಡೋಡುತ್ತಲೇ ಮನೆಗೆ ಬಂದ. ಅವನ ಮುದಿ ಹೆಂಡತಿ ಅವನನ್ನು ನೋಡಿ ಅವಾಕ್ಕಾಗಿಹೋದಳು. ಬುಗ್ಗೆಯ ನೀರಿನಲ್ಲಿ ಈ ರೀತಿಯ ಅಸಾಧಾರಣ ಶಕ್ತಿ ಇದೆ ಎನ್ನುವುದನ್ನು ಕೇಳಿದ ಮುದುಕಿ, ಯೌವನ ಬಯಸಿ ತಾನೂ ಕಾಡಿನತ್ತ ನಡೆದಳು. ಬುಗ್ಗೆಯ ನೀರನ್ನು ಕುಡಿದ ಕೂಡಲೇ ಮುದುಕಿಯೂ ಸಹ ತನ್ನ ಹಿಂದಿನ ಯೌವನ ಮರಳಿ ಪಡೆದು ಆನಂದದಿಂದ ಪುಳಕಿತಳಾದಳು. ಇನ್ನು ಸ್ವಲ್ಪ ಎಳೆವಯಸ್ಸಿಗೆ ಹಿಂತಿರುಗುವ ಆಸೆಯಿಂದ ಅವಳು ಬುಗ್ಗೆಯ ನೀರನ್ನು ಮತ್ತೆ ಮತ್ತೆ ಕುಡಿಯತೊಡಗಿದಳು. ಎಷ್ಟು ಹೊತ್ತಾದರೂ ಹಿಂತಿರುಗಿ ಬಾರದ ಮುದುಕಿಯ ಬಗ್ಗೆ ಚಿಂತಿತನಾದ, ಸದ್ಯದಲ್ಲಿ ಯುವಕನಾಗಿದ್ದ ಮುದುಕ, ಹೆಂಡತಿಯನ್ನು ಹುಡುಕುತ್ತಾ ಕಾಡಿಗೆ ಹೊರಟ. ನೀರಿನ ಬುಗ್ಗೆಯ ಬಳಿಗೆ ಬಂದು ಅವಳನ್ನು ಕೂಗಿ ಕರೆದ. ಎಲ್ಲಿಯೂ

ಮುದುಕಿಯ ಸುಳಿವೇ ಇಲ್ಲ! ನೀರಿನ ಸಮೀಪವೇ ಒಂದು ಪುಟ್ಟ ಮಗು ಮಲಗಿದೆ. 'ಕ್ಯಾವ್ ಕ್ಯಾವ್' ಎಂದು ಅಳುತ್ತಾ ಕಣ್ಣೀರು ಸುರಿಸುತ್ತಿದೆ. ಮುದುಕಿ ಮೂರ್ಖತನದ ಕೆಲಸ ಮಾಡಿದ್ದಾಳೆಂದು ಅವನಿಗೆ ಅರ್ಥವಾಯಿತು. ಅಧಿಕವಾಗಿ ನೀರು ಕುಡಿದ ಫಲ, ಮುದುಕಿ ಎಳೆಯ ಕೂಸಾಗಿ ಹೋಗಿದ್ದಳು. ಈಗ ಇನ್ನೇನೂ ಮಾಡುವಂತಿಲ್ಲ. ಮುದುಕ ಆ ಎಳೆಮಗುವಿನ ರೂಪದ ಮುದುಕಿಯನ್ನು ಎತ್ತಿ ಕೊಂಡು ಮನೆಗೆ ಬಂದ. ಮನೆಯಲ್ಲಿ ಅವಳನ್ನು ಪ್ರೀತಿವಾತ್ಸಲ್ಯಗಳಿಂದ ಪಾಲನೆ-ಪೋಷಣೆ ಮಾಡಿ ದೊಡ್ಡವಳನ್ನಾಗಿ ಮಾಡತೊಡಗಿದ. *

ಬಂಗಾಳಿ ಮೂಲ : ರಾಜಕೃಷ್ಣ ಭಟ್ಟಾಚಾರ್ಯ
ಚಿತ್ರ : ಜುಂಕೋ ಭಟ್ಟಾಚಾರ್ಯ
ಕನ್ನಡಾನುವಾದ : ಗಿರಿಜಾದೇವಿ

ಸ್ವಾಮಿ ವಿವೇಕಾನಂದರು ನಿರೂಪಿಸಿದ

ನೀತಿ ಕಥೆಗಳು

ಡಾ. ಕೆ. ಅನಂತರಾಮು

ಮಹಾರಾಜನ ಮರಣಶಾಸನ

ದಕ್ಷಿಣಭಾರತದಲ್ಲಿ ಬಲಶಾಲಿಯಾದ ರಾಜಮನೆತನವೊಂದಿತ್ತು. ಆ ಮನೆತನಕ್ಕೆ ಸೇರಿದ ಪ್ರಮುಖ ವ್ಯಕ್ತಿಗಳ ಜಾತಕಗಳನ್ನು ಅವರು ಹುಟ್ಟಿದಂದೇ ಜೋತಿಷ್ಕರಿಂದ ಲೆಕ್ಕಹಾಕಿಸಿ ಬರೆಯಿಸಿಡುವ ಸಂಪ್ರದಾಯ ಅವರಲ್ಲಿ ರೂಢಿಯಲ್ಲಿತ್ತು. ಆ ಜಾತಕಗಳಲ್ಲಿ ಮುಂದೆ ನಡೆಯಬಹುದಾದ ಕೆಲವು ಪ್ರಮುಖ ಘಟನೆಗಳ ವಿವರಗಳೂ ಇರುತ್ತಿದ್ದವು. ತರುವಾಯದ ಕಾಲದಲ್ಲಿ ಆ ಮನೆತನದಲ್ಲಿ ನಡೆಯುತ್ತಿದ್ದ ಘಟನೆಗಳನ್ನು ಈ ಹಿಂದೆ ಜೋತಿಷ್ಕರು ಬರೆದಿಟ್ಟಿದ್ದ ಘಟನೆಗಳೊಂದಿಗೆ ಹೋಲಿಸಿ ನೋಡುತ್ತಿದ್ದರು. ಹೀಗೆ ಸಾವಿರಾರು ವರ್ಷಗಳು ತುಲನೆ ಮಾಡಿದ ಬಳಿಕ, ಕೆಲವು ಹೊಂದಾಣಿಕೆಗಳನ್ನು ಅವರು ಕಂಡುಕೊಂಡರು. ಅವುಗಳ ಆಧಾರದ ಮೇಲೆ, ಆ ಕಾಲದ ಜೋತಿಷ್ಕರು ಒಂದು ದೊಡ್ಡ ಗ್ರಂಥವನ್ನೇ ಬರೆದರು. ಪ್ರಬಲವಾಗಿದ್ದ ಆ ರಾಜವಂಶವು ಅಳಿದು ಹೋದರೂ, ಜ್ಯೋತಿಷ್ಕರ ವಂಶವು ಮಾತ್ರ ಮುಂದುವರೆಯಿತು. ಆ ಗ್ರಂಥವು ಅವರ ಸೊತ್ತಾಯಿತು. ಹೀಗೆ ಹೇಳುತ್ತಾ ವಿವೇಕಾನಂದರು ಆ ರಾಜಮನೆತನ ಯಾವುದು, ಆ ಗ್ರಂಥ ಯಾವುದು ಎಂಬುದನ್ನು ಪ್ರಸ್ತುತದಲ್ಲಿ ಹೇಳದಿದ್ದರೂ ಜ್ಯೋತಿಷ್ಯಶಾಸ್ತ್ರವು ಉಗಮಗೊಂಡ ಪರಿಯನ್ನು ತಮ್ಮದೇ ಆದ ಕಾಣ್ಕೆಯಿಂದ ಮೇಲಿನಂತೆ ವಿವರಿಸಿದ್ದಾರೆ. ಜೋತಿಷ್ಯದ ವಿವರಣೆಗಳಿಗೆಲ್ಲ ಅತಿಯಾದ ಗಮನಕೊಡುವುದು ಒಂದು ಮೂಢನಂಬಿಕೆ. ಅದು ಹಿಂದೂಗಳಿಗೆ ಹೆಚ್ಚಿನ ಹಾನಿಯನ್ನುಂಟು ಮಾಡಿದೆ ಎಂಬುದಾಗಿಯೂ ವಿವೇಕಾನಂದರು ಅಭಿಪ್ರಾಯಪಟ್ಟಿದ್ದಾರೆ. ಈ ಮೇಲಿನ ವಿಷಯಗಳನ್ನು ಮನನಮಾಡಲು ಅನುಕೂಲವಾಗುವಂತೆ 'ಜ್ಯೋತಿಷಿಯನ್ನು ಕುರಿತು ಒಂದು ಹಳೆಯ ಕಥೆ ಇದೆ'ಎನ್ನುತ್ತಾ ಅದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಂಡಿದ್ದಾರೆ.

ಜ್ಯೋತಿಷಿಯೊಬ್ಬನು ಭವಿಷ್ಯವನ್ನು ಹೇಳುವುದರಲ್ಲಿ ತುಂಬಾ ನಿಷ್ಣಾತನಾಗಿದ್ದನು. ತನ್ನ ದೇಶಸಂಚಾರದ ಕಾಲದಲ್ಲಿ

ಒಮ್ಮೆ ಅವನು ರಾಜನೊಬ್ಬನ ಅರಮನೆಯನ್ನು ಹೊಕ್ಕನು. ಆ ದೊರೆಗೂ ಜೋತಿಷ್ಯವೆಂದರೆ ಬಹಳ ನಂಬಿಕೆಯಿತ್ತು. ಹೊಸದಾಗಿ ಬಂದ ಆ ಜೋಯಿಸನನ್ನು ಕುರಿತು, ''ನನ್ನ ಆಯುಷ್ಯ ಇನ್ನೆಷ್ಟು ವರ್ಷ ಎಂಬುದನ್ನು ತಿಳಿದು ಹೇಳಿ ಜೋಯಿಸರೇ'' ಎಂದು ಕೇಳಿಕೊಂಡನು. ಜೋಯಿಸನಾದರೋ ಚೆನ್ನಾಗಿ ಲೆಕ್ಕಹಾಕಿ, ''ನಿಮ್ಮ ಆಯುಷ್ಯ ಇನ್ನು ಆರೇ ತಿಂಗಳು ಮಹಾಪ್ರಭು, ಏಳನೆಯ ತಿಂಗಳಿಗೆ ನೀವು ಸ್ವರ್ಗಸ್ಥರಾಗುತ್ತೀರಿ'' ಎಂದು ತೆಗೆದ ಬಾಯಿಗೆ ಹೇಳಿ ಅಲ್ಲಿಂದ ಹೊರಟುಬಿಟ್ಟನು. ಜ್ಯೋತಿಷಿಯ ಮಾತುಗಳು ದೊರೆಗೆ ಬರಸಿಡಿಲಿನಂತೆ ಎರಗಿದವು. ಅವನ ಜಂಘಾಬಲವೇ ಉಡುಗಿಹೋಯಿತು. ''ಅಯ್ಯೋ ನಾನು ಸತ್ತೆ, ಅಯ್ಯೋ ನಾನು ಕೆಟ್ಟೆ'' ಎಂದು ಕಂಗೆಟ್ಟು ಆಗಲೇ ಸಾವಿನ ಹಾಸುಗೆಯಲ್ಲಿ ಮಲಗಿಬಿಟ್ಟನು; ಕೊರಕೊರಗಿ ಕೋಳಿಯಾಗಿಬಿಟ್ಟನು.

ರಾಜನ ದುಃಸ್ಥಿತಿಯನ್ನು ಕಂಡ ವಿವೇಕಿಯಾದ ಅವನ ಮಂತ್ರಿಯು, ''ಪ್ರಭುಗಳೇ, ಆ ಜೋತಿಷ್ಯವನ್ನೆಲ್ಲಾ ನಂಬಬೇಡಿ; ಅವೆಲ್ಲ ಸುಳ್ಳುಪೊಳ್ಳುಗಳು. ಕಾಕತಾಳನ್ಯಾಯವೆನ್ನುತ್ತಾರಲ್ಲ, ಹಾಗೆ ಎಲ್ಲೋ ಒಮ್ಮೆ ನಿಜವಾಗಿಬಿಟ್ಟರೆ, ಎಲ್ಲ ಸಂದರ್ಭಗಳಲ್ಲೂ ನಿಜವಾಗುತ್ತದೆ ಎಂದೇನೂ ನಿಗದಿಯಿಲ್ಲ. ಆ ಜೋಯಿಸನೊಬ್ಬ ಅವಿವೇಕಿ, ಮೂರ್ಖ. ನೀವು ಏಳನೆಯ ತಿಂಗಳಿಗೆ ಖಂಡಿತ ಸಾಯುವುದಿಲ್ಲ, ನಿಶ್ಚಿಂತರಾಗಿರಿ'' ಎಂದು ಸಾಂತ್ವನದ ಮಾತುಗಳನ್ನು ಹೇಳಿದನು. ಆದರೆ ದೊರೆಯ ಕಳವಳ ಮಾತ್ರ ದೂರವಾಗಲಿಲ್ಲ. ಆಗ ಮಂತ್ರಿಯು ಆ ಜೋಯಿಸನನ್ನು ಹುಡುಕಾಡಿಸಿ, ಮತ್ತೆ ಅರಮನೆಗೆ ಬರಮಾಡಿಕೊಂಡನು. ''ಜೋಯಿಸರೇ, ನೀವು ಹೇಳಿರುವ ಮರಣ ಶಾಸನದಿಂದ ನಮ್ಮ ಪ್ರಭುಗಳು ಬಹಳ ಕಂಗಾಲಾಗಿದ್ದಾರೆ, ನಿಮ್ಮ ಲೆಕ್ಕಾಚಾರವನ್ನೆಲ್ಲಾ ಇನ್ನೊಮ್ಮೆ ಪರೀಕ್ಷೆಮಾಡಿ ನೋಡುತ್ತೀರಾ?'' ಎಂದು ವಿನಂತಿಸಿಕೊಂಡನು. ಆ ಜೋಯಿಸನಿಗಂತೂ ತನ್ನ ಲೆಕ್ಕಾಚಾರದ ಮೇಲೆ ನೂರಕ್ಕೆ ನೂರು ನಂಬಿಕೆಯಿತ್ತು. ಆದರೂ ಮಂತ್ರಿಯ ಆಜ್ಞೆಯ ಪರಿಪಾಲನೆಗಾಗಿ, ಪುನಃ ದೀರ್ಘಕಾಲ ಲೆಕ್ಕಾಚಾರ ಮಾಡಿ, ''ಎಲ್ಲವೂ ಸರಿಯಾಗಿದೆ ಮಂತ್ರಿಗಳೇ, ದೊರೆಗಳಿಗೆ ಆರು ತಿಂಗಳು ಕಳೆದು, ಏಳನೆಯ ತಿಂಗಳಿಗೆ ಸಾವು ಖಚಿತ'' ಎಂದು ಹಳೆಯ ರಾಗವನ್ನೇ ಹಾಡಿದನು. ಮರಣವಿಚಾರವನ್ನು ಹಾಗೆ ಮುಖಕ್ಕೆ ಹೊಡೆದಂತೆ ಹೇಳಬಾರದು ಎಂಬ ಪ್ರಾಥಮಿಕ ಪ್ರಜ್ಞೆಯೂ ಆ ಜೋಯಿಸನಲ್ಲಿರಲಿಲ್ಲ. ಆಗಂತೂ ಮಹಾರಾಜನು ಪಾತಾಳಕ್ಕೆ ಕುಸಿದುಹೋದನು.

ಆಮೇಲೆ ಮಂತ್ರಿಯು ಜೋಯಿಸನನ್ನೇ ಕುರಿತು, ''ನಿಮ್ಮ ಆಯುಷ್ಯ ಎಷ್ಟು, ನೀವು ಇನ್ನೆಷ್ಟು ವರ್ಷ ಬದುಕುತ್ತೀರಿ ಎಂಬುದನ್ನೆಲ್ಲ ಏನಾದರೂ ನೀವು ಲೆಕ್ಕಹಾಕಿದ್ದೀರಾ?'' ಎಂದು ಕೇಳಿದನು. ಆಗ ಜೋಯಿಸನು, ''ನನ್ನ ಜಾತಕದ ಪ್ರಕಾರ ನಾನು ಇಲ್ಲಿಂದ ಮುಂದಕ್ಕೆ ಹನ್ನೆರಡು ವರ್ಷ ಬದುಕಿರುತ್ತೇನೆ'' ಎಂದನು. ತಕ್ಷಣವೇ ಮಂತ್ರಿಯು ತನ್ನ ಸೊಂಟದಲ್ಲಿದ್ದ ಖಡ್ಗವನ್ನು ಸರಕ್ಕನೆ ಸೆಳೆದು, ಆ ಜೋಯಿಸನ ರುಂಡವನ್ನು ಕಚಕ್ಕನೆ ಕಡಿದುರುಳಿಸಿಬಿಟ್ಟನು. ದೊರೆಯು ಹೌಹಾರುತ್ತ, ''ಇದೇನು ಮಾಡಿಬಿಟ್ಟಿರಿ ಮಂತ್ರಿಗಳೇ!'' ಎಂದು ಚೀರಿದನು. ಆಗ ಮಂತ್ರಿಯು, ''ಸುಮ್ಮನಿರಿ ಮಹಾಪ್ರಭು, ಕಂಡಿದ್ದೇನೆ, ಹನ್ನೆರಡು ವರ್ಷ ಬದುಕಿರುತ್ತೇನೆಂದವನು ಹನ್ನೆರಡು ಗಳಿಗೆಯೂ ಬದುಕಲಿಲ್ಲ ನೋಡಿ, ಅವನು ನಿಮ್ಮ ಆಯುಷ್ಯವನ್ನು ಕುರಿತು ಹೇಳಿದ ಭವಿಷ್ಯವೆಲ್ಲವೂ ಬರೀ ಬುರುಡೆಯೆಂಬುದು ನಿಮ್ಮ ಮನಸ್ಸಿಗೆ ಈಗಲಾದರೂ ಬಂದಿತಲ್ಲವೆ?'' ಎಂದನು. ಆ ಘಟನೆಯಿಂದಾಗಿ ರಾಜನಿಗೆ, 'ಹೌದು, ಅವನು ಹೇಳಿದ ಭವಿಷ್ಯವೆಲ್ಲ ಸುಳ್ಳು' ಎಂದು ದೃಢಪಟ್ಟು ಮನಸ್ಸು ಶಾಂತವಾಯಿತು.

ಭರತಖಂಡವು ನೆಮ್ಮದಿಯಿಂದ ಬಾಳಬೇಕಾದರೆ ಸುಳ್ಳು ಭವಿಷ್ಯಗಳಿಂದ ನಾವು ಪ್ರಭಾವಿತರಾಗಬಾರದು. ನಮ್ಮ ಅದೃಷ್ಟವನ್ನು ಹುಡುಕಿಕೊಡಲು ತಾರೆಗಳ ತಂಟೆಯೇಕೆ! ಎಲ್ಲೋ ಕಿಂಚಿತ್ತು ಪ್ರಭಾವ ನಮ್ಮ ಮೇಲೆ ಆ ತಾರೆಗಳ ದೆಸೆಯಿಂದ ಇದ್ದರೂ, ಅದರಿಂದ ನಾವು ಭಯಗ್ರಸ್ತರಾಗಬಾರದು. ಯಾವುದು ನಮ್ಮ ಆಧ್ಯಾತ್ಮಿಕ, ಮಾನಸಿಕ ಮತ್ತು ದೈಹಿಕ ದೌರ್ಬಲ್ಯಕ್ಕೆ ಕಾರಣವಾಗುತ್ತದೆಯೋ, ಅದನ್ನು ನಮ್ಮ ಕಾಲು ಬೆರಳುಗಳಿಂದಲೂ ಮುಟ್ಟಬಾರದು. ಅದು ನಮ್ಮ ಶಕ್ತಿಯನ್ನು ಹ್ರಾಸಗೊಳಿಸುತ್ತದೆ. ಜೋತಿಷ್ಯ ಮುಂತಾದವುಗಳಲ್ಲಿ ಕಿಂಚಿತ್ತು ಸತ್ಯಾಂಶವಿದ್ದರೂ, ನಾವು ಅದನ್ನು ಅಸಡ್ಡೆಯಿಂದಲೇ ನೋಡಬೇಕು ಎಂದು ವಿವೇಕಾನಂದರು ಈ ಕಥಾಸಂದರ್ಭದಲ್ಲಿ ಹಣೇಬರಹದ ಹಣೇಬರಹವನ್ನೇ ಬರೆದಿಟ್ಟಿದ್ದಾರೆ. *

ಅಹಲ್ಯಾಬಾಯಿಯ ವ್ಯಕ್ತಿತ್ವ

ನಮ್ಮ ಸಂಸ್ಕೃತಿಯ ಪುನರುತ್ಥಾನದಲ್ಲಿ ಹಲವು ಮಹತ್ಕಾರ್ಯಗಳನ್ನು ಮಾಡಿದ ಮಹಿಳೆ ಅಹಲ್ಯಾಬಾಯಿ ಹೋಳ್ಕರ್ ದೈವೀಸಂಪನ್ನೆ; ಸರಳ, ಗಂಭೀರ ವ್ಯಕ್ತಿತ್ವದವಳು. ಅವಳ ಬಳಿಗೊಬ್ಬ ಕವಿ ತನ್ನ ಕವಿತೆಯೊಂದಿಗೆ ಬಂದ; ಅವಳ ಗುಣಗಾನ ಮಾಡುವ ತನ್ನ ಕಾವ್ಯವನ್ನು ಓದತೊಡಗಿದ. ಅದನ್ನು ಕೇಳಿದ ಅಹಲ್ಯಾಬಾಯಿ, ''ನನ್ನ ಗುಣಗಾನದ ಹೊರತಾಗಿ ಈ ಕೃತಿಯಲ್ಲಿ ಬೇರೇನಿದೆ?'' ಎಂದು ಕೇಳಿದಳು. ''ತಾಯೆ, ಇದರಲ್ಲಿ ಆದಿಯಿಂದ ಅಂತ್ಯದವರೆಗೂ ತಮ್ಮ ಮಹಿಮೆಯ ವರ್ಣನೆಯಿದೆ. ತಾವು ಎಷ್ಟೊಂದು ದೊಡ್ಡವರು!'' ಎಂದ ಕವಿ, ಓದು ಮುಂದುವರಿಸಿದ. ಆಗ ತಡೆದ ಅಹಲ್ಯಾಬಾಯಿ, ''ಸಾಕುಮಾಡಿ. ಇಲ್ಲಿ ತನ್ನಿ ನಿಮ್ಮ ಕಾವ್ಯವನ್ನು!'' ಎಂದಳು. ತನ್ನ ಕಾವ್ಯವನ್ನು ಅವಳ ಮುಂದಿಟ್ಟು ಕೈಮುಗಿದು ನಿಂತ ಕವಿ ಮಹಾಶಯ. ಅಹಲ್ಯಾಬಾಯಿ ಗಂಭೀರವಾಗಿ, ''ನನ್ನನ್ನು ವರ್ಣಿಸುವ ಬದಲು ನಿಮ್ಮ ಲೇಖನಿಯು ಸರ್ವಶಕ್ತನಾದ ಭಗವಂತನನ್ನು ವರ್ಣಿಸಿದ್ದರೆ ನಿಮ್ಮ ಶ್ರಮ ಹಾಗೂ ಬದುಕು ಸಾರ್ಥಕವಾಗುತ್ತಿತ್ತು. ನೀವಿನ್ನು ಹೊರಡಿ, ನಿಮಗೇನೂ ಸಿಗದು. ಈ ಕಾವ್ಯವನ್ನು ನರ್ಮದೆಗೆ ಅರ್ಪಿಸಲಾಗುವುದು'' ಎಂದಳು. ಅದನ್ನು ನರ್ಮದೆಯಲ್ಲಿ ಮುಳುಗಿಸಲಾಯಿತು; ಕವಿ ಪೆಚ್ಚುಮೋರೆ ಹಾಕಿಕೊಂಡು ಹೊರಟುಹೋದ. *(ಸಂಗ್ರಹ)*

ಕವನ

ಅವನ ಪದ ಸೋಂಕಿದರೆ ಶಿವನಾಗನೇ ಜೀವ !

ಸ್ವಾಮಿ ಹರ್ಷಾನಂದ

ನಾನೊಂದು ಕಾಡಲ್ಲಿ
ಬಿದಿರಾಗಿ ಬಿದ್ದಿದ್ದೆ
ಮಳೆಯಲ್ಲಿ ನೆನೆಯುತ್ತ
ಬಿಸಿಲಲ್ಲಿ ಬತ್ತುತ್ತ
ಬಸವಳಿದು ಸತ್ತಿದ್ದೆ ॥ ೧ ॥

ಕಾಡಲ್ಲಿ ಬರುತಿದ್ದ
ಜನರೆಲ್ಲ ನನ್ನನ್ನು
ತುಳಿತುಳಿದು ತುಳಿತುಳಿದು
ಹತ್ತಿಕ್ಕಿ ಮೆಟ್ಟುತ್ತ
ಪೋಗುತಿರ್ದರು ಅಯ್ಯ ॥ ೨ ॥

ಅಂದೊಂದು ದಿನದಂದು
ಕರಿಯನಾದರು ಚಂದ
ಪೋರನೊಬ್ಬನು ಬಂದ
ನನ್ನ ಬೆನ್ನಲ್ಲಿ ನಿಂದು
ನೋಡಿದನು ಕೆಳಗೆ ॥ ೩ ॥

ಪಾದವನು ಚುಚ್ಚಿದ್ದ
ನನ್ನನ್ನು ನೋಡಿದೆಡೆ
ಬಿಸುಡಲೋಸುಗ ಬೇಗ
ಕರದಿಂದ ಎತ್ತುತ್ತ
ದಿಟ್ಟಿಸಿದನಾ ಬಾಲ ॥ ೪ ॥

ನೋಡುತ್ತ ನೋಡುತ್ತ
ಮುಖದಲ್ಲಿ ಸಿಟ್ಟಿಂದ
ಮೂಡಿದ್ದ ಗಂಟುಬ್ಬು
ಬಲು ಬೇಗ ತೆರವಾಗಿ
ಪದ್ಮವಾಯಿತು ವದನ ॥ ೫ ॥

ಆಗಲೇ ನನ್ನನ್ನು
ಅಕ್ಕರದಿ ಮನೆಗೊಯ್ದು
ಮಜ್ಜನವನೆರೆಯುತ್ತ
ತೂತನ್ನು ಕೊರೆದಿರಲು
ಸಿರಿವಾದ್ಯವಾದೆ ॥ ೬ ॥

ತುಟಿಗಿತ್ತು ಎನ್ನನ್ನು
ಊದಿರಲು ಉಸಿರನ್ನು
ಸ್ವರಸಪ್ತ ಸಂಗೀತ
ಹೊರಬಿತ್ತು ಎನ್ನಿಂದ
ನಾ ಧನ್ಯನಾದೆ ॥ ೭ ॥

ಕಾಡಲ್ಲಿ ಬಿದ್ದಿದ್ದ
ತುಳಿತದಿಂ ನೊರಗಿದ್ದ
ಯಾರಿಗೂ ಬೇಡಾದ
ನಾನಿಂದು ಅತಿಮೂಲ್ಯ
ವಸ್ತುವಾದೆ ॥ ೮ ॥

ಎಲೆ ಸಖನೆ ನೀನಿಂದು
ಹುಲುಮನುಜ ನಾನೆಂದು
ಗೋಳಿಡುತಲಿರಲಾಗ
ದುಃಖಸಾಸಿರವನ್ನು
ತ್ಯಜಿಸಲಾರೆ ॥ ೯ ॥

ಆದರೀಗಲೆ ನೀನು
ಪೋರನನು ಬಳಿಸಾರಿ
ಮರೆಹೊಕ್ಕು ಬೇಡಿದರೆ
ಪೊರೆಯದಿರುವನೆ ಬೇಗ
ನೋಡು ಅವನಾಣೆ ॥ ೧೦ ॥

ಪರುಷಮಣಿ ಸೋಂಕಿದರೆ
ಕನಕವಾಗದೆ ಲೋಹ
ಅವನ ಪದ ಸೋಂಕಿದರೆ
ಶಿವನಾಗನೇ ಜೀವ
ಅಹುದು ಅಹುದು ॥ ೧೧ ॥



ಪುಸ್ತಕ ಪರಿಚಯ

'ಅಂತರ್ಮುಖಿ'–ಸ್ವಾಮಿ ಬ್ರಹ್ಮಾನಂದರ ಸ್ಮೃತಿ ಸಂಕಲನ

ದುರ್ಲಭಂ ತ್ರಯಮೇವೈತದ್ದೈವಾನುಗ್ರಹ ಹೇತುಕಂ ।
ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ ॥

ಶ್ರೀಶಂಕರಾಚಾರ್ಯರು ಹೇಳುವಂತೆ ದೈವಾನುಗ್ರಹಲ್ಲದೆ ಮನುಷ್ಯಜನ್ಮ , ಮಹಾಪುರುಷರ ಆಸರೆ ದೊರಕುವುದು ಬಹಳ ಕಷ್ಟ.

ಮಾನವಶರೀರ ಸುಲಭವಾಗಿ ದೊರಕುವುದಿಲ್ಲ. ಎಷ್ಟೋ ಜನ್ಮಗಳ ಪುಣ್ಯದಿಂದ ದೊರಕಿದ ಈ ವಿಶಿಷ್ಟ ಮಾನವ ಶರೀರದ ಪ್ರಯೋಜನ ವಾದರೂ ಏನು? ಎಂದರೆ ಭಗವಂತನನ್ನು ಹೊಂದುವುದೇ ಇದರ ಪ್ರಯೋಜನ (ತತ್ವಾಪ್ತ್ಯೈಕ ಪ್ರಯೋಜನಂ). ಈ ಜೀವಿತ ಅವಧಿ ಯಲ್ಲಿ ಪಡೆಯುವ ಮಿಕ್ಕ ಎಲ್ಲಾ ರೂಪ, ಆರೋಗ್ಯ, ಆಸ್ತಿ, ಅಧಿಕಾರ, ಅಂತಸ್ತು ಆನುಷಂಗಿಕವಾದವು. ಶ್ರೀರಾಮಕೃಷ್ಣರೂ ಭಗವಂತನ ನಾಮವೊಂದನ್ನು ಬಟ್ಟೆ ತುದಿಗೆ ಕಟ್ಟಿಕೊಂಡು ಎಲ್ಲವನ್ನೂ ಮಾಡಿ ಎನ್ನುತ್ತಾರೆ. ಗೀತಾಚಾರ್ಯ ಶ್ರೀಕೃಷ್ಣನೂ 'ನನ್ನಲ್ಲಿ ಮನಸ್ಸು ಬುದ್ಧಿ ಗಳನ್ನರ್ಪಿಸಿ, ನನ್ನನ್ನೇ ನೆನೆಯುತ್ತಾ ಎಲ್ಲಾ ಕೆಲಸವನ್ನೂ ಮಾಡು' ಎನ್ನುತ್ತಾನೆ. ಇಷ್ಟು ಮಾಡಲು ಮನಸ್ಸು–ಬುದ್ಧಿಗಳಿಗೆ ತರಬೇತಿ, ಸಾಧನೆ, ಅಭ್ಯಾಸ ಬೇಕು. ಅಂತಹ ಮಾರ್ಗದಲ್ಲಿ ಸಂಚರಿಸಿ ಅನುಭವ ಇರುವವರಿಂದಲ್ಲದೆ ಬೇರೆಯವರಿಂದ ಅದು ಹೇಗೆತಾನೆ ದೊರಕೀತು? ಶ್ರೀರಾಮಕೃಷ್ಣರ ಮಾನಸಪುತ್ರರಾದ ಸ್ವಾಮಿ ಬ್ರಹ್ಮಾನಂದರು ಇಂತಹ ಮಾರ್ಗದಲ್ಲಿ ಲೀಲಾಜಾಲ ಸಂಚಾರ ಹೊಂದಿದ್ದ ಬ್ರಹ್ಮಾನುಭವಿಗಳು. ಶ್ರೀರಾಮಕೃಷ್ಣರು ಅವರಿಗೆ ಸಾಧನಾಮಾರ್ಗದ ಅನೇಕ ರಹಸ್ಯಗಳನ್ನು ಉಪದೇಶಿಸಿದ್ದರು. ಸ್ವಾಮಿ ಬ್ರಹ್ಮಾನಂದರು ತಮ್ಮ ತಪೋಮಯ ಜೀವನದ ಕಠಿಣತಮ ಸಾಧನೆಯ ಪರಾಕಾಷ್ಠೆಯಿಂದ ಆ ಎಲ್ಲಾ ರಹಸ್ಯ ಮರ್ಮಗಳನ್ನೂ ಅನುಭವಿಸಿದ್ದರು. ಅವರು ಅದನ್ನು ತಮ್ಮ ಭಕ್ತರಿಗೆ, ಶಿಷ್ಯರಿಗೆ ಹೇಳಿಕೊಟ್ಟರು. ಹೀಗೆ ಸ್ವಾಮಿ ಬ್ರಹ್ಮಾನಂದರಿಂದ ಉಪದೇಶ ಪಡೆದು ಸಾಧನೆ ಮಾಡಿದ ಮಹಾತ್ಮರು ಅನೇಕರು. ಅವರೆಲ್ಲರ ಅನುಭವಗಳ ಲಿಖಿತ ರೂಪವೇ **'ಅಂತರ್ಮುಖಿ.'** ಇದು 'ಗುರುವತ್ ಗುರುಪುತ್ರ' ಎಂದು ಸ್ವಾಮಿ ವಿವೇಕಾನಂದರಿಂದ ಗೌರವಿಸಲ್ಪಟ್ಟ ಸ್ವಾಮಿ ಬ್ರಹ್ಮಾನಂದರ ದಿವ್ಯಸ್ಮರಣೆಯೊಡಗೂಡಿದೆ.

'ಅಂತರ್ಮುಖಿ' – ಹೆಸರೇ ಸೂಚಿಸುವಂತೆ, ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಅಂತಃಕರಣಗಳನ್ನೆಲ್ಲಾ ಒಳಸೆಳೆದು ತ್ಯಾಗಜೀವನದ, ಆಧ್ಯಾತ್ಮಿಕ ಆದರ್ಶದ ಸಾಕಾರಮೂರ್ತಿಯ, ಮಾತು–ಮನಗಳನ್ನು ಮೀರಿದ ಮೌನಸಾಮ್ರಾಜ್ಯದ ಪರಮಾನಂದ ಸಂಪೂರ್ಣ ಅಂತ ಸ್ಸಾಮ್ರಾಜ್ಯ ಸಾರ್ವಭೌಮನ ನಡೆಯನ್ನು ಬಿಂಬಿಸುತ್ತದೆ. ಇದರಲ್ಲಿ ಒಟ್ಟು ೭೦ ಲೇಖನಗಳಿವೆ. ಮೊದಲ ಭಾಗದ ೫೮ ಲೇಖನಗಳನ್ನು 'ಉದ್ಬೋಧನ ಕಾರ್ಯಾಲಯ'ದಿಂದ ಪ್ರಕಟಿತವಾಗಿದ್ದ **'ಬ್ರಹ್ಮಾನಂದೇರ್ ಸ್ಮೃತಿ ಕಥಾ'** ಕೃತಿಯಿಂದ ಭಾಷಾಂತರಿಸಲಾಗಿದೆ. ಎರಡನೇ ಭಾಗದ ೧೨ ಲೇಖನಗಳನ್ನು 'Swami Brahmananda as We Saw Him' ಎಂಬ ಶೀರ್ಷಿಕೆಯಲ್ಲಿ ರಾಮಕೃಷ್ಣ ಮಠ, ಚೆನ್ನೈ ಪ್ರಕಟಿಸಿರುವ ಕೃತಿಯಿಂದ ಭಾಷಾಂತರಿಸಲಾಗಿದೆ. ಅನುವಾದವು ಸರಳವೂ ಸುಂದರವೂ ಆಕರ್ಷಕವೂ ಆಗಿದೆ.

ಸ್ವಾಮಿ ವಿವೇಕಾನಂದರಿಂದ 'ಆಧ್ಯಾತ್ಮಿಕ ಗಣಿ', 'ಆಧ್ಯಾತ್ಮಿಕ ಮೇರು ಶಿಖರ' ಎಂದು ಗೌರವಿಸಲ್ಪಟ್ಟ ಸ್ವಾಮಿ ಬ್ರಹ್ಮಾನಂದರ ಮಾರ್ಗದರ್ಶನದಲ್ಲಿ ಸಾಧನೆ ಮಾಡಿದ ಸಂನ್ಯಾಸಿಶಿಷ್ಯರ ಅದ್ಭುತ ಅನುಭವಕಥನ ಮೈ ರೋಮಾಂಚನಗೊಳಿಸುತ್ತದೆ. ಅದ್ಭುತ, ಆಶ್ಚರ್ಯಕರ, ಆಕರ್ಷಕ ವಿಚಾರಗಳನ್ನು ಓದುತ್ತಾ ಓದುತ್ತಾ ಭಾವತನ್ಮಯತೆಯಲ್ಲಿ ಅದರಲ್ಲೇ ಮೈಮನಗಳು ಮರೆಯುತ್ತವೆ. ಸ್ವಾಮಿ ಬ್ರಹ್ಮಾನಂದರ ಗಂಭೀರ ಭಾವಮಯ ಅವಸ್ಥೆ, ಸದಾ ದೈವೀ ಭಾವಮತ್ತತೆ, ಪತಿತರನ್ನೂ ಉದ್ಧರಿಸುವ ಹೃದಯವೈಶಾಲ್ಯತೆ, ಸಂಸಾರದ ಕುಲುಮೆಯಲ್ಲಿ ಬೆಂದು ಬವಣೆಪಡುತ್ತಿರುವ ಜೀವಿಗಳ ದುಃಖೋಪಶಮನಕ್ಕೆ ಹಾತೊರೆಯುವ ಕರುಣಾರಸಾರ್ದ್ರತೆ, ಭಗವಂತನಿಗಾಗಿ ಜೀವ ಮುಡಿಪಿಟ್ಟವರ ಸೇವೆಯಲ್ಲಿ ತತ್ಪರತೆ ಮೊದಲಾದ ಮಹಾನ್ ಗುಣಗಳನ್ನು ಭಾವಿಸುತ್ತಾ ಓದುಗ ಅಥವಾ ಸಾಧಕ ಆ ಕ್ಷಣದಲ್ಲಿ ಆಧ್ಯಾತ್ಮಿಕ ಔನ್ನತ್ಯವನ್ನು ತನ್ನ ಅಂತರಂಗದಲ್ಲಿ ಅನುಭವಿಸುತ್ತಾನೆ.

ಆಧ್ಯಾತ್ಮಿಕ ಜೀವನ ನಡೆಸುವ ಬಯಕೆ ಇರುವವರು ಎದುರಿಸುವ ನಾನಾ ಸಮಸ್ಯೆಗಳ ಪರಿಹಾರಕ್ಕಾಗಿ ಸ್ವಾಮಿ ಬ್ರಹ್ಮಾನಂದರು ನೀಡಿರುವ ಉತ್ತಮ ಸಲಹೆಗಳು, ಮಾರ್ಗದರ್ಶನಗಳು, ಸುಲಭ ಉಪಾಯಗಳು, ಮತ್ತು ಅವರನ್ನು ಆ ಪಥದಲ್ಲಿ ಪ್ರೀತಿ–ಅನುಕಂಪೆ, ಭಾವ–ಭರವಸೆಗಳಿಂದ ಅವರು ಕೈಹಿಡಿದು ನಡೆಸಿದ ಅನುಭವ ಕಥನಗಳು ಆಧ್ಯಾತ್ಮಿಕ ಜೀವನಾವಲಂಬಿಯಾದ ಪ್ರತಿಯೊಬ್ಬರಿಗೂ ಕರಾವಲಂಬವಾಗುತ್ತವೆ.

ಭಗವಂತನೊಬ್ಬನೇ ಸರ್ವಸ್ವ, ಅವನೇ ಎಲ್ಲರ ಏಕಮಾತ್ರ ಸಂಪತ್ತು, ಆಸರೆ; ಅವನಿಗೆ ಶರಣಾಗಿ, ಅವನ ಸ್ಮರಣ–ಮನನಗಳಲ್ಲಿ ಜೀವಿತ ಧನ್ಯವಾಗಬೇಕು ಎಂಬ ಸ್ವಾಮಿ ಬ್ರಹ್ಮಾನಂದರ ಭಾವ ೬೦೦ ಪುಟಗಳ ಈ ಬೃಹದ್ಗ್ರಂಥದಲ್ಲಿ ಆದ್ಯಂತವಾಗಿ ಬೆಸೆದುಹೋಗಿದೆ. ಆ ಕಾರಣದಿಂದ ಈ ಕೃತಿ ಸಾಧಕರೆಲ್ಲರ ಕೈಪಿಡಿ. ಈಶ್ವರ ನಾಮೋಚ್ಚಾರಣೆ ಮತ್ತು ಮಹಿಮೆಗಳ ಕೀರ್ತನೆ ಮಾಡುತ್ತಾ ಭಗವಂತನನ್ನು ಸರ್ವದಾ ಸ್ಮರಣೆಮಾಡಿ ಜೀವನವನ್ನು ಸಾರ್ಥಕ ಮಾಡಿಕೊಂಡು ಪರಿಪೂರ್ಣತೆ ಯಡೆಗೆ ನಡೆದು ಸುಫಲರೂ ಸಫಲರೂ ಆಗುವಂತೆ ಪ್ರೇರೇಪಿಸುವಲ್ಲಿ ಈ ಕೃತಿ **'ಅಂತರ್ಮುಖಿ'**ಯಾಗಿ ಸಾರ್ಥಕವಾಗಿದೆ. ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ ಮೈಸೂರು ಇಂತಹ ಮಹೋನ್ನತ ಮೇರು ಕೃತಿಯನ್ನು ಪ್ರಕಟಿಸಿ ಸಾಧಕಲೋಕಕ್ಕೆ ಮಹದುಪಕಾರ ಮಾಡಿದೆ.

–ಡಾ. ಕೆ.ಎಲ್. ಪ್ರಸನ್ನಾಕ್ಷೀ

ಕಥೆ: ಕೆ. ಸರಸ್ವತಿ

ಕಲೆ: ಶಂಕರ್

ವಿಶ್ವಾಮಿತ್ರನ ಅನುಕಂಪ

1 ಒಂದು ಸಲ ವಿಶ್ವಾಮಿತ್ರ ಋಷಿ ತನ್ನ ಶಿಷ್ಯರೊಂದಿಗೆ ಬರಪೀಡಿತ ಪ್ರದೇಶವನ್ನು ಹಾದುಹೋಗಬೇಕಾಗಿ ಬಂತು. ಅಲ್ಲಿ ಬಹಳ ಕಾಲದಿಂದ ಮಳೆಯಾಗಿರಲಿಲ್ಲ. ಆದಕಾರಣ ಅಲ್ಲೆಲ್ಲೂ ಮರಗಿಡಗಳು ಕಂಡುಬರಲಿಲ್ಲ.



2 ವಿಶ್ವಾಮಿತ್ರ ತನ್ನ ಶಿಷ್ಯಂದಿರ ಹಸಿವನ್ನು ನೀಗಿಸಲು ದಾರಿ ಹುಡುಕಿದ.



3 ಎಷ್ಟು ಹುಡುಕಿದರೂ ಶಿಷ್ಯಂದಿರಿಗೆ ಆಹಾರವೇನೂ ಸಿಗಲಿಲ್ಲ. ಬರಿಗೈಯಲ್ಲಿ ಮರಳಿದ ಅವರೆಂದರು –



4 ಶಿಷ್ಯಂದಿರು ಹೋಗಿ ಸತ್ತ ನಾಯಿಯ ಶವವನ್ನು ಹೊತ್ತು ತಂದರು.
ವಿಶ್ವಾಮಿತ್ರರಿಗೆ ದುಃಖ, ಕೋಪ ಉಕ್ಕಿ ಬಂತು.



5 ಸ್ವರ್ಗದಲ್ಲಿ ದೇವತೆಗಳ ಅಧಿಪತಿಯಾದ ಇಂದ್ರ ವಿಲಾಸದಲ್ಲಿ ಮುಳುಗಿದ್ದ.

6 ವಿಶ್ವಾಮಿತ್ರನು ದೇವತೆಗಳಿಗೆ ಸತ್ತ ನಾಯಿಯ ಮಾಂಸವನ್ನು ಅರ್ಪಿಸಲು ಹೊರಟಿದ್ದಾನೆ ಎಂಬ ಸುದ್ದಿ ಸ್ವರ್ಗವನ್ನು ತಲುಪಿತು.



7



8 ಇಂದ್ರ, ಗಿಡುಗನ ರೂಪದಲ್ಲಿ ವಿಶ್ವಾಮಿತ್ರನಿದ್ದ ಸ್ಥಳಕ್ಕೆ ಹೊರಟುಹೋದ. ಅವರ ಶಿಷ್ಯಂದಿರ ಕೈಯಲ್ಲಿದ್ದ ನಾಯಿಯ ಮಾಂಸದ ಪಾತ್ರೆಯನ್ನು ಅವನು ಮಿಂಚಿನಂತೆ ಅಪಹರಿಸಿದ.

9 ವಿಶ್ವಾಮಿತ್ರನು ದಿವ್ಯದೃಷ್ಟಿಯಿಂದ, ಆ ಗಿಡುಗ ನಿಜವಾಗಿ ಇಂದ್ರನೇ ಎಂಬುದನ್ನು ಅರಿತ. ಅವನು ಕೋಪಗೊಂಡು...

10 ವಿಶ್ವಾಮಿತ್ರನ ಕೋಪ, ಶಾಪ ಎರಡೂ ಪ್ರಸಿದ್ಧವಲ್ಲವೇ? ಹೆದರಿಹದ ಇಂದ್ರ ನಾಯಿಯ ಮಾಂಸವನ್ನು ಅಮೃತವನ್ನಾಗಿ ಪರಿವರ್ತಿಸಿದ. ಇದು ವಿಶ್ವಾಮಿತ್ರನ ಕೋಪವನ್ನು ಮತ್ತಷ್ಟು ಹೆಚ್ಚಿಸಿತು.


ಋಷಿಗಳೆ! ದಯಟ್ಟು ನನ್ನನ್ನು ಶಪಿಸಬೇಡಿ. ನಿಮಗಾಗಿ ನಾನು ಅಮೃತವನ್ನು ತಂದಿದ್ದೇನೆ. ಇದನ್ನು ಸ್ವೀಕರಿಸಿ.
ನನಗೆ ನಾಯಿ ಮಾಂಸವನ್ನು ಹಿಂದಿರುಗಿಸು. ನನಗೆ ಅಮೃತ ಬೇಕಾಗಿಲ್ಲ.
ಋಷಿಗಳೆ, ಕೃಪೆ ತೋರಿ!


11
ನಿನ್ನ ಅಮೃತವನ್ನು ನಾನು ಮತ್ತು ನನ್ನ ಶಿಷ್ಯಂದಿರು ಮಾತ್ರ ಸೇವಿಸಿ ಸುಖ ಪಡಬೇಕೆಂದು ನೀನು ಬಯಸಿದ್ದೀಯಾ? ನಾನು ಆ ರೀತಿ ಬಯಸುವ ಕೀಳು ವ್ಯಕ್ತಿಯಲ್ಲ. ಬರಗಾಲ ಹಾಗೂ ಬೇಸಿಗೆಯ ಬೇಗೆಯಿಂದ ಜನರು ತತ್ತರಿಸಿ ಹೋಗಿದ್ದಾರೆ. ಹಸುಕರುಗಳೂ ಸತ್ತುಹೋದವು. ಇದಕ್ಕೆಲ್ಲ ನೀನೇ ಕಾರಣ. ನನಗೆ ನಾಯಿಯ ಮಾಂಸವಷ್ಟೇ ದೊರಕಿದೆ. ಅದನ್ನೇ ನಾನು ದೇವತೆಗಳಾದ ನಿಮಗೆ ಅರ್ಪಿಸಿದರೆ ಅದರಲ್ಲೇನಿದೆ ತಪ್ಪು?


12
ಈಗ ಬೇರೆ ದಾರಿಯೇ ಇಲ್ಲವೆಂದು ಇಂದ್ರನಿಗೆ ಅರ್ಥವಾಯಿತು.
ಓ ಮಹಾತ್ಮ! ದಯಟ್ಟು ಕೋಪಿಸಬೇಡ. ದಯವಿಟ್ಟು ನನ್ನನ್ನು ಕ್ಷಮಿಸು. ನಾನು ಈಗಲೇ ಇಲ್ಲೆಲ್ಲ ಮಳೆ ಸುರಿಸುತ್ತೇನೆ.

13
ಕೂಡಲೇ ಇಂದ್ರ ಮೋಡಗಳನ್ನು ಕರೆದ. ಅಲ್ಲಿ ಆಗ ಧಾರಾಕಾರ ಮಳೆ ಸುರಿಯಿತು. ಬರಡಾಗಿದ್ದ ಭೂಮಿ ಹಸಿರು ಹಸಿರಾಯಿತು. ಎಲ್ಲೆಲ್ಲೂ ನೆಲ ಸಮೃದ್ಧಿಯಿಂದ ನಳನಳಿಸಿತು.


14
ಗಂಡಸರು, ಹೆಂಗಸರು, ಮಕ್ಕಳು ದನಕರುಗಳೊಂದಿಗೆ ತಮ್ಮ ತಮ್ಮ ಪ್ರದೇಶಕ್ಕೆ ಹಿಂದಿರುಗಿದರು.
ವಿಶ್ವಾಮಿತ್ರ ಋಷಿಗಳಿಗೆ ಜಯವಾಗಲಿ!
ವಿಶ್ವಾಮಿತ್ರ ಋಷಿಗಳು ತಮ್ಮ ಶಿಷ್ಯಂದಿರೊಡನೆ ಆ ಅಮೃತವನ್ನೇ ಸೇವಿಸಬಹುದಾಗಿತ್ತು. ಆದರೆ ಅವರ ಅನುಕಂಪ, ಕರುಣೆಗಳಿಂದಾಗಿ ನಮ್ಮ ಕಷ್ಟಗಳೆಲ್ಲ ದೂರವಾಯಿತು. ಮತ್ತೆ ನಮ್ಮ ಭೂಮಿ ಸಮೃದ್ಧವಾಯಿತು!
ವಿಶ್ವಾಮಿತ್ರ ಋಷಿಗಳಿಗೆ ಜಯವಾಗಲಿ!

ಪೊನ್ನಂಪೇಟೆ ಶ್ರೀರಾಮಕೃಷ್ಣ ಶಾರದಾಶ್ರಮದಲ್ಲಿ ವಿಶೇಷ ಕಾರ್ಯಕ್ರಮಗಳು

‘ರಥಯಾತ್ರೆ’ ಸಮಾವೇಶ

ಸ್ವಾಮಿ ವಿವೇಕಾನಂದರ 150ನೇ ಜನ್ಮಶತಮಾನೋತ್ಸವದ ಅಂಗವಾಗಿ ಕರ್ನಾಟಕದಾದ್ಯಂತ ಅತ್ಯದ್ಭುತವಾಗಿ ನಡೆದ **‘ಸ್ವಾಮಿ ವಿವೇಕಾನಂದ ರಥಯಾತ್ರೆ’**ಯ ಸಂಯೋಜಕರ ಹಾಗೂ ಸ್ವಯಂಸೇವಕರ ಎರಡನೇ ಸಮ್ಮೇಳನವು ಅಕ್ಟೋಬರ್ 8ರಂದು ನಡೆಯಿತು. ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳು, ರಾಮ ಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ಆಶ್ರಮಗಳ ಸಂನ್ಯಾಸಿಗಳು, ಇತರ ಸತ್ಸಂಗ ಕೇಂದ್ರಗಳ ಸದಸ್ಯರು ಹಾಗೂ ಇತರ ಸ್ವಯಂಸೇವಕರು, ವಿವಿಧ ಜಿಲ್ಲೆಗಳಿಂದ ಬಂದ ಸುಮಾರು 100 ಮಂದಿ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ವಿವಿಧ ಸಮಿತಿಗಳ ಹಾಗೂ ಆಶ್ರಮ, ಸತ್ಸಂಗ ಕೇಂದ್ರಗಳ ಮೂಲಕ ನಡೆದ ರಥಯಾತ್ರೆಯ ನಡೆದ ವಿವರಗಳನ್ನು ಹಂಚಿಕೊಂಡು, ಮುಂದೆ ಮಾಡಬೇಕಾದ ಕಾರ್ಯಗಳ ಬಗ್ಗೆ ಚರ್ಚೆ ನಡೆಸಲಾಯಿತು.

ಮೂರು ದಿನಗಳ ಆಧ್ಯಾತ್ಮಿಕ ಶಿಬಿರ

ಪೊನ್ನಂಪೇಟೆಯಲ್ಲಿ ನಿರ್ಮಾಣಗೊಂಡಿರುವ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರದ 5 ನೇ ವಾರ್ಷಿಕೋತ್ಸವದ ಅಂಗವಾಗಿ ಅಕ್ಟೋಬರ್ 9 ರಿಂದ 11ರ ವರೆಗೆ ಭಕ್ತರಿಗಾಗಿ ಮೂರು ದಿನಗಳ ಆಧ್ಯಾತ್ಮಿಕ ಶಿಬಿರ ಜರುಗಿತು. ಸುಮಾರು 150 ಮಂದಿ ಭಕ್ತರು ಶಿಬಿರಾರ್ಥಿಗಳಾಗಿ ಭಾಗವಹಿಸಿದ್ದರು. ಶಿಬಿರದಲ್ಲಿ ಭಜನೆ, ಧ್ಯಾನ, ಸರಳ ವ್ಯಾಯಾಮ, ಪ್ರವಚನ, ವೀಡಿಯೋ ಪ್ರದರ್ಶನ, ‘ವಚನ ವೇದ’ದ ಪಠನ ಮೊದಲಾದ ವೈವಿಧ್ಯಮಯ ಚಟುವಟಿಕೆಗಳಿದ್ದವು. ಸ್ವಾಮಿ ಜಗದಾತ್ಮಾನಂದಜಿ, ಸ್ವಾಮಿ ಚಿನ್ಮಯಾನಂದಜಿ, ಸ್ವಾಮಿ ರಾಘವೇಶಾನಂದಜಿ, ಸ್ವಾಮಿ ತತ್ತ್ವರೂಪಾನಂದಜಿ, ಸ್ವಾಮಿ ಮುಕ್ತಿದಾನಂದಜಿ, ಮೊದಲಾದವರು ಪ್ರವಚನ ನೀಡಿದರು. ಪ್ರವಚನಗಳಲ್ಲಿ ದಿವ್ಯತ್ರಯರ ಜೀವನ - ಸಂದೇಶ, ಆಧ್ಯಾತ್ಮಿಕ ಸಾಧನೆ, ಮನಸ್ಸಿನ ನಿಗ್ರಹ ಮೊದಲಾದ ವಿಷಯಗಳಿದ್ದವು.



ಮಂಗಳೂರು ರಾಮಕೃಷ್ಣ ಮಠದಲ್ಲಿ ಮೌಲ್ಯಶಿಕ್ಷಣ ಕಾರ್ಯಕ್ರಮ

ಮಂಗಳೂರು ರಾಮಕೃಷ್ಣ ಮಠದಲ್ಲಿ ಕಾಲೇಜು ಉಪನ್ಯಾಸಕರಿಗಾಗಿ, ಬಿ.ಎಡ್.ವಿದ್ಯಾರ್ಥಿಗಳಿಗಾಗಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಮೂರು ದಿನಗಳ ‘‘ಮೌಲ್ಯ ಶಿಕ್ಷಣ ಕಾರ್ಯಾಗಾರ’’ವು ಸೆಪ್ಟೆಂಬರ್ 9 ರಿಂದ 11ರ ವರೆಗೆ ನಡೆಯಿತು. ಮೊದಲ ದಿನದಂದು ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಶ್ರೀ ಆರ್.ವಿ.ದೇಶಪಾಂಡೆಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅನಂತರ ನಡೆದ ‘ಪ್ರಜ್ಞಾ’ - ಮೌಲ್ಯವರ್ಧನ ತರಬೇತಿ ಕಾರ್ಯಕ್ರಮದಲ್ಲಿ ಸುಮಾರು 450 ಮಂದಿ ಉಪನ್ಯಾಸಕರು ಪಾಲ್ಗೊಂಡಿದ್ದರು. ಎರಡನೇ ದಿನ ನಡೆದ ‘ಮೇಧಾ’ ಮೌಲ್ಯ ಶಿಕ್ಷಣ ಕಾರ್ಯಾಗಾರದಲ್ಲಿ ಸುಮಾರು 500 ಮಂದಿ ಬಿ.ಎಡ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಮೂರನೇ ದಿನ ನಡೆದ ‘ಶ್ರದ್ಧಾ’ ಮೌಲ್ಯವನ್ನು ಕುರಿತ ವಿಚಾರ ಸಂಕಿರಣದಲ್ಲಿ ಸುಮಾರು 550 ಮಂದಿ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮಗಳಲ್ಲಿ ಬೇಲೂರು ಮಠದ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯರಾಗಿರುವ ಸ್ವಾಮಿ ಸರ್ವಪ್ರಿಯಾನಂದಜಿ, ಬೆಂಗಳೂರು ರಾಮಕೃಷ್ಣ ಮಠದ ಸ್ವಾಮಿ ಮಂಗಳನಾಥಾನಂದಜಿ, ಬೆಂಗಳೂರು ‘ಮಾನಸ’ ತರಬೇತಿ ಕೇಂದ್ರದ ನಿರ್ದೇಶಕರಾಗಿರುವ ಪ್ರೊ.ರಘೋತ್ತಮ ರಾವ್ ಹಾಗೂ ನಿವೃತ್ತ ವಿಜ್ಞಾನಿ ಡಾ.ವಿಶ್ವನಾಥ್ ಭಾಷಣ ಮಾಡಿದರು. ಮೂರು ದಿನಗಳ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಎಲ್ಲ ಅಭ್ಯರ್ಥಿಗಳಿಗೆ ಗ್ರಂಥಗಳು ಹಾಗೂ ಲೇಖನ ಸಾಮಗ್ರಿಗಳನ್ನು ಉಡುಗೊರೆಯಾಗಿ ನೀಡಲಾಯಿತು.

Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

TRAVEL PAGE

ANDAMAN ISLANDS - 7 Days
Nov / Jan / Feb

SINGAPORE MALAYSIA THAILAND - 11 Days
Jan / Feb

DUBAI - 5 Days
Nov / Jan / Feb

KAILASH MANASA SAROVAR - 14 Days
May / June / July

ಶ್ರೀ ಹನ್ಸಾ ಟ್ರಾವೆಲ್ಸ್

SHRI HANSAA TRAVELS

RECOGNISED BY DEPARTMENT OF TOURISM, GOVT. OF KARNATAKA

No. 640, 40th Cross (Near Prabha Eye Clinic), 8th Block, Jayanagar, Bangalore - 560 070.
☎: (080) 26543891 / 26643276 Mobile : (0) 9341415612 / 9341215612
e-mail : hansaatravels@gmail.com web : www.hansaatravels.com

VIVEKA PRABHA (KANNADA MONTHLY)
November 2014, Vol.15, No.11, No. of pages : 44

Registered With Registrar of News Papers Of India under 72356/2000.postal Regn.No.KA/SK/MYS/480/ 2012-14. LICENCED TO POST W.P.P.AT YADAVAGIRI MYSORE 570 020,VIDE LICENCE NO.SK/WPP/MYS/155/2013-15

Basappa Memorial Hospital

A 250 Bedded Multi-Speciality Hospital Extends the Following Specialised Services

- Computerised Cardiac Catheterisation Lab (Cath Lab)
- All Open Heart & Vascular Surgical Facilities
- Kidney Transplantation Facilities both for Live and Cadavaric
- Trauma Care, Critical Care, General Madicine, General Surgery, Laparoscopic Procedures, Neurology & Neruosurgery, Urology, Obstetrics & Gynaecology, Paediatrics, Lab & Blood Bank, Orthopedics, Plastic and Reconstructive surgery.

FOR EMERGENCIES CALL : 2500101 / 2500671 / 2500771

FOR MORE INFORMATION CALL: 2512401/2511671/2511771

#22/B, Vinoba Road, Jayalakshmipuram, Mysore - 12.

Printed at mayur graphics,Bangalore